
ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ ೧೧ ಸಂಚಿಕೆ ೩೬-೩೭ ಸೆಪ್ಟೆಂಬರ್ ೨೪ - ಅಕ್ಟೋಬರ್ ೧ ೧೯೮೯ ರೂ. ೧-೨೫

ರಾಜ ಭವನ ಪಿಕೆಟಿಂಗ್



ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿಕೂಲಿಗಾರರ ಸಂಘದ ನೇತೃತ್ವದಲ್ಲಿ, ಸೆಪ್ಟೆಂಬರ್ 27ರಿಂದ ಆರುದಿನ ರಾಜ್ಯದ ವಿವಿಧ ಜಿಲ್ಲೆಗಳಿಂದ ರೈತರು, ಕೃಷಿ ಕೂಲಿಗಾರರು ತಂಡ-ತಂಡಗಳಾಗಿ ತಮ್ಮ ಮೂರು ಬೇಡಿಕೆಗಳಿಗಾಗಿ ರಾಜಭವನ ಪಿಕೆಟಿಂಗ್ ನಡೆಸಲಿದ್ದಾರೆ. ಪ್ರತಿಯೊಂದು ತಂಡಕ್ಕೆ ದೇಶದ ರೈತ ಹೋರಾಟಗಳ ಇತಿಹಾಸದಲ್ಲಿ ಅಮರರಾದ ಮುಂದಾಳುಗಳ ಹೆಸರಿಡಲಾಗಿದೆ. ತಂಡಗಳ ಹೆಸರು, ಅವುಗಳಲ್ಲಿ ಭಾಗವಹಿಸುವ ಜಿಲ್ಲೆಗಳ ವಿವರ ಹೀಗಿದೆ.

27.9.89 'ಸಹಜಾನಂದ ಸರಸ್ವತಿ' ಕೋಲಾರ	28.9.89 'ಎ.ಕೆ.ಗೋಪಾಲನ್' ಗುಲ್ಬರ್ಗಾ-ಬೀದರ್ ಚಿತ್ರದುರ್ಗ
29.9.89 'ಪಿ.ಸುಂದರಯ್ಯ' ಬಳ್ಳಾರಿ, ತುಮಕೂರು, ಉತ್ತರ ಕನ್ನಡ, ಕೊಡಗು	30.9.89 'ಮಝ್ಹರ್ ಅಹ್ಮದ್' ಬಿಜಾಪುರ, ಧಾರವಾಡ ಮೈಸೂರು, ಮಂಡ್ಯ
1.10.89 'ಹರೇಕೃಷ್ಣ ಕೋನಾರ್' ರಾಯಚೂರು, ಬೆಳಗಾಂ, ಚಿಕ್ಕಮಗಳೂರು ಹಾಸನ	2.10.89 'ಎನ್.ಎಲ್.ಉಪಾಧ್ಯಾಯ ಬೆಂಗಳೂರು ದಕ್ಷಿಣ ಕನ್ನಡ, ಶಿವಮೊಗ್ಗ, ಸಿ.ಐ.ಟಿ.ಯು. ಸೋದರ ಸಂಘಟನೆಗಳು

ವಿಶೇಷ ಲೇಖನ ಪುಟ 4 ನೋಡಿ

ಪಾಲಿಟ್ ಬ್ಯೂರೋ ಕರೆ

ಬೆಲೆಯೇರಿಕೆ, ನಿರುದ್ಯೋಗದ ವಿರುದ್ಧ ತೀವ್ರ ಸಾಮೂಹಿಕ ಹೋರಾಟ

ಸೆಪ್ಟೆಂಬರ್ 26 ರಿಂದ ಪಾರಾಂಚರಣಿ

'ಭಾರತ್‌ಬಂದ್'ನ ಯಶಸ್ಸು ವಿರೋಧ ಪಕ್ಷಗಳ ಒತ್ತಾಯಕ್ಕೆ ದೊರೆತಿರುವ ಅನುಮೋದನೆ. ಇದು ರಾಜೀವಗಾಂಧಿ ಸರ್ಕಾರದ ರಾಜೀನಾಮೆ ವಿರುದ್ಧ ಹೋರಾಟ ಮುಂದುವರೆಸುವಲ್ಲಿ ಒಂದು ಹೊಸ ಭರವಸೆ ಮೂಡಿಸಿದೆ. ಆದರೆ ಜಾತ್ಯತೀತ ವಿರೋಧ ಪಕ್ಷಗಳು ಇದರಿಂದ ಸರಿಯಾದ ಪಾಠ ಕಲಿತು, ತಮ್ಮ ದೌರ್ಬಲ್ಯಗಳನ್ನೆಲ್ಲಾ ನೀಗಿಕೊಂಡು ಮುಂಬರುವ ಚುನಾವಣಾ ಹೋರಾಟದ ದಿಕ್ಕಿನಲ್ಲಿ ಮುಂದುವರೆಯಬೇಕೆಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಹೇಳಿದೆ.

ಎರಡು ದಿನಗಳ ಸಭೆಯಲ್ಲಿ ದೇಶದ ರಾಜಕೀಯ ಹಾಗೂ ಆರ್ಥಿಕ ಸನ್ನಿವೇಶವನ್ನು ಪರಿಶೀಲಿಸಿದ ನಂತರ ಸೆಪ್ಟೆಂಬರ್ 16ರಂದು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಈ ಅಂಶ ತಿಳಿಸಲಾಗಿದೆ. ಬಂದ್‌ನ ಸಮಯದಲ್ಲಿ ಬಿ.ಜೆ.ಪಿ.ಯ ವಿಚ್ಛಿದ್ರಕಾರಿ ಪಾತ್ರದತ್ತ ದೇಶದ ಜಾತ್ಯತೀತ ಶಕ್ತಿಗಳ ಗಮನ ಸೆಳೆಯುತ್ತಾ ಅದಕ್ಕೆ ಕಾಂಗ್ರೆಸ್(ಐ) ಸೋಲಿಸುವ ಆಸಕ್ತಿಯಿದ್ದಂತಿಲ್ಲ. ಅದರ ಗುರಿ ಕಾಂಗ್ರೆಸ್(ಐ)-ವಿರೋಧಿ ಶಕ್ತಿಗಳ ಕ್ರೋಢೀಕರಣವಲ್ಲ, ಬದಲಾಗಿ ಹಿಂದೂ ಶಕ್ತಿಗಳ ಕ್ರೋಢೀಕರಣ ಎಂದು ಪತ್ರಿಕಾ ಸಮ್ಮೇಳನದಲ್ಲಿ ಪಾಲಿಟ್ ಬ್ಯೂರೋ ಹೇಳಿಕೆಯನ್ನು ಬಿಡುಗಡೆ ಮಾಡುತ್ತಾ ಪ್ರಧಾನ ಕಾರ್ಯದರ್ಶಿ ಕಾಂ|| ಇ. ಎಂ. ಎಸ್.ನಂಬೂದಿರಿಪ್ಪಾಡ್ ತಿಳಿಸಿದರು.

ಬಂದ್‌ನ ಸಮಯದಲ್ಲಿ ಜನತೆಯಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿ ಬಹಳ ಚೆನ್ನಾಗಿ ಅಭಿವ್ಯಕ್ತಗೊಂಡಿದೆ. ಆದರೆ ಬಂದನ್ನು ಯಶಸ್ವಿಗೊಳಿಸಿದ ಜನತೆಯ ಮನೋಭಾವವನ್ನು ಜಾತ್ಯತೀತ ವಿರೋಧ ಪಕ್ಷಗಳು ಅರಿತುಕೊಳ್ಳುವುದು, ಅದಕ್ಕೆ ಕಿವಿಗೊಡುವುದು ಅತ್ಯಗತ್ಯ. ಬಂದ್‌ನ ಹಿಂದಿದ್ದ ಪ್ರೇರಕ ಶಕ್ತಿ ಎಡ ಮತ್ತು ಜಾತ್ಯತೀತ ವಿರೋಧ ಪಕ್ಷಗಳ ಜಂಟಿ ಕಾರ್ಯಾಚರಣೆ ಎಂಬುದನ್ನು ಬಂದ್ ನೇರವಾಗಿ ಪ್ರಕಟಗೊಳಿಸಿದೆ. ಎಲ್ಲೆಡೆಯಲ್ಲಿ ಜನತೆಯನ್ನು ಬೀದಿಗಿಳಿಸಿದ್ದು ಈ ಪಕ್ಷಗಳ ಬಲ, ಐಕ್ಯ ಕಾರ್ಯಾಚರಣೆ ಮತ್ತು ಸಮಾನ ತಿಳುವಳಿಕೆ.

ಚುನಾವಣೆಯ ಮೊದಲ ಹೋರಾಟಗಳಲ್ಲಿ ಎಡಶಕ್ತಿಗಳ ಬೆಂಬಲದ ಅಗತ್ಯದ ಬಗ್ಗೆ ಹೇಳುತ್ತಾ ಪಾಲಿಟ್‌ಬ್ಯೂರೋ ಹೇಳಿಕೆ "ಬಂದ್‌ನ ಯಶಸ್ಸಿನಲ್ಲಿ ಎಡಪಕ್ಷಗಳು ಪ್ರಧಾನ ಪಾತ್ರವಹಿಸಿದವು. ತಮ್ಮೆಲ್ಲಾ ಶಕ್ತಿಯನ್ನು, ತಮ್ಮ ನೇತೃತ್ವದ ಸಾಮೂಹಿಕ ಸಂಘಟನೆಗಳ, ಕಾರ್ಮಿಕ ಸಂಘಗಳ, ರೈತ ಸಂಘಟನೆಗಳ, ಬಲವನ್ನೆಲ್ಲಾ ಮತ್ತು ವಿವಿಧ ಆಯಕಟ್ಟಿನ ವಲಯಗಳಲ್ಲಿ ಹಲವಾರು ಜನವಿಭಾಗಗಳ ಬೆಂಬಲವನ್ನು ಅವು ಬಂದ್‌ನ

ಪುಟ 8ಕ್ಕೆ

ರಾಷ್ಟ್ರಪತಿ ಆಳ್ವಿಕೆಯ ಮುಂದುವರಿಕೆ ನ್ಯಾಯಸಮ್ಮತವಲ್ಲ

ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೆಟ್ ಖಂಡನೆ

ಕರ್ನಾಟಕದಲ್ಲಿ ರಾಷ್ಟ್ರಪತಿ ಆಳ್ವಿಕೆ ಮುಂದುವರೆಸುವುದು ನ್ಯಾಯ ಸಮ್ಮತವಲ್ಲ ಎಂದು ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಲ ಖಂಡಿಸಿದೆ. ಇದರ ವಿರುದ್ಧ ಪ್ರತಿಭಟನಾ ಚಳುವಳಿಯನ್ನು ಹೂಡಬೇಕೆಂದು ಜಾತ್ಯತೀತ ವಿರೋಧ ಪಕ್ಷಗಳಿಗೆ ಅದು ಕರೆ ನೀಡಿದೆ.

ಸಿ.ಪಿ.ಐ. (ಎಂ) ನ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಲಿ 12-9-1989 ರಂದು ಸೇರಿ ರಾಜ್ಯಪಾಲರ ಆಡಳಿತದಲ್ಲಿನ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು, ಅಗತ್ಯ ವಸ್ತುಗಳ 'ಬೆಲೆ' ಏರಿಕೆಯನ್ನು, ಭೂಮಿಗಾಗಿ ಪಟ್ಟಾಕ್ಕಾಗಿ ನಡೆಯುತ್ತಿರುವ ರೈತ ಚಳುವಳಿಯನ್ನು ವಿಮರ್ಶಿಸಿತು.

ಇನ್ನೂ ಆರು ತಿಂಗಳ ಕಾಲ ರಾಜ್ಯದಲ್ಲಿ, ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಮುಂದುವರಿಸುವುದಾಗಿಯೂ ಮತ್ತು ನಡೆಯಬೇಕಿರುವ ರಾಜ್ಯದ ವಿಧಾನಸಭಾ ಚುನಾವಣೆಯನ್ನು ಸಧ್ಯ ನಡೆಸಲಾಗುವುದಿಲ್ಲವೆಂದೂ ರಾಜ್ಯಪಾಲರು ಮಾಡಿದ ಬಹಿರಂಗ ಹೇಳಿಕೆಯನ್ನು ಕಾರ್ಯದರ್ಶಿ ಮಂಡಲಿಯು ತೀವ್ರವಾಗಿ ಖಂಡಿಸಿತು. ಕರ್ನಾಟಕದಲ್ಲಿ, ಜನಜೀವನ ಸುಗಮವಾಗಿರುವಾಗ, ರಾಜ್ಯದಲ್ಲಿ, ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಮುಂದುವರಿಸುವುದು ಯಾವ ರೀತಿಯಿಂದಲೂ ನ್ಯಾಯ ಸಮ್ಮತವಲ್ಲ. ರಾಜ್ಯಪಾಲರ ಈ ಕ್ರಮ ಸಂಸದೀಯ ಪ್ರಜಾಪ್ರಭುತ್ವದ ಕೊಲೆ, ಮತ್ತು ಕೋಪೋದ್ರೇಕ ಗೊಳಿಸುವಂತದ್ದು. ರಾಜ್ಯದಲ್ಲಿ ಕಾಂಗ್ರೆಸ್‌ನವರು ಅವಧಿಗಿಂತ ಒಂದುದಿನ ಹೆಚ್ಚಾಗಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಮುಂದುವರಿಸುವುದಿಲ್ಲ ಎಂದು ಕಿರುಚಿ ಸಾರುತ್ತಿದ್ದುದು ಕುಚೋದ್ಯವಾದ್ದಲ್ಲದೆ ಮತ್ತೇನೂ ಅಲ್ಲ. ಚುನಾವಣೆಯನ್ನು ನಡೆಸಲಿಕ್ಕೆ ಮತ್ತು

ಪುಟ 8ಕ್ಕೆ

ಅಲಿಪ್ತ ಆಂದೋಲನವನ್ನು ದಿಕ್ಕುಗೆಡಿಸುವ ಯತ್ನ ವಿಫಲ

ಅಲಿಪ್ತ ಆಂದೋಲನದ ಬೆಲ್ಗ್ರೇಡ್ ಸಮ್ಮೇಳನ ಆಂದೋಲನವನ್ನು ಅದರ ಮೂಲಭೂತ ಸಾಮ್ರಾಜ್ಯಶಾಹಿ-ವಿರೋಧಿ ನಿಲುವುಗಳಿಂದ ದೂರ ಸೆಳೆಯಲು ಪ್ರಯತ್ನಿಸಿದವರು ಮತ್ತು ರಾಷ್ಟ್ರೀಯ ವಿಮೋಚನೆ, ಸ್ವಯಂನಿರ್ಧಾರ, ವಸಾಹತುಶಾಹಿಯ ಅಂತ್ಯ ಹಾಗೂ ನವ ವಸಾಹತುಶಾಹಿ ಪ್ರಾಬಲ್ಯದ ಅಂತ್ಯದ ಅದರ ಮೂಲ ಪರಂಪರೆಯನ್ನು ಮುಂದುವರೆಸಬೇಕು ಎಂದು ಬಯಸುವವರ ನಡುವಿನ ಹೋರಾಟದ ಕಣವಾಯಿತು.

ಇತ್ತೀಚೆಗೆ ಅಲಿಪ್ತ ಆಂದೋಲನವನ್ನು "ಸೈದ್ಧಾಂತಿಕ ಅಂಶಗಳಿಂದ ಮುಕ್ತಗೊಳಿಸಬೇಕು" ಎಂಬ ಬಗ್ಗೆ ಕೆಲವು ವಲಯಗಳಿಂದ ಜೋರಾದ ಪ್ರಯತ್ನ ನಡೆಯುತ್ತಿದೆ. ಈ ಸಮ್ಮೇಳನದ ಮೊದಲು 'ಉದ್ಬುದ್ಧ ಘೋಷಣೆಗಳ ಪುನರಾವರ್ತನೆ ಬಿಟ್ಟು, ಸಾಲದ ಹೊರೆ, ಬಹುಮುಖ ವ್ಯಾಪಾರ, ಮೂರನೇ ಜಗತ್ತಿನ ದೇಶಗಳ ವಿರುದ್ಧ ಮುಂದುವರೆದ ದೇಶಗಳ ಪಕ್ಷಪಾತ ಇತ್ಯಾದಿ ಬಗ್ಗೆ ಗಮನ ಕೇಂದ್ರೀಕರಿಸಬೇಕು' ಎಂಬ ಕೂಗನ್ನು ಎಬ್ಬಿಸಲಾಗಿತ್ತು. ವಾರ್ಸಾಸಂಧಿ ಮತ್ತು ನ್ಯಾಟೋ ಕೂಟಗಳ ನಡುವೆ ಸಂಘರ್ಷದ ಬದಲು ಮಾತುಕತೆಯ, ಗೆಳೆತನದ 'ಹೊಸಯುಗ' ಆರಂಭವಾಗಿರುವಾಗ ಅಲಿಪ್ತ ದೇಶಗಳು ಸಾಮ್ರಾಜ್ಯಶಾಹಿಗಳೊಡನೆ ಘರ್ಷಣೆಯ ಬಗ್ಗೆ ಮಾತನಾಡದೆ, ಬದಲಾಗಿ ಪಕ್ವಗಾದ ಸಮಸ್ಯೆಗಳಿಗೆ ತಮ್ಮನ್ನು ಹೊಂದಿಸಿಕೊಳ್ಳಬೇಕೆಂದು ಕೆಲವು ಅಲಿಪ್ತ ಮುಖಂಡರ ವಾದ.

ಹೀಗೆ ಮಾತುಕತೆಗಳ ಹೊಸ ಯುಗವೊಂದು ಆರಂಭವಾಗಿದೆಯೆಂದು ಪ್ಯಾಲೆಸ್ಟೈನ್, ದಕ್ಷಿಣ ಆಫ್ರಿಕಾ, ನಿಕರಾಗುವಾ, ಕಂಪೂಚಿಯಾ ಮತ್ತಿತರ ದೇಶಗಳ ಜನತೆಗೆ ಹೇಳುವುದು, ಅಮೆರಿಕನ್ ಸಾಮ್ರಾಜ್ಯಶಾಹಿ ಬಂಡುಕೋರರಿಗೆ ಬಹಿರಂಗ ನೆರವು ನೀಡುತ್ತಿರುವಾಗ ಅಫ್‌ಘಾನ್ ಜನತೆಗೆ ಈ 'ಹೊಸ ಯುಗ'ದ ಉಪದೇಶ ನೀಡುವುದು ಒಂದು ಪೈಶಾಚಿಕ ಧೂರ್ತತನ. ಸೂಪರ್ 301ರ ಬೆದರಿಕೆಯೊಡ್ಡಿ ಶರಣಾಗತರಾಗಬೇಕೆಂದು ಅಮೆರಿಕನ್ ಸಾಮ್ರಾಜ್ಯಶಾಹಿಯ ಬಹಿರಂಗ ಒತ್ತಾಯ ಎದುರಿಸುತ್ತಿರುವ ಭಾರತದ ಜನತೆಗೆ ಹೀಗೆಂದು ಹೇಳುವುದು ಕೂಡಾ ಕಡಿಮೆ ಉದ್ಧಟತನವೇನಲ್ಲ. ಅದೂ ದೊಡ್ಡ ಶಕ್ತಿಗಳ ನಡುವೆ 'ವೈಮನಸ್ಯ ಪರಿಹಾರ'ದ ಪ್ರಕ್ರಿಯೆ ಕಮ್ಮಿ ಮತ್ತು ಮಧ್ಯಮಾಂತರದ ಕ್ಷಿಪಣಿಗಳ ಕಡಿತದಿಂದ ಮುಂದೆ ಸಾಗಲು ಸಾಧ್ಯವಾಗಿಲ್ಲ ಎಂದು ಈಗ ಕಂಡು ಬಂದಿರುವಾಗ!

ವಾಸ್ತವವಾಗಿ 'ಉದ್ಬುದ್ಧ ಘೋಷಣೆ' ಬಿಟ್ಟುಬಿಡಬೇಕೆನ್ನುವವರು ಆ ನೆಪದಲ್ಲಿ, ಸಾಮ್ರಾಜ್ಯಶಾಹಿ ವಿರೋಧಿ ನಿಲುವು ಬಿಟ್ಟು, ಸಾಮ್ರಾಜ್ಯಶಾಹಿಗಳೊಡನೆ ಶಾಂತಿಗಾಗಿ ದಾವೆ ಹೂಡಿ ಏನೆಲ್ಲಾ ಚೌಕಾಸಿ ಸಾಧ್ಯವೋ ಮಾಡಿಕೊಳ್ಳೋಣ ಎಂದು ಹೇಳುತ್ತಿದ್ದಾರಷ್ಟೆ.

ಈ ಸಮರ ಮೊದಲಿನಿಂದಲೇ ಆರಂಭವಾಯಿತು. ಸಮ್ಮೇಳನದ ಆತಿಥೇಯ ದೇಶ ಯುಗೋಸ್ಲಾವಿಯಾದ ಸಮಾಯ ಸಾಧಕ ನೀತಿಗಳು, ಸಾಮ್ರಾಜ್ಯ ... ಅದರ ... ಸರ್ಬಿಯಾ ... ದಂತಹ ಅಮೆರಿಕದ ... ವಹಿಸುವ ದೇಶಗಳನ್ನು ಆಂದೋಲನ ... 'ಸ್ವಾಗತ ಗೊಳಿಸಿದ' ... ಸೇರಿ ಆಂದೋಲನದ ಮೂಲ

ಪುಟ 8ಕ್ಕೆ

ದೆಹಲಿಯಲ್ಲಿ ಮಹಿಳೆಯರ ರ್‍ಯಾಲಿ

ಪುಟ 3

ಸೆಪ್ಟೆಂಬರ್ 28: ಕೋಮುವಾದ-ವಿರೋಧಿ ದಿನ

"ವಿದ್ಯಾರ್ಥಿ ಗಲಭೆ"ಗಳಿಗೆ ಜನತೆಯ ಬೆಂಬಲವಿಲ್ಲ

-ಸೂರ್ಯನಾರಾಯಣರಾವ್



ಅಖಿಲ ಚೀಣಾ ಕಾರ್ಮಿಕ ಸಂಘಗಳ ಒಕ್ಕೂಟ (ಎ.ಸಿ.ಎಫ್.ಟಿ.ಯು)ದ ಆಹ್ವಾನದ ಮೇರೆಗೆ ಸಿ.ಐ.ಟಿ.ಯು.ನ ಐವರು ಸದಸ್ಯರ ನಿಯೋಗವೊಂದು ಜುಲೈ 12 ರಿಂದ 28ರವರೆಗೆ ಚೀಣಾಕ್ಕೆ ಭೇಟಿ ನೀಡಿತ್ತು. ಸಿ.ಐ.ಟಿ.ಯು. ಅಖಿಲಭಾರತ ಉಪಾಧ್ಯಕ್ಷ ಹಾಗೂ ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಕಾಂ॥ ಎಸ್ ಸೂರ್ಯನಾರಾಯಣರಾವ್ ಈ ನಿಯೋಗದ ನೇತೃತ್ವ ವಹಿಸಿದ್ದರು. ಕಾಂ॥ ಸೂರಿಯವರು ಬೆಂಗಳೂರಿಗೆ ಹಿಂದಿರುಗಿದ ಮೇಲೆ ಅವರ ಚೀಣಾ ಭೇಟಿಯನ್ನು ಕುರಿತಾಗಿ 'ಐಕ್ಯರಂಗ' ಮಾಡಿದ ಸಂದರ್ಶನ.

೦ ಚೀಣಾಕ್ಕೆ ಭೇಟಿ ಕೊಡಲು ಆಹ್ವಾನ ಬಂದಾಗ ನಿಮ್ಮ ಭಾವನೆಗಳೇನು? 'ಐಕ್ಯರಂಗ' ಓದುಗರಿಗೆ ತಿಳಿಸುತ್ತೀರಾ?

★ ನನಗೆ ಬಹಳ ದಿನಗಳಿಂದ ಚೈನಾ ದೇಶ ನೋಡಬೇಕು. ಅಲ್ಲಿ ಆದಂಥ ಪ್ರಗತಿಯನ್ನು ಪ್ರತ್ಯಕ್ಷವಾಗಿ ಕಾಣಬೇಕೆಂಬ ಹಂಬಲ ಇತ್ತು. ಕಾರಣ ಭಾರತ ದೇಶದ ರೀತಿಯಲ್ಲಿ ಅದೂ ಪುರಾತನ ಸಂಸ್ಕೃತಿ ಇದ್ದಂಥ ರಾಷ್ಟ್ರ. ಭಾರತ ದೇಶದಂತೆ ಪರಕೀಯರ ದಬ್ಬಾಳಿಕೆಗೆ ಒಳಪಟ್ಟು, ಬಡತನದಿಂದ, ಕೈಗಾರಿಕೆಗಳಲ್ಲಿ, ಹಿಂದುಳಿದಿದ್ದಂತಹ ದೇಶ. ಜನಸಂಖ್ಯೆಯಲ್ಲಿ ಪ್ರಪಂಚದಲ್ಲೇ ಮೊದಲನೇ ದೇಶವಾಗಿ ಜನರ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಿದರು ಎಂಬುದನ್ನು ತಿಳಿಯುವ ಆಸೆ ಇತ್ತು. ನಾನು ಹೊರದೇಶಕ್ಕೆ ಸಮ್ಮೇಳನಗಳಿಗೆ ಹೋಗಿದ್ದೇನೆ. ಆದರೆ ಈ ರೀತಿಯ ಉತ್ತಮವಾದ ಒಂಧು ಅವಕಾಶ ಸಿಕ್ಕಿದ್ದು, ಅದರಲ್ಲೂ ನನ್ನನ್ನು ನಿಯೋಗದ ಮುಖಂಡನನ್ನಾಗಿಮಾಡಿದ್ದು ತುಂಬಾ ಆಶ್ಚರ್ಯವಾಯಿತು.

೦ ಚೀಣಾ ಮತ್ತು ಭಾರತ ದೇಶದ ಸಂಸ್ಕೃತಿಗೆ ಬಹಳ ಸಾಮ್ಯತೆ ಇದೆ ಎಂದು ನೀವು ಅಲ್ಲಿಗೆ ಹೋದಾಗ ಅನಿಸಿತೆ?

★ ಒಂದು ಕಾಲದಲ್ಲಿ ಬೌದ್ಧ ಮತ ಚೈನಾಕ್ಕೆ ಹೋಯಿತು. ಅಲ್ಲಿ ಬುದ್ಧ ದೇವಾಲಯಗಳು ಇವೆ. ಕ್ರಾಂತಿಯಾದ ಮೇಲೆ ಬಹಳ ಜನ ದೇವಸ್ಥಾನಗಳಿಗೆ ಹೋಗುವುದಿಲ್ಲ. ಅವರ, ನಮ್ಮ ಭಾಷೆ ಬೇರೆಯಾಗಿದೆ. ಉಡುಪು ಬೇರೆ. ಅವರ ನಮ್ಮ ರೀತಿ ರೀತಿಗಳು ಬೇರೆ-ಬೇರೆಯಾದ ಪುರಾತನ ಸಂಸ್ಕೃತಿಯಿದೆ. ನಮ್ಮಂತೆ ಅವರ ಆಹಾರ ರೀತಿ ನೀತಿ ಪಾಶ್ಚಿಮಾತ್ಯರಿಗಿಂತ ಬೇರೆಯಾಗಿದೆ. ಅವರು ಅಕ್ಕಿ ಪದಾರ್ಥಗಳನ್ನು ಜಾಸ್ತಿ ಉಪಯೋಗಿಸುತ್ತಾರೆ. ನಮ್ಮ ಹಾಗೆ.

೦ ಅಲ್ಲಿನ ರೈತ ಕಾರ್ಮಿಕರ ಬಗ್ಗೆ ಸ್ವಲ್ಪ ತಿಳಿಸುತ್ತೀರಾ?

★ ನಾವು ಶಾಂಘ್ಯಾನ ಒಂದು ಟೌನ್‌ಶಿಪ್‌ಗೆ ಭೇಟಿ ಕೊಟ್ಟಿದ್ದೆವು. ಆ ಗ್ರಾಮದ ಜನಸಂಖ್ಯೆ 2 ಸಾವಿರ. 1300 ಜನ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ಹಾಗಾದರೆ ಯಾರೂ ವ್ಯವಸಾಯ ಮಾಡುವುದಿಲ್ಲವೇ ಎಂದು ಕೇಳಿದೆ. ಒಂದು ಸಾವಿರ ಮಂದಿ ಗ್ರಾಮದವರು, 300 ಮಂದಿ ನಗರದಿಂದ ಬರುವವರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ. ವ್ಯವಸಾಯಕ್ಕೆ 30-40 ಜನ ಸಾಕು. ಎಲ್ಲಾ ಗಂಡಸರು, ಹೆಂಗಸರು ಕಾರ್ಖಾನೆಗೆ ಹೋಗಿ ಕೆಲಸ ಮಾಡುತ್ತೇವೆ ಎಂದರು.

ಅಲ್ಲಿ ಸೂರ್ಯ ಉದಯಿಸುವುದು ತಡವಾದರೂ ಬೆಳಿಗ್ಗೆ ಎದ್ದು ವ್ಯವಸಾಯ ಮಾಡಿ ಹತ್ತಿರವಿರುವ ಕಾರ್ಖಾನೆಗೆ 10 ಗಂಟೆಗೆ ಬರುತ್ತೇವೆ ಎಂದರು. ಅಲ್ಲಿಯ ಕಾರ್ಖಾನೆಯ ಕಾರ್ಮಿಕರಿಗೆ ಯಾರಿಗೇ ಆಗಲಿ ಉಡುಪುಗಳ ತಾರತಮ್ಯವಿಲ್ಲ. ಯೂನಿಫಾರಂ ಎಂಬುದಿಲ್ಲ. ಯಾವ ಉಡುಪಿನಲ್ಲಾದರೂ ಸರಿ ಕಾರ್ಖಾನೆಗೆ ಬರಬಹುದು. ವಾರದ ಒಂದು ದಿನ ರಜೆ. ಅಲ್ಲದೆ 10 ದಿನಕ್ಕೆ ಒಂದು ದಿನ ರಜಾ ಸೌಲಭ್ಯ. ಅಲ್ಲಿಯ ಮನೆಗಳು ಇಲ್ಲಿಯ ನಗರಗಳ ಮನೆಗಳಂತಿವೆ. ಗಂಡ, ಹೆಂಡತಿ ಇಬ್ಬರೂ ದುಡಿಯುತ್ತಾರೆ. ವ್ಯವಸಾಯ ಮಾಡುವುದರ ಜೊತೆಗೆ ತರಕಾರಿ ಮುಂತಾದವನ್ನು ಬೆಳೆಯುತ್ತಾರೆ. ತಮಗೆ ಸಾಕಾಗಿ ಉಳಿದದ್ದನ್ನು ಮಾರುಕಟ್ಟೆಗೆ ಸಾಗಿಸುತ್ತಾರೆ. ಕಾರ್ಖಾನೆಗಳಲ್ಲಿ ಕೆಲಸ ಮುಗಿದ ಐದು ನಿಮಿಷದಲ್ಲಿ ವ್ಯವಸಾಯದಲ್ಲಿರುತ್ತಾರಂತೆ.

ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಡುವ ಪದ್ಧತಿ ಇಲ್ಲ. ನಗರದಲ್ಲಿ ಕಂಪನಿಯವರು, ಸರ್ಕಾರದವರು ಕಟ್ಟಿಸಿ ಕೊಡುತ್ತಾರೆ. ಆದ್ದರಿಂದ ಮಕ್ಕಳು ಮದುವೆಯಾದ ತಕ್ಷಣ ಬೇರೆ ಮನೆಗೆ ಹೋಗಿಬಿಡುತ್ತಾರೆ. 'ಮಕ್ಕಳ ಅರಮನೆ' ಎಂದಿದೆ. ಅಲ್ಲಿ ಕ್ರೀಡೆ, ಸಂಗೀತ, ನೃತ್ಯ, ಚಿತ್ರಕಲೆ, ಇಂಗ್ಲೀಷ್ ಎಲ್ಲವನ್ನೂ ಹೇಳಿ ಕೊಡುತ್ತಾರೆ. ಸರಕಾರದ ನೀತಿ ಸರಿಯಿಲ್ಲವೆಂದು ಯಾರೂ ಹೇಳುವುದಿಲ್ಲ. ಅಲ್ಲಿ ರಾತ್ರಿ ಮಾರ್ಕೆಟ್‌ನಲ್ಲಿ ಮಾರಾಟಕ್ಕೆ, ತುಂಬಾ ಜನ ಓಡಾಡುತ್ತಾರೆ. ರಸ್ತೆಗಳಲ್ಲಿ ತಾವೇ ತಯಾರಿಸಿದ ವಸ್ತುಗಳನ್ನು, ತಾವೇ ಬೆಳೆದಂತ ಪದಾರ್ಥಗಳನ್ನು ಮಾರಾಟ ಮಾಡುತ್ತಾರೆ ವೈಯಕ್ತಿಕವಾಗಿ. ಇದು ದೊಡ್ಡ ರಸ್ತೆಗಳಲ್ಲಿ ರಾತ್ರಿ 11 ಗಂಟೆಯವರೆಗೆ ಇರುತ್ತದೆ. ಹೆಚ್ಚಾಗಿ ಕಂಡುಬರುವುದು ಕಲ್ಲಂಗಡಿ ಹಣ್ಣು ಮತ್ತು ಇತರ ಹಣ್ಣುಗಳನ್ನು ಮಾರುತ್ತಾರೆ. ಬಟ್ಟೆಗಳನ್ನು ಮಾರುತ್ತಾರೆ. ಇಲ್ಲಿಯ ಉಡುಪುಗಳು ನಮ್ಮಲ್ಲಿಗಿಂತ ಭಿನ್ನವಾಗಿರುತ್ತದೆ. ಯಾವುದೇ ರೀತಿಯ ಕಟ್ಟಳೆಗಳಿಲ್ಲ. ವಿಭಿನ್ನ ಶೈಲಿಯಲ್ಲಿ ಬಟ್ಟೆಗಳನ್ನು ಧರಿಸುತ್ತಾರೆ.

೦ ಚೀಣಾದ ಇತ್ತೀಚಿನ ಘಟನೆಗಳ ನಂತರ ನೀವು ಚೀಣಾಕ್ಕೆ ಭೇಟಿಕೊಟ್ಟು ಬಂದಿದ್ದೀರಿ. ಚೀಣಾದ ವಾತಾವರಣ ಈಗ ಹೇಗಿದೆ?

★ ಚೈನಾದ ಜನತೆ ಸರ್ಕಾರದ ಕ್ರಮವನ್ನು ಒಪ್ಪಿದೆ ಎಂದು ಕಂಡುಬರುತ್ತಿತ್ತು. ನಾನು ಹೋದ ಕಡೆಯಲ್ಲೆಲ್ಲಾ ಜನರು ಸಂತೋಷದಿಂದ ಬದುಕುತ್ತಿರುವುದನ್ನು ನೋಡಿದೆ. ಬೀಜಿಂಗ್‌ನ ಕೆಲವು ರಸ್ತೆಗಳನ್ನು ಬಿಟ್ಟರೆ ಬೇರೆಲ್ಲೂ ಯಾವ ಸೈನ್ಯವನ್ನೂ ನಾನು ನೋಡಲಿಲ್ಲ. ಜನರನ್ನು ಪಾರ್ಕುಗಳಲ್ಲಿ ನೋಡಿದೆ. ರಾತ್ರಿ ಮಾರ್ಕೆಟ್‌ನಲ್ಲಿ ಸಾವಿರಾರು ಜನ ನಿರ್ಭೀತಿಯಿಂದ ರಸ್ತೆಗಳಲ್ಲಿ ಓಡಾಡಿಕೊಂಡಿದ್ದರು. ಯಾವುದೇ ಗಲಾಟೆ, ಚಳುವಳಿ ನಡೆದಿಲ್ಲವೆಂಬಂತೆ ಆರಾಮವಾಗಿ ಇದ್ದರು. ಯಾವುದೇ ಭೀತಿಯ ವಾತಾವರಣ ಕಾಣಲಿಲ್ಲ. ವರದಿಗಳ ಪ್ರಕಾರ ಎಲ್ಲಾ ನಗರಗಳಲ್ಲಿ ಪೊಲೀಸ್ ವ್ಯಾನುಗಳು, ಸೈನಿಕರು ಬಂದೂಕ ಧಾರಿಗಳಾಗಿ ಇರಬೇಕಾಗಿತ್ತು. ಹಾಗೆ ಎಲ್ಲಿಯೂ ಕಾಣಲಿಲ್ಲ. 7ನೇಪುಟಕ್ಕೆ

> ಚೈನಾದ ಜನತೆ ಸರಕಾರದ ಕ್ರಮವನ್ನು ಒಪ್ಪಿದೆ ಎಂದು ಕಂಡು ಬರುತ್ತಿತ್ತು. ನಾನು ಹೋದ ಕಡೆಯಲ್ಲೆಲ್ಲಾ ಜನರು ಸಂತೋಷದಿಂದ ಬದುಕುತ್ತಿರುವುದನ್ನು ನೋಡಿದೆ. ಬೀಜಿಂಗ್‌ನ ಕೆಲವು ರಸ್ತೆಗಳನ್ನು ಬಿಟ್ಟರೆ ಬೇರೆಲ್ಲೂ ಯಾವ ಸೈನ್ಯವನ್ನು ನಾನು ನೋಡಲಿಲ್ಲ. ಜನರನ್ನು ಪಾರ್ಕುಗಳಲ್ಲಿ ನೋಡಿದೆ. ರಾತ್ರಿ ಮಾರ್ಕೆಟ್‌ನಲ್ಲಿ ಸಾವಿರಾರು ಜನ ನಿರ್ಭೀತಿಯಿಂದ ರಸ್ತೆಗಳಲ್ಲಿ ಓಡಾಡಿಕೊಂಡಿದ್ದರು.

ದ.ಕ.ಜಿಲ್ಲೆಯಾದ್ಯಂತ ರೈತರ ಹೋರಾಟ

ದ.ಕ.ಜಿಲ್ಲೆಯ ರೈತ ಕೃಷಿಕೂಲಿಗಾರರ ಭೂಮಿಪ್ರಶ್ನೆ, ಹಕ್ಕುಪತ್ರ, ಬೆಳೆಗೆ ನ್ಯಾಯ ಬೆಲೆ, ಹಸಿರು ಕಾರ್ಡ್, ಸಮಗ್ರ ಭೂ ಶಾಸನ ಕಾನೂನು ಜಾರಿ, ಸರ್ಕಾರಿ ಭೂಮಿಯಲ್ಲಿ ವಾಸ್ತವ್ಯವಿದ್ದೂ ಕೃಷಿ ಮಾಡಿದ ಭೂ ರಹಿತ ಬಡವರಿಗೆ ಯಾವುದೇ ದಂಡ ವಿಧಿಸದೇ ಉಚಿತ ಹಕ್ಕು ಪತ್ರ ನೀಡಬೇಕೆಂದು ಒತ್ತಾಯಿಸಿ ಸೆಪ್ಟೆಂಬರ್ 1 ರಿಂದ 15 ರವರೆಗೂ ನಾಡ ಕಛೇರಿ, ಮಂಡಲ ಪಂಚಾಯ್ತಿ ಜಿಲ್ಲಾ ಪರಿಷತ್ ಹಾಗೂ ಜಿಲ್ಲಾಧಿಕಾರಿ ಹೀಗೆ ಹಂತ ಹಂತದ ಹೋರಾಟ ರೂಪಿಸಿದಂತೆ ಜಿಲ್ಲೆಯ ವಿವಿಧೆಡೆ ನಡೆದಿರುವ ಹೋರಾಟದ ಬಗ್ಗೆ ಕೆಲ ವರದಿಯನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಕುಂದಾಪುರ

ಕೋಟೇಶ್ವರ ಮಂಡಲ ಪಂಚಾಯ್ತಿಯೆದುರು ನಡೆದ ಧರಣಿಯಲ್ಲಿ ಸೆಪ್ಟೆಂಬರ್ 1,5 ಹಾಗೂ 6 ರಂದು 100 ಮಂದಿ ರೈತ - ಕೃಷಿ ಕೂಲಿಗಾರರು ಭಾಗವಹಿಸಿದ್ದರು. ಗ್ರಾಮದ ರಸ್ತೆ, ದಾರಿ ದೀಪ, ಕುಡಿಯುವ ನೀರು, ಕೆರೆ ರಿಪೇರಿ ಮುಂತಾದ ಸ್ಥಳೀಯ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಪ್ರಧಾನರಿಗೆ ನೀಡ ಲಾಯಿತು. ಬಗೆಹರಿಸುವ ಭರವಸೆಯನ್ನು ಅವರು ನೀಡಿದರು. ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾ॥ ಯು. ದಾಸ ಭಂಡಾರಿ ಅಧ್ಯಕ್ಷ ಕಾ॥ ಶಿವರಾಮ ಶೆಟ್ಟಿಯವರು ಮಾತನಾಡಿದರು. ಸ್ಥಳೀಯ ನಾಯಕರು ನೇತೃತ್ವ ವಹಿಸಿದ್ದರು.

ಬಂಟ್ವಾಳ

ಚೆನ್ನೈಕೋಡಿ ಮಂಡಲ ಪಂಚಾಯ್ತಿ ಕಛೇರಿ ಎದುರು ಸೆಪ್ಟೆಂಬರ್ 7 ರಂದು ನಡೆದ ಧರಣಿಯಲ್ಲಿ ನೂರಕ್ಕೂ ಅಧಿಕ ರೈತ - ಕೃಷಿ ಕೂಲಿಕಾರರು ಭಾಗವಹಿಸಿದ್ದರು. ಮಂಡಲದ ಪ್ರಧಾನರಿಗೆ ಬೇಡಿಕೆಗಳ ಮನವಿ ಅರ್ಪಿಸಲಾಯಿತು.

ತಾಲ್ಲೂಕು ಅಧ್ಯಕ್ಷ ಬಿ. ವಾಸುಗಟ್ಟಿ, ಕಾರ್ಯದರ್ಶಿ ಬಿ. ನಾರಾಯಣ, ಸಂಜೀವ ಬಂಗೇರ ರವರು ಮಾತನಾಡಿದರು. ನಕ್ಕುರ ಪೂಜಾರಿ, ಫಿಲಿಕ್ಸ್ ಮೊಂತೇರೋ, ಸೋಮನಾಥ ಬಂಜನ್, ಧರ್ಣಪ್ಪ ಪೂಜಾರಿ, ನೇತೃತ್ವವಹಿಸಿದ್ದರು.

ವಿಟ್ಲ: ಪುರಭವನದಿಂದ ಸೆಪ್ಟೆಂಬರ್ 12 ರಂದು ಸುಮಾರು 100 ಮಂದಿ ರೈತ - ಕೃಷಿ ಕೂಲಿಕಾರರು ಮೆರವಣಿಗೆ ಹೊರಟು ಮಂಡಲದ ಎದುರು ಧರಣಿ ನಡೆಸಿದರು. ಪ್ರಧಾನರಿಗೆ ಮನವಿ ಅರ್ಪಿಸಿ ನಡೆದ ಸಭೆಯಲ್ಲಿ ಕಾ॥ ವಾಸುಗಟ್ಟಿ, ರಾಮಣ್ಣ ಮಾತನಾಡಿದರು.

ಸೆಪ್ಟೆಂಬರ್ 2 ರಂದು ಕರಿಯಂಗಳ ಮಂಡಲ, ನರಿಕೊಂಬು, ಪೆರ್ನೆ ಮಂಡಲಗಳ ಎದುರು ರೈತರ ಧರಣಿಗಳು ನಡೆದವು. ಧರಣಿಗೆ ಮೊದಲು ಮೆರವಣಿಗೆ ನಡೆಸಿದ ರೈತರು ಮಂಡಲ ಪ್ರಧಾನರಿಗೆ ಮನವಿ ಅರ್ಪಿಸಿದರು. ಬೇಡಿಕೆಗಳ ಕುರಿತು ಸಂಬಂಧಪಟ್ಟವರ ಗಮನಕ್ಕೆ ತರುವ ಹಾಗೂ ಕ್ರಮ ಕೈಗೊಳ್ಳುವ ಆಶ್ವಾಸನೆಯನ್ನು ಪ್ರಧಾನರು ನೀಡಿದರು.

ಉಡುಪಿ

ಸೆಪ್ಟೆಂಬರ್ 1 ರಿಂದ 7ರವರೆವಿಗೂ ತೆಂಕನಿಡಿಯೂರು, ಕೊಡವೂರು, ಕಡೆಕಾರು, ಪುತ್ತೂರು ಶಿವಳ್ಳಿ, ಪಡುಬಿದ್ರಿ, ಮಲ್ಲಾರು, ಮುದರಂಗಡಿಗಳ ಮಂಡಲ ಪಂಚಾಯ್ತಿ ಕಛೇರಿ ಎದುರು ಸರದಿಯಂತೆ ಧರಣಿ ಸತ್ಯಾಗ್ರಹ ನಡೆಸಲಾಯಿತು. 11ರಿಂದ 13ರವರೆಗೂ ನಾಡ ಕಛೇರಿ 14 ರಂದು ಅರಣ್ಯಾಧಿಕಾರಿ ಕಛೇರಿ ಹಾಗೂ 15 ರಂದು ಉಡುಪಿಯ ತಾಲ್ಲೂಕು ಕಛೇರಿ ಎದುರು ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿತ್ತು ಕಾ॥ ಡೇವಿಡ್ ಎ ಕರ್ಕಡ, ದೋಗು ಸುವರ್ಣ, ಸಾಧು ಅಮೀನ ಮುಂತಾದವರು ನೇತೃತ್ವ ವಹಿಸಿದ್ದರು.

ಭೂಮಿ ವಸತಿಗಾಗಿ ರೈತರ ಚಳುವಳಿ

ವಿವಿಧ ಹಂತದಲ್ಲಿ ಧರಣಿ, ಪ್ರದರ್ಶನ ನಂತರ ರಾಜ್ಯದ ರಾಜ್ಯಪಾಲರೆಡೆಗೆ ಧಾವಿಸಿ ರಾಜಭವನ ಪಿಕೆಟಿಂಗ್ ನಡೆಸಲು ಧಾವಿಸಿದೆ ರೈತರ ದಂಡು.

ಬಂಟ್ವಾಳ

ಸೆ. 1ರಿಂದ 15 ರವರೆವಿಗೂ ದ.ಕ. ಜಿಲ್ಲೆಯಾದ್ಯಂತ ನಡೆದ ರೈತ ಚಳುವಳಿ ಭಾಗವಾಗಿ ಬಂಟ್ವಾಳ ತಾಲೋಕಿನಲ್ಲಿ ಸೆ. 15 ರಂದು ಒಂದು ಸಾವಿರ ರೈತರ ಬೃಹತ್ ರ‍್ಯಾಲಿ ಹಾಗೂ ಸಾರ್ವಜನಿಕ ಸಭೆಯೊಂದಿಗೆ ಮುಕ್ತಾಯಗೊಂಡಿದೆ.

ತಾಲೋಕಿನ ವಿವಿಧ ಗ್ರಾಮಗಳಿಂದ ಬಂದ ಸಾವಿರ ರೈತರು ಬಿ.ಸಿ. ರಸ್ತೆಯಿಂದ ಹೊರಟು ತಹಸೀಲ್ದಾರ್ ಮೂಲಕ ರಾಜ್ಯದ ರಾಜ್ಯಪಾಲರಿಗೆ ರೈತರ 12 ಪ್ರಮುಖ ಬೇಡಿಕೆಗಳ ಮನವಿ ಅರ್ಪಿಸಿದರು.

ಜಿಲ್ಲಾ ರೈತಸಂಘದ ಅಧ್ಯಕ್ಷ ಕಾ॥ ಕೆ.ಆರ್. ಶ್ರೀಯಾನ್‌ರವರು ಮಾತನಾಡಿ 42 ವರ್ಷಗಳ ಕಾಂಗ್ರೆಸ್ ಆಡಳಿತ ರೈತ-ಕೃಷಿ ಕೂಲಿಗಾರರಿಗಾಗಿ ಏನನ್ನು ಸಾಧಿಸದೇ ವರ್ಣಮಯ ಘೋಷಣೆಗಳನ್ನು ನೀಡುತ್ತಾ ಜನತೆಯನ್ನು ಮೋಸಗೊಳಿಸುತ್ತಿದೆ. ಇದಕ್ಕೆ ಬಲಿಯಾಗದೆ ಜನರು ಹೋರಾಡಬೇಕೆಂದು ಕರೆ ನೀಡಿದರು.

ಬಡವರು ವಶಪಡಿಸಿಕೊಂಡಿರುವ ಸರ್ಕಾರಿ ಭೂಮಿಯ ಒಡೆತನದ ಹಕ್ಕಿಗಾಗಿ ಹೋರಾಟ ತೀವ್ರಗೊಳಿಸಲು ಅವರು ಕರೆ ನೀಡಿದರು.

ತಾಲೋಕು ಅಧ್ಯಕ್ಷ ಕಾ॥ ಬಿ.ವಾಸುಗಟ್ಟಿ ಅಧ್ಯಕ್ಷತೆ ವಹಿಸಿ ಬಿ. ನಾರಾಯಣ ಸ್ವಾಗತಿಸಿದರು.

ಉಡುಪಿ

ಸೆ.1ರಿಂದ 7ರವರೆವಿಗೂ ಮಂಡಲ ಪಂಚಾಯ್ತಿ ಕಛೇರಿಯೆದುರು ಧರಣಿ ಸೆ.14ರಂದು ಅರಣ್ಯಾಧಿಕಾರಿ ಕಛೇರಿ ಎದುರು ಧರಣಿ ನಡೆಸಿ 15 ರಂದು ತಾಲೋಕು ಕಛೇರಿ ಎದುರು ಸುಮಾರು 700 ಮಂದಿ ರೈತರು ಪ್ರದರ್ಶನ ನಡೆಸಿ ಧರಣಿ ನಡೆಸಿದರು. ಹಂಚಿನ ಕಾರ್ಮಿಕರ ಬೃಹತ್ ಮೆರವಣಿಗೆಯಲ್ಲಿ ಬಂದು ಹೋರಾಟವನ್ನು ಬೆಂಬಲಿಸಿದರು. ರಾಜಭವನ ಪಿಕೆಟಿಂಗ್‌ನಲ್ಲಿ ತಾಲೋಕಿನಿಂದ ಹೆಚ್ಚಿನ ರೈತರು ಪಾಲ್ಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು. ಈ ಸಭೆಯನ್ನುದ್ದೇಶಿಸಿ ಡೇವಿಡ್ ಎ. ಕರ್ಕಡ, ದೋಗು ಸುವರ್ಣ ಸಾಧು ಅಮೀನ್, ಮುಂತಾದವರು ಮಾತನಾಡಿದರು.

ಉ.ಕ.ಜಿಲ್ಲೆ

ಕರ್ನಾಟಕ ಪ್ರಾಂತ ರೈತ ಸಂಘದ ಉ.ಕ ಜಿಲ್ಲೆ ಶಿರಸಿಯ ಘಟಕ ಸೆಪ್ಟೆಂಬರ್ 14ರಂದು ರೈತರ ಪ್ರಮುಖ 12 ಬೇಡಿಕೆ ಒತ್ತಾಯಿಸಿ ಅಸಿಸ್ಟೆಂಟ್ ಕಮಿಷನರ್ ಕಛೇರಿ ಚಲೋ ಕಾರ್ಯಕ್ರಮ ನಡೆಸಲಾಯಿತು. ಬಿಡಕಿ ಬೈಲಿನಿಂದ ಮೆರವಣಿಗೆ ಹೊರಟು ಎ.ಸಿ.ಯವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಸಾರ್ವಜನಿಕ ಸಭೆ ನಡೆಸಲಾಯಿತು. ಕಾ॥ ಪಿ.ಜಿ.ಮಶಾಲ್ಕಿ, ಬಂಗಾರೇಶ್ವರ ಗೌಡ, ಎಂ.ಎಸ್. ಧಾರೇಶ್ವರ ಮತ್ತು ಶಾಂತರಾಮನಾಯಕ್ ಮಾತನಾಡಿದರು.

ತಾಲೋಕಿನ 16 ಮಂಡಳಗಳಲ್ಲಿ ಸೆ. 13 ರಂದು ಬೇಡಿಕೆಗಳ ಮನವಿ ಅರ್ಪಿಸಲಾಯಿತು. ಇನಳೂರಿನ ಮಂಡಲದ ಮುಂದೆ ಸುಮಾರು 40 ರೈತರು 10 ಕಿ.ಮೀ. ಕಾಲ್ನಡೆ ಜಾಥ ನಡೆಸಿ ಪ್ರದರ್ಶನ ನಡೆಸಿದರು.

ಜೊಯ್ಡಾ

ಅಕ್ರಮ ಸಾಗುವಳಿದಾರರ ಭೂಪ್ರಶ್ನೆ, ಭೂ ಸುಧಾರಣಾ ಕಾಯ್ದೆಗೆ ಪ್ರಗತಿಪರ ತಿದ್ದುಪಡಿ ಭೂರಹಿತ, ಕೃಷಿ ಕೂಲಿಗಾರರ ಬೇಡಿಕೆ ಮುಂತಾದವುಗಳನ್ನು ಒತ್ತಾಯಿಸಿ ಸುಪಾ (ಜೊಯ್ಡಾ) ತಾಲೋಕಿನ ಅವೇಡಾ ಮಂಡಳ ಪ್ರಧಾನರಿಗೆ ಸೆ.13ರಂದು ರೈತರು ಮನವಿ ಅರ್ಪಿಸಿದರು. ಕಾ॥ ರಾಜೆ ರಾಮಗುಡೆ, ವಿಲಾಸ ಕಾಂಬಳೆ ಸುಭಾಷ ಗುಪಾದ ಮರಾಳೆ ನೇತೃತ್ವ ವಹಿಸಿದ್ದರು.

14ರಂದು ಜೊಯ್ಡಾ ತಹಸೀಲ್ದಾರ್ ರವರಿಗೆ ಬೇಡಿಕೆಗಳ ಮನವಿ ಅರ್ಪಿಸಲಾಯಿತು. ಕಾ॥ ಹರೀಶನಾಯ್ಕ, ಮಂಜುನಾಥ ಪುಲಕರ್, ಟಿ.ಎಸ್. ನಾಯ್ಕರವರು ಉಪಸ್ಥಿತರಿದ್ದರು.

ವಸತಿಹೀನರ ಮೆರವಣಿಗೆ

ರಾಮದುರ್ಗದ ಪುರಸಭೆ ಹಾಗೂ ರಿಜರ್ವ ಭೂಮಿಯಲ್ಲಿ ಗುಡಿಸಲುಗಳನ್ನು ಕಟ್ಟಿ ವಾಸಿಸುವ ಬಡ ಜನತೆಗೆ ಹಕ್ಕು ಪತ್ರ ನೀಡಬೇಕೆಂದು ಆಗ್ರಹಿಸಿ ಸಿ.ಪಿ.ಐ(ಎಂ), ರೈತಸಂಘದ ನೇತೃತ್ವದಲ್ಲಿ ಸೆಪ್ಟೆಂಬರ್ 7ರಂದು ಮೆರವಣಿಗೆ ನಡೆಸಲಾಯಿತು. ಕೂಸುಗಳೊಂದಿಗೆ ಮಹಿಳೆಯರು ಭಾಗವಹಿಸಿದ್ದರು.

ತಹಸೀಲ್ದಾರ್ ಹಾಗೂ ಫಾರೆಸ್ಟ್ ರೇಂಜ್‌ರವರಿಗೆ ಮನವಿ ಸಲ್ಲಿಸಲಾಯಿತು. ನಂತರ ಸಭೆಯನ್ನುದ್ದೇಶಿಸಿ ಕಾ॥ವಿ.ಪಿ. ಕುಲಕರ್ಣಿ, ಶ್ರೀಕಾಂತ ಹಟ್ಟಿಹೋಳಿ, ಎಂ.ಎಚ್.ಮುಲ್ಲಾ ಮಾತನಾಡಿದರು. ವಿದ್ಯಾರ್ಥಿ ಮುಖಂಡರು ಭಾಗವಹಿಸಿದ್ದರು.

ಬಿಜಾಪುರ

ರೈತ ಕೃಷಿ ಕೂಲಿಕಾರರ ಸಂಘಗಳ ಜಂಟಿ ಸಭೆ ಸೆಪ್ಟೆಂಬರ್ 11ರಂದು ಜರುಗಿ ಸೆ.30ರ ರಾಜಭವನ ಚಲೋ ಯಶಸ್ವಿಗೊಳಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯಿಂದ ಪಾಲ್ಗೊಳ್ಳಲು ಹಾಗೂ ಜಿಲ್ಲೆಯ ಸಾಗುವಳಿ ರೈತರ ಮನವಿಯನ್ನು ರಾಜ್ಯಪಾಲರಿಗೆ ಅರ್ಪಿಸಲು ನಿರ್ಧರಿಸಲಾಯಿತು ಎಂದು ರೈತ ಸಂಘದ ಜಿಲ್ಲಾ ಅಧ್ಯಕ್ಷ ಕಾ॥ ಭೀಮಸಿ ಕಲಾದಗಿ ತಿಳಿಸಿದ್ದಾರೆ.



ದೇಶದ ರಾಜಧಾನಿಯಲ್ಲಿ ಮಹಿಳೆಯರ ಬೃಹತ್ ಮತ ಪ್ರದರ್ಶನ

ನಿರುದ್ಯೋಗ, ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ "ನಮಗೆ ಬೇಕು ಕೆಲಸ, ಹುಸಿ ಭರವಸೆಗಳಲ್ಲ"

"ಒಂದಾದರೂ ಬೇಡಿಕೆ ಈಡೇರಿಸದ ರಾಜೀವ್ ಸರ್ಕಾರದ ರಾಜೀನಾಮೆ ಈಗ ನಮ್ಮ ಬೇಡಿಕೆ" - ಈ ಘೋಷಣೆಗಳು ದೇಶದ ರಾಜಧಾನಿಯ ಕೇಂದ್ರದಲ್ಲಿ ಸೆಪ್ಟೆಂಬರ್ 8ರಂದು ಮೊಳಗಿದವು. ಈ ಘೋಷಣೆಯನ್ನು ಕೂಗುತ್ತಿದ್ದುದ್ದು ದೇಶದ ಅರ್ಧ ಜನಸಂಖ್ಯೆಯನ್ನು ಪ್ರತಿನಿಧಿಸಿದ 20 ಸಾವಿರ ಸ್ತ್ರೀ ಕಂಠಗಳು ಎಂಬುದು ಸೆಪ್ಟೆಂಬರ್ 8ರ ಈ ಪ್ರತಿಭಟನೆಯನ್ನು ವಿಶಿಷ್ಟವಾಗಿಸಿದ ಸಂಗತಿ. ಇಷ್ಟೊಂದು ಅಗಾಧ ಸಂಖ್ಯೆಯಲ್ಲಿ ಮಹಿಳೆಯರು ದೆಹಲಿಯ ಆಳರಸರ ಮೂಗಿನ ಕೆಳಕ್ಕೇ ತಮ್ಮ ಬೇಡಿಕೆಗಳಿಗೆ ದನಿ ನೀಡಿರುವುದು, ಇತ್ತೀಚಿನ ದಿನಗಳಲ್ಲಿ ಅಭೂತಪೂರ್ವ ಘಟನೆ ಎಂದು ಅಭಿಪ್ರಾಯ ಪಡಲಾಗಿದೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ ಮತ್ತು ಅಖಿಲಭಾರತ ದುಡಿಯುವ ಮಹಿಳೆಯರ ಸಂಯೋಜಕ ಸಮಿತಿಯ ಕರೆಯ ಮೇರೆಗೆ ಕರ್ನಾಟಕವೂ ಸೇರಿದಂತೆ ದೇಶದ 18 ರಾಜ್ಯಗಳಿಂದ ಇಪ್ಪತ್ತು ಸಾವಿರಕ್ಕೂ ಹೆಚ್ಚು ಮಹಿಳೆಯರು ಈ ರ್‍ಯಾಲಿಯಲ್ಲಿ ಭಾಗವಹಿಸಿದರು. ಅತ್ಯಂತ ಶೋಷಣೆಗೊಳಗಾದ ಕೃಷಿ ಕಾರ್ಮಿಕ ಮಹಿಳೆಯರು, ಅಂಗನವಾಡಿ ಕೆಲಸಗಾರರು, ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ, ಸೇವಾ ವಲಯದಲ್ಲಿ ದುಡಿಯುವ ಮಹಿಳೆಯರು ಸುಡುಬಿಸಿಲಿಗೆ ಹೆಗಲು ಕೊಟ್ಟು ರಾಜಘಾಟ್‌ಂದ ಬೋಟ್‌ಕ್ಲಬ್‌ವರೆಗೆ ಭವ್ಯ ಮೆರವಣಿಗೆಯಲ್ಲಿ ಸಾಗಿದರು. ಬಿಹಾರದ ಮಹಿಳೆಯರು ಬಹಳೆಡೆ ಕಿರುಕುಳ, ಲಾಠೀ ಪ್ರಹಾರಗಳನ್ನು ಎದುರಿಸಿ ದೆಹಲಿಗೆ ದೃಢ ನಿರ್ಧಾರದಿಂದಲೇ ತಲುಪಿದ್ದರು.

ಆಧುನೀಕರಣ, ಯಾಂತ್ರೀಕರಣ ದುಷ್ಪರಿಣಾಮ ಮೊದಲು ತಟ್ಟುವುದು ಮಹಿಳಾ ಕಾರ್ಮಿಕರಿಗೆ. ಬೆಲೆಯೇರಿಕೆಯ ಬಹುಪಾಲು ಹೊರೆಯನ್ನು ಹೊರಬೇಕಾದವರೂ ಅವರೇ. ಆದ್ದರಿಂದ ನಿರುದ್ಯೋಗ, ಮತ್ತು ಬೆಲೆಯೇರಿಕೆ ದೆಹಲಿಯಲ್ಲಿ ಇಪ್ಪತ್ತು ಸಾವಿರ ಮಹಿಳೆಯರು ಎತ್ತಿದ ಪ್ರಮುಖ ಪ್ರಶ್ನೆಯಾಗಿತ್ತು. ಈ ರ್‍ಯಾಲಿಯ ಮೊದಲು ದೇಶಾದ್ಯಂತ ಎರಡು ತಿಂಗಳ ಪ್ರಚಾರದಲ್ಲಿ ಈ ಸಮಸ್ಯೆಗಳೊಂದಿಗೆ ಭೂಸುಧಾರಣೆ, ಕನಿಷ್ಠ ಕೂಲಿಕುರಿತಾದ ಶಾಸನಗಳ ಅನುಷ್ಠಾನ ಮುಂತಾದ ಪ್ರಶ್ನೆಗಳ ಮೇಲೆ ಸತತವಾಗಿ ದೇಶದ ಮಹಿಳೆಯರ ಗಮನ ಸೆಳೆಯಲಾಗಿತ್ತು.

ಮೆರವಣಿಗೆಯ ನಂತರ ನಡೆದ ಸಭೆಯ ಅಧ್ಯಕ್ಷತೆಯನ್ನು ಅಹಿಲ್ಯಾ ರಂಗ್ನೇಕರ್ ವಹಿಸಿದ್ದರು. ಮಹಿಳೆಯರ ಘಾತಕ ವೈರಿಯಾದ ಮೂಲಭೂತವಾದದ ಬೆಳವಣಿಗೆಗೆ ರಾಜೀವ ಸರ್ಕಾರ ಹೇಗೆ ಹೊಣೆ ಎಂಬುದನ್ನು ವಿವರಿಸಿದ ಅವರು ದೇಶದ ಒಳಿತಿಗಾಗಿ ರಾಜೀವ ಸರ್ಕಾರದ ರಾಜೀನಾಮೆ ಒತ್ತಾಯಿಸಬೇಕು, ಕೋಮು ಸೌಹಾರ್ದ ರಕ್ಷಣೆಗೆ ಮಹಿಳೆಯರು ಮುಂದಾಗಬೇಕು ಎಂದು ಕರೆ ನೀಡಿದರು.

ರ್‍ಯಾಲಿಯ ನಿರ್ಣಯವನ್ನು ಮಂಡಿಸಿದ ಎ.ಐ.ಡಿ.ಡಬ್ಲ್ಯು.ಎ. ಪ್ರಧಾನ ಕಾರ್ಯದರ್ಶಿ ಸುಶೀಲಾ ಗೋಪಾಲನ್ ಉದ್ಯೋಗ ನಿರತ ಮಹಿಳೆಯರ ಶೇಕಡಾವಾರು ಇಳಿಯುತ್ತಿರುವ ಬಗ್ಗೆ ವಿವರಿಸಿದರು. ದುಡಿಯುವ ಮಹಿಳೆಯರ ಸಂಯೋಜಕ ಸಮಿತಿಯ ಕಾರ್ಯದರ್ಶಿ ವಿಮಲಾ ರಣದಿವೆ ಮಹಿಳಾ ಕಾರ್ಮಿಕರ ವಿವಿಧ ವಿಭಾಗಗಳ ಬಗ್ಗೆ ಮಾತನಾಡಿದರು. ಎ.ಐ.ಡಿ.ಡಬ್ಲ್ಯು.ಎ. ಜಂಟಿ ಕಾರ್ಯದರ್ಶಿ ನಿರುದ್ಯೋಗದ ವಿರುದ್ಧ ದೇಶವ್ಯಾಪಿ ಪ್ರತಿಭಟನೆಯ ಬಗ್ಗೆ ವಿವರಿಸಿದರು. ಉತ್ತರಪ್ರದೇಶದ ಲಕ್ಷ್ಮಿ ಸೆಗಲ್, ಪಂಜಾಬಿನಿಂದ ರಾಜೆಂದರ್ ಕೌರ್, ಪ.ಬಂಗಾಳದ ಶ್ಯಾಮಲಿಗುಪ್ತಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ರ್‍ಯಾಲಿ ಸರ್ವಾನುಮತದಿಂದ ಅಂಗೀಕರಿಸಿದ ಠರಾವು "ರಾಜೀವಗಾಂಧಿಯ ನಾಲ್ಕೂವರೆ ವರ್ಷಗಳ ಆಳ್ವಿಕೆಯಲ್ಲಿ ಅತ್ಯಂತ ಹೆಚ್ಚು ನೋವುಂಡವರು "ಮಹಿಳೆಯರು" ಎಂದು ವರ್ಣಿಸಿದೆ. ಮಹಿಳೆಯರ ಮೇಲೆ ವಿಶೇಷವಾಗಿ ಹರಿಜನ, ಗಿರಿಜನ ಮಹಿಳೆಯರ ಮೇಲೆ ಅತ್ಯಾಚಾರ ಏರುತ್ತಲೇ ಇದೆ. ಅತ್ಯಾಚಾರಿಗಳು (ಇವರಲ್ಲಿ ಪೋಲೀಸರೂ ಇದ್ದಾರೆ) ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಲೇ ಇದ್ದಾರೆ. ಅಲ್ಲದೆ ಉದ್ಯೋಗ, ಸಮಾನವೇತನ, ಆಸ್ತಿಹಕ್ಕು ಕಾನೂನಿನಲ್ಲಿ ಸಮಾನತೆ ಇವೆಲ್ಲವುಗಳಿಂದ ಮಹಿಳೆ ವಂಚಿತಳಾಗಿದ್ದಾಳೆ" ಎಂದು ಹೇಳುತ್ತಾ ನಿರ್ಣಯ ಜನಸಾಮಾನ್ಯರ ಇಚ್ಛೆಯನ್ನು ನೇರವಾಗಿ ಪ್ರತಿನಿಧಿಸುವ ಸರ್ಕಾರದ ಸ್ಥಾಪನೆಯಾಗದೆ ದೇಶದ ಐಕ್ಯತೆಯ ರಕ್ಷಣೆ ಸಾಧ್ಯವಿಲ್ಲ, ಮಹಿಳೆಯರ ಹಕ್ಕುಗಳ ಪೂರ್ಣ ಅನುಷ್ಠಾನ ಸಾಧ್ಯವಿಲ್ಲ ಎಂಬ ದೃಢ ಅಭಿಪ್ರಾಯ ವ್ಯಕ್ತಪಡಿಸಿದೆ. ರಾಜೀವಗಾಂಧಿ ಸರ್ಕಾರ ರಾಜೀನಾಮೆ ನೀಡಿ ತಕ್ಷಣ ಚುನಾವಣೆ ನಡೆಸಿ ಜನತೆ ತಮ್ಮ ಆಯ್ಕೆಯ ಸರಕಾರ ಪಡೆಯುವಂತಾಗಬೇಕೆಂದು ಕರೆ ನೀಡುತ್ತಾ ಆಗಸ್ಟ್ 30ರ ಭಾರತ ಬಂದ್ ಕರೆಗೆ ಜನತೆಯ ಬೆಂಬಲದ ಬಗ್ಗೆ ತನ್ನ ತೃಪ್ತಿಯನ್ನು ಈ ಠರಾವಿನ ಮೂಲಕ ರ್‍ಯಾಲಿ ವ್ಯಕ್ತಪಡಿಸಿತು.

ಇತ್ತೀಚಿನ ದಿನಗಳಲ್ಲಿ ದಿನಬೆಳಗಾದರೆ ಮಹಿಳೆಯರನ್ನು ಕುರಿತಾದ ಒಂದಿಲ್ಲೊಂದು ಸರಕಾರೀ ಭರವಸೆಗೆ ಅಬ್ಬರದ ಪ್ರಚಾರ ಕೊಡುವ ದೂರದರ್ಶನ ಆಕಾಶವಾಣಿಗಳೂ ದೇಶದ ರಾಜಧಾನಿಗೆ ಬಂದು ಇಷ್ಟೊಂದು ಸಂಖ್ಯೆಯಲ್ಲಿ ಮಹಿಳೆಯರು ತಮ್ಮ ಸಮಸ್ಯೆಗಳಿಗೆ ದನಿ ನೀಡಿದಾಗ ಬಾಯಿ ಮುಚ್ಚಿಕೊಂಡಿದ್ದವು.

★ ★ ★

"ರಾಷ್ಟ್ರೀಯ ಮಹಿಳಾ ಅಭಿವೃದ್ಧಿ ಯೋಜನೆ" ಕುರಿತು ರಾಜ್ಯಮಟ್ಟದ ಮಹಿಳಾ ಸಮಾವೇಶ

ಕೇಂದ್ರ ಸರ್ಕಾರ ಮಂಡಿಸಿರುವ "ರಾಷ್ಟ್ರೀಯ ಮಹಿಳಾ ಅಭಿವೃದ್ಧಿ ಯೋಜನೆ" ದಾಖಲೆಯು ಪ್ರಾಮಾಣಿಕ ಪ್ರಯತ್ನದ ಹಿನ್ನೆಲೆಯಲ್ಲಿ ಮೂಡಿಬಾರದೆ ಕೇವಲ ಚುನಾವಣಾ ತಂತ್ರವಾಗಿದೆ ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕಾ॥ ಶ್ರೀಮತಿ ಸುಶೀಲ ಗೋಪಾಲನ್‌ರವರು ಹೇಳಿದರು. ಅವರು ಆಗಸ್ಟ್ 27ರಂದು ಬೆಂಗಳೂರಿನ ಸೆನೆಟ್‌ಹಾಲ್‌ನಲ್ಲಿ "ರಾಷ್ಟ್ರೀಯ ಮಹಿಳಾ ಅಭಿವೃದ್ಧಿ" ಕುರಿತಾದ ರಾಜ್ಯಮಟ್ಟದ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಜ್ಯ ಸಂಘಟನಾ ಸಮಿತಿ ಏರ್ಪಡಿಸಿದ್ದ ಈ ಸಮಾವೇಶದಲ್ಲಿ ಗುಲ್ಬರ್ಗಾ, ಕೋಲಾರ, ರಾಯಚೂರು, ಹಾಸನ ಬೆಂಗಳೂರು ಮುಂತಾದ ಜಿಲ್ಲೆ ಪ್ರತಿನಿಧಿಸಿ 200 ಪ್ರತಿನಿಧಿಗಳು ಭಾಗವಹಿಸಿದ್ದರು.

ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರಿಗಾಗುತ್ತಿರುವ ಅನ್ಯಾಯ ಆಧುನಿಕ ಯಂತ್ರಗಳ ಬಳಕೆಯಿಂದ ನಿರುದ್ಯೋಗ ಹೆಚ್ಚಿ ಬೀದಿಪಾಲಾಗಿರುವುದು, ಮಹಿಳೆಯರಿಗೆ ಭೂಹೀನರಿಗೆ ಭೂಮಿ ಹಂಚುವ ಕುರಿತು ಯಾವುದೇ ಪ್ರಯೋಗಿಕ ನೀತಿ ನಿರೂಪಣೆಯನ್ನೊಳಗೊಂಡಿರದ ಈ ಯೋಜನೆ ಮಹಿಳೆಯರ ಕುರಿತು ಮೊಸಳೆ ಕಣ್ಣೀರು ಸುರಿಸುವುದಾಗಿದೆ ಎಂದು ಅಂಕಿ ಅಂಶಗಳ ಸಹಿತ ಸವಿಸ್ತಾರವಾಗಿ ಸುಶೀಲನ್ ವಿವರಿಸಿದರು.

ಎನ್.ಪಿ.ಪಿ.ಯು ನಿಜವಾದ ಅರ್ಥದಲ್ಲಿ ಒಂದು ಅಭಿವೃದ್ಧಿ ಯೋಜನೆಯಾಗ ಬೇಕಾದ ಅವಶ್ಯಕತೆ ಕುರಿತು ಹೇಳಿ ಈ ಯೋಜನೆ ವಿಫಲತೆಯ ಕುರಿತು ದೀರ್ಘವಾಗಿ ಮಾತನಾಡಿದರು.

ಅಬ್ಬರದ ಪ್ರಚಾರ ಪಡೆಯುತ್ತಿರುವ ಮತ್ತೊಂದು ಯೋಜನೆ ಜವಹರ್ ರೋಜ್‌ಗಾರ್ ಯೋಜನೆ 80% ಗ್ರಾಮೀಣ ಜನರಲ್ಲಿ ಹುಸಿ ಭರವಸೆ ಮೂಡಿಸಿರುವುದರ ಕುರಿತು ಮಾತನಾಡಿದ ಕಾರ್ಮಿಕ ಮುಖಂಡ ಕಾ॥ವಿ.ಜೆ.ಕೆ. ನಾಯರ್‌ರವರು ಕೆಲ ಅಂಕಿ-ಅಂಶಗಳನ್ನು ನೀಡಿ ಈ ಯೋಜನೆಗಾಗಿ ವಿನಿಯೋಗಿಸುವ ಹಣದಲ್ಲಿ 4.8 ಕೋಟಿ ಜನರಿಗೆ ಒಂದು ವರ್ಷದಲ್ಲಿ ಕೇವಲ 18 ದಿನಗಳು ಮಾತ್ರ ಕೆಲಸ ನೀಡಬಹುದಾಗಿದೆ ಎಂದು ಈ ಯೋಜನೆಯ ನಿಜವಾದ ಬಣ್ಣ ಬಯಲು ಮಾಡಿದರು.

ದೇಶದಲ್ಲಿ ಇಂದು ದಿನದಿನಕ್ಕೆ ಹೆಚ್ಚುತ್ತಿರುವ ಅಶಾಂತಿ, ಅತೃಪ್ತಿ, ಪ್ರತ್ಯೇಕತಾ ಕೂಗಿನ ಹಿಂದೆ ನಿರುದ್ಯೋಗವೆಂಬ ಪೆಡಂಭೂತ ಮೂಲ ಕಾರಣವಾಗಿದೆ ಎಂದು ಡಿ.ವೈ.ಎಫ್.ಐ. ರಾಜ್ಯಅಧ್ಯಕ್ಷರು, ವಕೀಲರು, ಆದ ಕಾ॥ಹೆಚ್.ಎನ್. ನಾಗಮೋಹನದಾಸ್‌ರವರು ಹೇಳಿದರು.

ಮಹಾಭಾರತ ಯುದ್ಧವನ್ನು ಪ್ರಸ್ತಾಪಿಸಿದ ಅವರು ಭೂಮಿಗಾಗಿ ಹಾಗೂ ತಮ್ಮ ಬದುಕಿಗಾಗಿ ಅಂದು ಪಾಂಡವರು ಸಹ ಸಂಘಟಿತರಾಗಿ ಹೋರಾಡಿದನ್ನು ಅವರು ನೆನಪಿಸಿ ಸಮಸ್ಯೆಗಳ ಪರಿಹಾರಕ್ಕೆ ಹೋರಾಡಲು ಕರೆ ನೀಡಿ ಎನ್.ಪಿ.ಪಿ. ಹಾಗೂ ರೋಜ್‌ಗಾರ್ ಯೋಜನೆಗಳು ಜನತೆಯ ಮೂಲ ಸಮಸ್ಯೆಗೆ ಯಾವುದೇ ಪರಿಹಾರ ಸೂಚಿಸುವುದಿಲ್ಲವೆಂದರು.

ಬೆಂಗಳೂರು ಜಿಲ್ಲೆ ಸಂಚಾಲಕಿ ಶ್ರೀಮತಿ ಕೆ.ಎಸ್. ವಿಮಲರವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ತೇಜಸ್ವಿನಿ ಸ್ವಾಗತಿಸಿ ನೀಲಾ.ಕೆ ಅವರು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು. ಸಮಾವೇಶವು ಮಹಿಳೆಯರಿಗೆ ಭಾದಿಸುತ್ತಿರುವ ಪ್ರಮುಖ 13 ಸಮಸ್ಯೆಗಳ ಕುರಿತು ನಿರ್ಣಯ ಸ್ವೀಕರಿಸಿತು.

★ ★ ★

ರಾಜ್ಯಾದ್ಯಂತ ವಿ.ವಿ.ಚಲೋ ಯಶಸ್ವಿ

ವಿದ್ಯಾರ್ಥಿ ಹಕ್ಕುಗಳ ಮೇಲೆ ಸತತ ದಾಳಿ, ಸೌಲತ್ತುಗಳ ನಿರಾಕರಣೆ, ವಿಶ್ವ ವಿದ್ಯಾಲಯ ಮಟ್ಟದಲ್ಲಿ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಸಮಸ್ಯೆ ಕುರಿತು 1985 ರಲ್ಲಿ ಜರುಗಿದ ವಿಜಯ ವಾಡ ಎಸ್.ಎಫ್.ಐ. ಸಮ್ಮೇಳನ ದೀರ್ಘವಾಗಿ ಚರ್ಚಿಸಿದ ನಂತರ ಒರಿಸ್ಸಾದ ಭುವನೇಶ್ವರದಲ್ಲಿ, ದೇಶದ ವಿ.ವಿ.ಗಳ ವಿದ್ಯಾರ್ಥಿಗಳ ರಾಷ್ಟ್ರ ಸಮಾ ವೇಶ ಜರುಗಿ ಪ್ರತಿ ರಾಜ್ಯದಲ್ಲೂ ವಿ.ವಿ. ಮಟ್ಟದ ವಿದ್ಯಾರ್ಥಿ ಆಂದೋಲನ ರೂಪಿಸಲು ನೀಡಿದ ನಿರ್ದೇಶನದಂತೆ ಇಂದು ಕರ್ನಾಟಕ ರಾಜ್ಯದಲ್ಲಿ ವಿ.ವಿ. ಮಟ್ಟದ ವಿದ್ಯಾರ್ಥಿಗಳ ಚಳುವಳಿ ಬೆಳೆದು ಬರುತ್ತಿದೆ.

ಶಿಕ್ಷಣ ರಂಗದ ಮೇಲೆ ಸರ್ಕಾರದ ಆಕ್ರಮಣಕಾರಿ ನೀತಿ ಹಿಮ್ಮೆಟ್ಟಿಸುವುದು, ಧನ ಸಹಾಯ ನಿರ್ಬಂಧಕ್ಕೆ ಪ್ರತಿರೋಧ ವಿ.ವಿ. ಆಡಳಿತದಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯ ಹೊಸ ಕೋರ್ಸುಗಳ ಆರಂಭಕ್ಕೆ ಒತ್ತಾಯ, ರಾಜ್ಯಪಾಲರ ಹೊಸ ಶಿಕ್ಷಣ ಶುಲ್ಕ ನೀತಿಗೆ ವಿರೋಧ. ವಿದ್ಯಾರ್ಥಿ ಸಂಘಕ್ಕೆ ಚುನಾವಣೆ, ಖಾಲಿ ಇರುವ ಉಪನ್ಯಾಸಕರ ಹುದ್ದೆ ನೇಮಕ ಮುಂತಾದ 12 ಪ್ರಮುಖ ಬೇಡಿಕೆಯನ್ನಿಟ್ಟು ನಡೆದ ರಾಜ್ಯ ಮಟ್ಟದ ಈ ಚಳುವಳಿಯಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಗುಲ್ಬರ್ಗಾ ವಿ.ವಿ.

ಅತ್ಯಂತ ಆಕರ್ಷಕ ಶಿಸ್ತಿನ 1500 ವಿದ್ಯಾರ್ಥಿಗಳು ಭಾಗವಹಿಸಿದ್ದ ರ್‍ಯಾಲಿ ಜೊತೆಗೆ ನಗರದ ವಿದ್ಯಾರ್ಥಿಗಳು ಕಾಲೇಜು ಬಹಿಷ್ಕರಿ ಅವರನ್ನು ಸೇರಿಕೊಂಡರು. 10 ಕಿ.ಮೀ ಚಲಿಸಿ "ಜ್ಞಾನಗಂಗಾ" ತಲುಪಿದ ಮೆರವಣಿಗೆಯನ್ನು ಪ್ರಾಂಶುಪಾಲರು ವಿ.ವಿ. ಘಟಕದ ಸಂಗಾತಿಗಳು ಸ್ವಾಗತಿಸಿದರು. ಗುಲ್ಬರ್ಗಾ ವಿ.ವಿ. ಸಮನ್ವಯ ಸಮಿತಿಯ ಸಂಚಾಲಕ ಕಾ॥ ಎಸ್. ರಾಮನ ಗೌಡ ಉಪಕುಲಪತಿ ಡಾ॥ ಹೆಚ್. ಚೆಲುವ ರಾಜುರವರಿಗೆ ಮನವಿ ಅರ್ಪಿಸಿದರು.

ಬಿ.ಕಾಂ ವಿದ್ಯಾರ್ಥಿಗಳಿಗೆ ಅತಿ ಹೊರೆ ಮತ್ತು ಅವೈಜ್ಞಾನಿಕ ಬಿಜಿನೆಸ್ ಮಾಥ್ಮೆಟಿಕ್ಸ್ ಪಠ್ಯಕ್ರಮದ ವಾಪಾಸತಿ ಅಧ್ಯಾಪಕರು ರೂಪಿಸಿದ ಪರಿಷ್ಕೃತ ಪಠ್ಯ ತಕ್ಷಣ ಜಾರಿ, 54 ಅಂಕಗಳ ಪ್ರಶ್ನೆ ವಿಭಾಗದಲ್ಲಿ ಆಯ್ಕೆಗೆ ಅವಕಾಶ ನೀಡಿಕೆಯನ್ನು ಹಾಗೂ ಬಿ.ಎಸ್ಸಿ ಕೃಷಿ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಶಿಕ್ಷಣಕ್ಕೆನ ಪ್ರವೇಶಾವಕಾಶ (ಪಿ.ಜಿ.) ಶೇ 90% ಪಾಲು ನೀಡುವುದು 10% ಬಿ.ಸಿ.ಜೆ.ಡಿ.ಗ್ರವರಿಗೆ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಸ್ನಾತಕೋತ್ತರ ತರಗತಿ ಆರಂಭಕ್ಕೆ ಉಪಕುಲಪತಿಗಳು ಒಪ್ಪಿದರು.

ರೈತ ಹೋರಾಟ ಕ್ರಿಯಾ ಸಮಿತಿ

ಸೆಪ್ಟೆಂಬರ್ 12ರಂದು ಬೆಂಗಳೂರಿನಲ್ಲಿ ಜರುಗಿದ ಸಭೆಯಲ್ಲಿ ರಾಜ್ಯಮಟ್ಟದ ರೈತ-ಕೃಷಿ ಕೂಲಿಗಾರರ ಮೀಟಿಂಗ್ ಯಶಸ್ವಿ ಗೊಳಿಸಲು ಸಿ.ಐ.ಟಿ.ಯು. ಹಾಗೂ ಬೆಂಬಲಿತ ಕಾರ್ಮಿಕ ಸಂಘಟನೆಗಳು ವಿದ್ಯಾರ್ಥಿ-ಯುವಜನ, ಮಹಿಳಾ ವಕೀಲರು, ಎಲ್.ಐ.ಸಿ.ಬ್ಯಾಂಕ್ ಮುಂತಾದ ಸಂಘಟನೆಗಳ ಧುರೀಣರು, ಗ್ರಾಮದವರೆಲ್ಲರಿಂದ ರೈತ ಹೋರಾಟ ಕ್ರಿಯಾ ಸಮಿತಿಯೊಂದನ್ನು ರಚಿಸಲಾಯಿತು. ಇಲ್ಲಿ ಆಯ್ಕೆಗೊಂಡ ಪದಾಧಿಕಾರಿಗಳು ಈ ಕೆಳಗಿನಂತಿದ್ದಾರೆ.

ಅಧ್ಯಕ್ಷ ಕಾ॥ ಎಸ್. ಸೂರ್ಯನಾರಾಯಣರಾವ್

ಪ್ರ.ಕಾರ್ಯದರ್ಶಿ ಕಾ॥ ಪಿ. ರಾಮಚಂದ್ರರಾವ್

ಉಪಾಧ್ಯಕ್ಷರು ಕಾ॥ ವಿ.ಜೆ.ಕೆ. ನಾಯರ್, ಕಾ॥ ಆರ್. ವೆಂಕಟರಾಮಯ್ಯ ಕಾ॥ ನಾಗಮೋಹನದಾಸ್

ಕಾರ್ಯದರ್ಶಿಗಳು ಕಾ॥ ಚಂದ್ರಶೇಖರ ಬಾಳೆ ಕಾ॥ ಪಿ.ಬಸಪ್ಪನವರ

ಕಾ॥ ಶ್ರೀರಾಮರೆಡ್ಡಿ ಯವರನ್ನೊಳಗೊಂಡ 50 ಜನರ ಸಮಿತಿ

ಸರ್ಕಾರಿ ಭೂಮಿಗಾಗಿ ಸಂಘರ್ಷ

ಕರ್ನಾಟಕದಲ್ಲಿ ಒಂದೂವರೆ ಕೋಟಿ ಎಕರೆಗೂ ಮಿಕ್ಕು ಸರ್ಕಾರಿ ಭೂಮಿ ಇದೆ. ಈ ಭೂಮಿ ಯಾರಿಗೆ ಸೇರಬೇಕು? ಯಾರಿಗಾಗಿ ಉಪಯೋಗವಾಗಬೇಕು? ಪ್ಲಾಂಟೇಷನ್ ಮಾಲೀಕರು, ಇತರ ಭೂಮಾಲೀಕರ ಸ್ವೇಚ್ಛಾಚಾರದ ಸಾಧನವಾಗಿಯೊ? ಬಿರ್ಲಾ, ಟಾಟಾಗಳಿಗೆ ಅಗ್ಗದ ದರದಲ್ಲಿ ನೀಲಗಿರಿ ಇತ್ಯಾದಿಗಳನ್ನು ಸರಬರಾಜು ಮಾಡುವುದಕ್ಕಾಗಿಯೋ? ಅಥವಾ ಹಸಿದ ಜನಗಳ ಒಡಲು ತುಂಬುವ ಕೂಲಿ ಜನಗಳ ಬದುಕು ನೇರ ಮಾಡುವ ಸಾಧನವಾಗಬೇಕೋ? ಈ ಪ್ರಶ್ನೆ ವರ್ಗ ಸಂಘರ್ಷ ಮೂಲಭೂತ ಪ್ರಶ್ನೆಯಿದು. ಈ ಹಲವು ದಶಕಗಳಿಂದ ಗ್ರಾಮೀಣ ಪ್ರದೇಶದಲ್ಲಿ ಸಾಗಿರುವ ವರ್ಗ ಸಂಘರ್ಷ ಭಾರತದ ಭವಿಷ್ಯವನ್ನು ನಿರ್ಧರಿಸುವ ಮೂಲಭೂತ ಸಂಘರ್ಷಗಳಲ್ಲೊಂದು. ಈ ಸಂಘರ್ಷದ ತಳಹದಿ ಏನು? ಒಂದು ವಿವರಣೆ ಇಲ್ಲಿದೆ.

ಜಿ.ಎನ್.ನಾಗರಾಜ್

ಗುಡ್ಡ, ಬೆಟ್ಟ, ಮಲೆಗಳನ್ನು ವಿಹಾರಕ್ಕಾಗಿ, ಸಾಹಸಕ್ಕಾಗಿ ಹತ್ತುವವರಿಗೆ ಆನಂದವನ್ನು ಹೆಮ್ಮೆಯನ್ನು ತರಬಹುದು. ಬೆಟ್ಟದ ಮೇಲೇರಿ ನಿಂತಾಗ ಜಗತ್ತನ್ನೇ ಗೆದ್ದ ಭಾವನೆ ಮನದುಂಬಬಹುದು. ಆದರೆ ಸೌಂದತ್ತಿ ತಾಲ್ಲೂಕಿನ ಮಲ್ಲೂರಿನ ಸೋಮಪ್ಪಣ್ಣನಿಗೆ ಕೃಷಿಯ ಉಪಕರಣಗಳನ್ನು ಹೆಗಲ ಮೇಲೆ ಹೇರಿಕೊಂಡು ಅನುದಿನವೂ ನೂರಾರು ಅಡಿ ಎತ್ತರದ ಕಡಿದಾದ ಕಲ್ಲು ಬಂಡೆಗಳನ್ನೇರಿ ಬೆಟ್ಟದ ನೆತ್ತಿಯ ಮೇಲೆ ಇರುವ ಸ್ವಲ್ಪ ಸಮತಟ್ಟಾದ ಭೂಮಿಯಲ್ಲಿರುವ ಹೊಲಗಳನ್ನು ಉಳುವಾಗ, ಬಿತ್ತುವಾಗ, ಬೆಳೆವಾಗ ಏನೆನ್ನಿಸಬಹುದು? ಬೆಟ್ಟದ ನೆತ್ತಿಯಿಂದ ಬಾನಂಚಿನವರೆಗೂ ಕಾಣುವ ಬಯಲು ಪ್ರದೇಶದಲ್ಲಿ, ಹಸಿರು ಚಿಮ್ಮಿರುವುದನ್ನು ಕಂಡಾಗ, ಮೂಡುವ ಭಾವನೆಗಳೇನು? ಅಲ್ಲಿಯೇ ಗುಡ್ಡದ ತಪ್ಪಲಿನಲ್ಲಿ ತಲ್ಲೂರು ದೇಸಾಯರ ಹಲವಾರು ಸಾವಿರ ಎಕರೆ ಭೂ ವಿಸ್ತಾರದಲ್ಲಿ, ಅನೇಕ ಫಲವತ್ತಾದ ಹೊಲಗಳಲ್ಲಿ ಕುರುಚಲು ಗಿಡಗಳು ಬೆಳೆದು ಪಾಳು ಬಿದ್ದಿರುವುದು ಕಡೆಗೆ ಆ ಎತ್ತರದ ಬಂಡೆಗಲ್ಲುಗಳ ಮೇಲೆ ಅಷ್ಟಿಷ್ಟು ಕೂಡಿರುವ ಮಣ್ಣಿನ ಕಣಗಳನ್ನು ಕೆದರುತ್ತಿರುವಾಗ ಕಲ್ಲು ಹೊರಳಿದರೆ ಈ ಸಾಹಸ ಜೀವಿಗೆ ಏನ್ನಿಸ ಬಹುದು?

ಅಲ್ಲಿ ಆ ಗಿರಿಯ ನೆತ್ತಿಯಲ್ಲಿ ಸೋಮಪ್ಪಣ್ಣ ಏಕಾಂಗಿಯಾಗಿ ನಿಂತು ಯೋಚಿಸುತ್ತಿದ್ದರೂ ನಮ್ಮ ಸೋಮಪ್ಪಣ್ಣ ಏಕಾಂಗಿಯಲ್ಲ.

ಪಶ್ಚಿಮ ಘಟ್ಟಗಳ ಮಲೆನಾಡಿನ ಸೊಬಗನ್ನು ಸವಿಯುತ್ತಿರುವಾಗ ಬೆಟ್ಟದ ಗಿರಿನೆತ್ತಿಯ ಕೋಡುಗಳನ್ನು ಅಚ್ಚರಿಯಿಂದ ದಿಟ್ಟಿಸುತ್ತಿರುವಾಗ ಅಂತಹುದೊಂದು ಕೋಡಿನ ಮೇಲೆ - ಮೇಗಾನೆ ಎಂದು ಅದಕ್ಕೆ ಹೆಸರು ಸಾವಿರಾರು ಅಡಿ ಎತ್ತರದ ಮೇಲೆ ರಸ್ತೆಯೇ ಬಂಡಿ ಜಾಡನ್ನು ಕಾಣದ ಬೆಟ್ಟದ ಮೇಲೆ ಹೊಲಗಳಿರಬಹುದು ಅಲ್ಲಿ ಬೇಸಾಯ ನಡೆದಿರಬಹುದು ಎಂದು ನೀವು ಯಾರೂ ಊಗಿಸಲಾರದ ಜಾಗದಲ್ಲಿ ಹೊರ ಜಗತ್ತಿನೊಡನೆ ಎಲ್ಲಾ ಸಂಪರ್ಕ ಕಡಿದುಕೊಂಡಿದೆ ಎನ್ನಬಹುದಾದ ಮಾನವ ವಸತಿಯೊಂದಿಗೆ ಇಲ್ಲಿನ ಜನರನೇಕರು ವಿಮಾನ, ಹೆಲಿಕಾಪ್ಟರುಗಳನ್ನು ಕಂಡಿದ್ದಾರೆ ಆದರೆ ಸೈಕಲ್ಲುಗಳನ್ನು ನೋಡಿಲ್ಲ. ಇಂತಹ ಜಾಗದಲ್ಲಿ ಸಾಹಸಿಗಳನೇಕರು ಬತ್ತಿ ಬೆಳೆದು ಬದುಕು ಸಾಗಿಸಿದ್ದಾರೆ - ಜಗತ್ತಿಗೆ ಅರಿವಾಗದಂತೆ.

ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಇಂತಹ ಸಾಹಸಿಗಳು ಲಕ್ಷಾಂತರ ಜನ. ಬರಡು ಭೂಮಿಯನ್ನು ನುರುಜು ಕಲ್ಲುಗಳನ್ನೂ ತಮ್ಮ ಬರಿಗೈಯಿಂದಲೇ ಕರಗಿಸಿ ಬೆವರ ಕಾಲುವೆ ಹರಿಸಿ ಮೆತ್ತಗೆ ಮಾಡಿ ಬೆಳೆ ಮಾಡಿದವರು ಸೌದತ್ತಿಯ ಸೋಮಪ್ಪಣ್ಣನಾಗಲಿ, ಮೇಗಾನೆಯ ಬೆಟ್ಟದ ರೈತರಾಗಲೀ ಉಳುತ್ತಿರುವ ನೆಲ ಲೆಕ್ಕದಲ್ಲಿ ಅವರದಲ್ಲ. ಗ್ರಾಮಸ್ಥರೆಲ್ಲರ ಹಣೆಯ ಬರಹವನ್ನೇ ಬರೆಯುವ ಬ್ರಹ್ಮ ನಾನು ಎಂಬ ಹಮ್ಮಿನಿಂದ ಮರೆಯುವ ತಹಸೀಲ್ದಾರರ. ಶ್ಯಾನುಭೋಗ ಕುಲಕರ್ಣಿಗಳ ಕಡತದಲ್ಲಿ ಬಿಳಿಯ ಕಾಗದದ ಮೇಲೆ ಕರಿಯ ಗೀಟೆಳೆದು ನಮೂದಿಸಿದ್ದು ಅದು ಸರ್ಕಾರಿ ಜಾಗ · ಸರ್ಕಾರಿ ಬಂಜರು ಭೂಮಿ ಎಂದು. ಹತ್ತಾರು ವರುಷ ಆ ಭೂಮಿಯಲ್ಲಿ ಏಗಿದವರಿಗೆ ಆ ನೆಲದಲ್ಲಿ ಬೆವರು ಬಸಿದವರಿಗೆ ಆ ಭೂಮಿಯಲ್ಲಿ ಯಾವುದೇ ಹಕ್ಕಿಲ್ಲ! ಇಲ್ಲ!! ನೋಡೋಣ ತೋರಿಸಿ ಅದು ನಿಮ್ಮದು ಎಂಬುದಕ್ಕೆ ಒಂದೇ ಒಂದು ದಾಖಲೆಯನ್ನು. ಇದು ಬರ್ಬರ ಸರ್ಕಾರದ ಆಣತದ ಗರ್ಜನೆ. ಯಾವ ದಾಖಲೆಯನ್ನು ತರಬೇಕು. ಈ ಬಡಜನ ಎಲ್ಲಿಂದ ತರಬೇಕು? ಅವರಲ್ಲಿರುವುದು ಕೇವಲ ವರ್ಷ ವರ್ಷವೂ ಆ ಭೂಮಿಯ ಮೇಲೆ ಕರಗಿ ಹೋದ ಬೆವರ ಹನಿಗಳ ಸಾಕ್ಷ್ಯ . ಬಸಿದ ನೆತ್ತರ ಸಾಕ್ಷ್ಯ. ಎಂದು ನಮ್ಮನ್ನು ಇಲ್ಲಿಂದ ಓಡಿಸುತ್ತಾರೋ ಎಂಬ ಚಿಂತೆಯಲ್ಲಿ ಹಣೆಯಲ್ಲಿ ಮೂಡಿದ ಗೆರೆಗಳ ದಾಖಲೆ.

ಕೇವಲ ಬಡಜನರ, ದುಡಿಯುವ ಜನರ ಹೃದಯಕ್ಕೆ ಮಾತ್ರ, ಜನ ಸಮುದಾಯದ ಸಮಷ್ಟಿ ದೃಷ್ಟಿಗೆ ಮಾತ್ರ ಕಾಣುವ ಈ ಸಾಕ್ಷ್ಯಗಳನ್ನು ಕಾಣಲಾರದ, ಕಾಣಬಯಸದ ವರ್ಗಾಂಧ ದಾಖಲೆಗಳು ನಮೂದಿಸುವುವೇ? ಅದು ಬೆವರನ್ನೇ ಕಾಣದ ಅಧಿಕಾರಿಗಳ, ಜಮೀನ್ದಾರುಗಳ ಕಣ್ಣಿಗೆ ಕಾಣಿಸುವುದೇ? ಏಕೆ ಈ ಸಾಹಸಿಗಳು "ತಮ್ಮ"ದಲ್ಲದ ನೆಲಕ್ಕೆ ಆಸೆಪಡುತ್ತಾರೆ?

"ತಮ್ಮ"ದಲ್ಲದ ನೆಲವನ್ನು ಹಿಡಿಯುವ ಸ್ವಾರ್ಥಿಗಳೇ ಇವರು?

ದಿನ ದಿನವೂ ನೂರಾರು ಅಡಿ ಉಸಿರು ಕಟ್ಟಿ ಹತ್ತಿ ಇಳಿಯುವ ಸೋಮಪ್ಪಣ್ಣನನ್ನು ಅಂತಹ ಲಕ್ಷಾಂತರ ಜನರನ್ನು ನೋಡಿದವರು ಯಾರಾದರು ಈ ಮಾತು ಹೇಳಿನೋಡೋಣ. ಹಾಗಾದರೆ ಮತ್ತೇನು? ಏನೆಂಬುದನ್ನು ಅವನನ್ನೇ ಕೇಳಿ ಹೇಳುತ್ತಾನೆ:

ಮಲಪ್ರಭಾ ಜಲಾಶಯದಲ್ಲಿ ನಮ್ಮ ಊರು ಮುಳುಗಿ ನಾವು ಜಮೀನು ಕಳೆದುಕೊಂಡಾಗ ನವಲಗುಂದ ತಾಲ್ಲೂಕಿನ ಗ್ರಾಮವೊಂದರಲ್ಲಿ, ನನ್ನ ಪತ್ನಿಯ ಊರಿನಲ್ಲಿ ನೆಲೆಸಿದೆ. ಕೂಲಿ ನಾಲಿ ಮಾಡುತ್ತಾ ಜೊತೆಗೆ ಅದೇ ಊರಿನಲ್ಲಿ ಲಾವಣಿಗೆ ಜಮೀನು ಹಿಡಿದು ಬದುಕತೊಡಗಿದೆ. 70ರ ಸಮಯದಲ್ಲಿ ಎಲ್ಲಾ ಬೆಲೆಗಳು ಏರಿದ ಕಾಲದಲ್ಲಿ ನಮಗೆ ಕೊಡುತ್ತಿದ್ದ ಕೂಲಿಯಲ್ಲಿ ಬದುಕುವುದು ಕಷ್ಟವಾಯಿತು. ಆದ್ದರಿಂದ ಹೆಚ್ಚು ಕೂಲಿಗಾಗಿ ಹೋರಾಡಲು ಹಳ್ಳಿಯಲ್ಲಿಯೋ ನಮ್ಮದೇ ಸ್ವತಂತ್ರ ಕೂಲಿಕಾರ ಸಂಘ ವೊಂದನ್ನು ಕಟ್ಟಿದೆ. ಎಲ್ಲಾ ಕೂಲಿ ಕಾರೊಡನೆ ಹೆಚ್ಚು ಕೂಲಿಗಾಗಿ ಒತ್ತಾಯ ಹಾಕತೊಡಗಿದೆ.

ನೋಡೋಣ ತೋರಿಸಿ ಅದು ನಿಮ್ಮದು ಎಂಬುದಕ್ಕೆ ಒಂದೇ ಒಂದು ದಾಖಲೆಯನ್ನು. ಇದು ಬರ್ಬರ ಸರ್ಕಾರದ ಆಣತದ ಗರ್ಜನೆ.

ಇದರಿಂದ ಆ ಊರಿನ ಹೆಚ್ಚು ಜಮೀನುಳ್ಳ ಜನರೆಲ್ಲಾ ಕೃದ್ಧರಾದರು. ನನ್ನ ಮೇಲೆ ಕತ್ತಿ ಮಸೆಯತೊಡಗಿದರು. ಇದರ ಫಲವಾಗಿ ಭೂಸುಧಾರಣಾ ಕಾನೂನು ಬಂದ ನಂತರ ಟೆನನ್ಸಿ ಅರ್ಜಿ ಹಾಕಿದ್ದ ಭೂಮಿಯನ್ನು ನನಗೆ ದಕ್ಕದಂತೆ ಮಾಡಲು ಎಲ್ಲರೂ ಒಟ್ಟಾಗಿ ಪ್ರಯತ್ನಿಸಿದರು. ಜೀವಕ್ಕೇ ಬೆದರಿಕೆ ಹಾಕಿದರು. ಕೊನೆಗೆ ಭೂಮಿ ನನ್ನಂತೆಯೇ ಆಗಿ ಸರ್ಕಾರದ ಎಲ್ಲಾ ದಾಖಲಾತಿಗಳಲ್ಲಿಯೂ ನಾನೇ ಭೂಮಿಯ ಒಡೆಯನೆಂದು ನಮೂದಾದರೂ ಆ ಊರಿನ ಎಲ್ಲಾ ಭೂಒಡೆಯರು ಒಗ್ಗಟ್ಟಾಗಿ ನಾನು ಭೂಮಿಯ ಒಳಹೋಗಲು ಬೇಸಾಯ ಮಾಡಲು ಬಿಡಲಿಲ್ಲ ಮಾತ್ರವಲ್ಲ ಊರಿನ ಹೊರಗೆ ಹಾಕಿದರು.

ನಾನು ಎಲ್ಲವನ್ನೂ ಕಳೆದುಕೊಂಡು ಬರಿಗೈಯಾಗಿ ಸೌಂದತ್ತಿ ತಾಲ್ಲೂಕಿನ ಮಲ್ಲೂರಿಗೆ ಬಂದು ನೆಲೆಸಿದೆ. ಕೂಲಿನಾಲಿ ಮಾಡುತ್ತಾ ಜೀವನ ಆರಂಭಿಸಿ ಕೊನೆಗೆ ಬೆಟ್ಟದ ಮೇಲಿದ್ದ ಯಾರ ಕಣ್ಣಿಗೂ ಬೀಳದಿದ್ದ ಈ ಭೂಮಿಯನ್ನು ಉತ್ತು ಸಾಗು ಮಾಡಲು ಪ್ರಾರಂಭಿಸಿದೆ. ಸೌಂದತ್ತಿಯಲ್ಲಿ ಬಗರ್‌ಹುಕುಂ ಸಾಗುವಳಿದಾರರ ಸಭೆಯೊಂದು ಕರೆದಿದ್ದಾರೆ ಎಂದು ತಿಳಿದ ತಕ್ಷಣವೇ ರೈತ ಸಂಘಕ್ಕೆ ಸೇರಿ ನನ್ನ ಹಾಗೂ ನನ್ನಂತೆ ಇರುವ ಅನೇಕರ ಭೂಮಿಯ ಪಟ್ಟಾಕ್ಕಾಗಿ ಹೋರಾಡುತ್ತಾ ಬಂದಿದ್ದೇನೆ."

(ಇದು ಸೋಮಪ್ಪಣ್ಣ, ಅವನದೇ ದಿಟ್ಟವಾದ, ಸ್ಪಷ್ಟವಾದ ಭಾಷೆಯಲ್ಲಿ ಹೇಳಿದ ದೀರ್ಘ ಕತೆಯ ಸಾರಾಂಶ ಇದರಲ್ಲಿ ಮೂಲದ ಸ್ವಾರಸ್ಯ ಕೆಟ್ಟಿದ್ದರೆ ಕ್ಷಮಿಸಿ)

ಇದು ಸೋಮಪ್ಪಣ್ಣನ ಕಥೆಯಾದರೆ - ಇನ್ನು ಬೇಗಾನೆಯ ರೈತರ ಕಥೆ ಕೇಳೋಣ. ಇದನ್ನು ಹೇಳಿದವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ರಿಜಿಸ್ಟ್ರಾರ್ ಆದ ಜಾನಪದ ಸಂಶೋಧಕ ಬೋರಲಿಂಗಯ್ಯನವರು (ಪೂರ್ತಿ ವಿವರಗಳಿಗಾಗಿ ಜಾನಪದ ಅಕಾಡೆಮಿಯ ತ್ರೈಮಾಸ ಪತ್ರಿಕೆ ಜಾನಪದ ಗಂಗೋತ್ರಿ ನೋಡಿ)

ಬೇಗಾನೆಯ ರೈತರು ಮೊದಲಿಗೆ ವಾರಾಹಿ ಯೋಜನೆಯಲ್ಲಿ ಮುಳುಗಿ ಹೋದ ಗದ್ದೆ ತೋಟಗಳಲ್ಲಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದವರು. ವಾರಾಹಿ ಯೋಜನೆಯಲ್ಲಿ ಮುಳುಗಿದ ತೋಟಗಳ ಗದ್ದೆಗಳ ಒಡೆಯರಿಗೇನೊ ಪರಿಹಾರ ದೊರೆಯಿತು. ಅವರು ಬೇರೆ ಪ್ರದೇಶದಲ್ಲಿ ನೆಲೆಸಿದರು. ಆದರೆ ಅಲ್ಲಿ ಕೂಲಿ ಕೆಲಸ ಮಾಡುತ್ತಿದ್ದವರ ಗತಿ!

ನಮ್ಮ ಆಸ್ತಿಯ ಹಕ್ಕನ್ನು ಮಾತ್ರ ರಕ್ಷಿಸುವ ಸಂವಿಧಾನದ ಪ್ರಕಾರ ಆಸ್ತಿಯುಳ್ಳವರಿಗೆ ಮಾತ್ರ ಪರಿಹಾರ. ದುಡಿದುಣ್ಣುವವರಿಗೆ ಪರಿಹಾರ ನೀಡಲು ಅದರಲ್ಲಿ ದುಡಿಯುವ ಹಕ್ಕನ್ನು ಮೂಲಭೂತ ಹಕ್ಕಾಗಿ ಸೇರಿಸಿದ್ದರೆ ತಾನೆ. ಹೀಗಾಗಿ ಕೂಲಿ ಜನರಿಗೆ ಪರಿಹಾರ ದೊರೆಯಲಿಲ್ಲ. ಹಿಂದಿನ ಧಣಿಗಳು ಹೊಸ ರೀತಿಯ ಬದುಕನ್ನು ಆರಂಭಿಸಿದ್ದರಿಂದ ಆವರ ಸೇವೆಯನ್ನು ನಿರಾಕರಿಸಿದರು.

ಕೊನೆಗೆ ಇವರು ಎಲ್ಲಿಯೂ ಕೆಲಸ ಸಿಗದೆ ಜೀವನದ ಮಾರ್ಗಕ್ಕಾಗಿ ಬೇಗಾನೆ ಬೆಟ್ಟದ ಬುಡದಲ್ಲಿದ್ದ ಕಾಡು ಕಂಟಿಗಳನ್ನು ಕಡಿದು ಸ್ವಚ್ಛಗೊಳಿಸಿ ಉಳತೊಡಗಿದರು. ಆದರೆ ಕೆಲವು ಕಾಲ ಮಾತ್ರ. ಅರಣ್ಯ ಇಲಾಖೆಯವರು ಇವರನ್ನು ಜಾಗ ಬಿಡಿಸಿದ ಮೇಲೆ ಇವರು ಬೆಟ್ಟದ ಮೇಲಕ್ಕೆ ಹೋಗಿ ಮತ್ತೆ ಎಲ್ಲ ಹೊಸದಾಗಿ ನೆಲವನ್ನು ಸ್ವಚ್ಛಗೊಳಿಸಿ ಹೊಲದ ರೂಪುಕೊಟ್ಟು ಬೇಸಾಯ ಆರಂಭಿಸಿದರು. ಮತ್ತೆ ಅರಣ್ಯ ಇಲಾಖೆಯವರಿಂದ ವಿಘ್ನ. ಮತ್ತೆ ಎಲ್ಲಾ ಮಕ್ಕಳು ಮರಿಗಳ ಸಣ್ಣವರ ದೊಡ್ಡವರ ಪಾಡು ಗೋಳಾಯಿತು. ಕೊನೆಗೆ ಬೇರಿನ್ನೇನೂ ಸಾಧ್ಯವಿಲ್ಲವೆಂದು. ಈ ಶೋಷಕ ಪ್ರಪಂಚವೇ ನಮಗೆ ಬೇಡ ಎನ್ನುವಂತೆ ಸಾವಿರಾರು ಅಡಿ ಏರಿ ಬೆಟ್ಟದ ತುದಿಯನ್ನೇ ಏರಿದರು. ಸೀಮೆಎಣ್ಣೆ ಬೆಂಕಿ ಕಡ್ಡಿಗಾಗಿ ಸಾವಿರಾರು ಮೆಟ್ಟಲು ಇಳಿದು ಹೋಗ ಬೇಕಾದರೂ ಕೂಡ ಅಲ್ಲಿಯೇ ಅವರು ನೆಲಸಬೇಕಾಯಿತು. ಪ್ರಪಂಚವೆಂಬುದಿದೆ ಎಂಬುದರ ಗಂಧವೂ ಇಲ್ಲದೆ ಅವರ ಮಕ್ಕಳು ಬೆಳೆಯಬೇಕಾಯಿತು.

ಇಂತಹ ಸಾವಿರಾರು ಪ್ರಸಂಗಗಳನ್ನು ನೀವು ಕೇಳಬಹುದು. ಈಗ ಹೇಳಿ ಜೀವನದ ಹೋರಾಟದಲ್ಲಿ ಮತ್ತೆ ಮತ್ತೆ ಎಲ್ಲವನ್ನೂ ಕಳೆದುಕೊಂಡು ಮತ್ತೆ ಜೀವನದ ಬೇರಿಳಿಸಿದವರು ಕೇವಲ ಛಲದ ಬಲದಿಂದ ರಟ್ಟೆಯ ಬಲದಿಂದ ಮಾತ್ರ ಬದುಕುತ್ತಿರುವವರು.

ಮತ್ತೆ ಮತ್ತೆ ತಮ್ಮ ಜೀವನದ ಮಾರ್ಗದಿಂದ ಸರ್ಕಾರದಿಂದಲೇ ವಂಚಿತರಾದವರು ಅದಕ್ಕಾಗಿ ಯಾವ ಪರಿಹಾರವೂ ಸಿಗದಾದವರು.

(ಈಗ ಹೇಳಿ. ಈ ಭೂಮಿ ಯಾರಿಗೆ ಸೇರಬೇಕು?)

ಭೂಮಾಲಿಕರ ಹಗಲು ದರೋಡೆ:-

ಸರ್ಕಾರದ ಯೋಜನೆಗಳಿಂದ ಜೀವನದ ಮಾರ್ಗವನ್ನು ಕಳೆದುಕೊಂಡು ಸರ್ಕಾರಿ ಭೂಮಿಯನ್ನು ಆಶ್ರಯಿಸಿದವರು ಒಂದು ಭಾಗವಾದರೆ, ಅತಿ ದೊಡ್ಡ ಭಾಗ ಭೂಸುಧಾರಣೆಗಳ ಹೆಸರಿನಲ್ಲಿ ಭೂಮಿ ಕಳೆದುಕೊಂಡವರು. ಭೂಮಿಯುಳ್ಳವ ರಿಂದ ಭೂಮಿಯನ್ನು ಕಸಿದು ಭೂಮಿಯಿಲ್ಲದವರಿಗೆ ಭೂಮಿ ಹಂಚುವ ಉದ್ದೇಶದಿಂದ ಬಂದ ಭೂಸುಧಾರಣೆ ಅದರ ವಿರುದ್ಧವಾಯಿತು. ಅಲ್ಪಸ್ವಲ್ಪ ಭೂಮಿಯನ್ನು ಗೇಣಿಗಾಗಿ, ಲಾವಣಿಗಾಗಿ ಮಾಡುತ್ತಿದ್ದವರಿಂದ ಕಸಿದುಕೊಳ್ಳಲು ಸಾಧನವಾಯಿತು. ಜತ್ತಿ ಸಮಿತಿಯ ವರದಿಯಂತೆ 195 0ರ ದಶಕದ ಮಧ್ಯಭಾಗದಲ್ಲಿ 61.40 ಲಕ್ಷ ಎಕರೆ ಭೂಮಿ ಗೇಣಿ ಪದ್ಧತಿಯ ಸಾಗುವಳಿಯಾಗುತ್ತಿತ್ತು. ಆದರೆ 1980ರ ದಶಕದ ಮಧ್ಯ ಭಾಗದವರೆಗೆ ಕೇವಲ 21.09 ಲಕ್ಷ ಎಕರೆಯನ್ನು ಮಾತ್ರ ಗೇಣಿದಾರರಿಗೆ ವರ್ಗಾಯಿಸಲಾಗಿತ್ತು. ಅಂದರೆ ಸುಮಾರು 40.31 ಲಕ್ಷ ಎಕರೆ ಗೇಣಿದಾರರಿಂದ ಕಸಿಯಲ್ಪಟ್ಟಿತು. ಹೀಗೆ ಕಸಿಯಲ್ಪಟ್ಟವರಲ್ಲಿ ಸಣ್ಣ ಹಿಡುವಳಿಯನ್ನು ಗೇಣಿಗಾಗಿ ಮಾಡುತ್ತಿದ್ದವರೇ ಬಹು ಭಾಗ ಒಟ್ಟು 40 ಲಕ್ಷ ಎಕರೆಗೂ ಹೆಚ್ಚು ಭೂಮಿಯನ್ನು ಕಸಿದುಕೊಳ್ಳಲಾಯಿತು. ಅವರ ಬದುಕು ಆಶ್ರಯ ಹೀನವಾಗಿ ಚಿಂತಾಜನಕವಾಯಿತು. ಇವರಲ್ಲಿ ಬಹುಭಾಗ ಕೂಲಿಕಾರರಾಗಿ ಕರ್ನಾಟಕದಲ್ಲಿ - ಕೂಲಿಕಾರರ ಸಂಖ್ಯೆಯನ್ನು ಶೇ 5 ರಿಂದ ಶೇ 6ರ ವರೆಗೂ ಹೆಚ್ಚಿಸುವುದಕ್ಕೆ ಮುಖ್ಯ ಕಾರಣವಾದರು. ಕೆಲವು ಭಾಗ ಮಾತ್ರವೇ ಅಲ್ಪಸ್ವಲ್ಪ ಸರ್ಕಾರಿ ಭೂಮಿಯನ್ನು ಹಿಡಿದುಕೊಂಡು ಬದುಕತೊಡಗಿದರು. ಹೀಗೆ ಕಳೆದುಕೊಂಡ 41 ಲಕ್ಷ ಎಕರೆ ಭೂಮಿಯಲ್ಲಿ ಬಡರೈತರು ಸರ್ಕಾರಿ ಭೂಮಿ ಸಾಗುವಳಿಯಿಂದ ಮರಳಿ ಪಡೆದದ್ದು ಅತಿ ಕಡಿಮೆ ಅಂಶ ಮಾತ್ರ. ಇನ್ನುಳಿದವರೂ ಇನ್ನೂ ಕೂಲಿಕಾರರಾಗಿಯೇ ಜೀವನ ಸಾಗಿಸುತ್ತಿದ್ದಾರೆ.

ಸರ್ಕಾರಿ ಭೂಮಿಯ ಮೇಲೆ ಧಾಳಿ

ಹೀಗೆ ಈ ಅಸಂಖ್ಯ ಕೂಲಿಕಾರರು ಹಾಗೂ ಸಣ್ಣ ರೈತರಿಗೆ ಭೂಮಿಇನ್ನೂ ಬೇಕಾಗಿದೆ. ಆದರೆ ಭೂಮಾಲಿಕರು ತಾವು ಪಡೆದಿರುವ ಭೂಮಿ ಸಾಲದೆಂಬಂತೆ ಸರ್ಕಾರಿ ಭೂಮಿಯನ್ನು ದೊಡ್ಡ ಪ್ರಮಾಣದಲ್ಲಿ ಉಪಭೋಗಿಸುತ್ತಿದೆ.

ಮಾರುಕಟ್ಟೆಗಾಗಿ ಅಥವಾ ಹಣಕ್ಕಾಗಿ ಕೃಷಿ ಮಾಡುವ ಬಂಡವಾಳ ಶಾಹಿ ಪದ್ಧತಿ ಪ್ರಧಾನವಾಗುತ್ತಾ ಭೂಮಿಯನ್ನು ತಮ್ಮ ಕೈವಶ ಮಾಡಿಕೊಳ್ಳುವ ಕೆಲಸಕ್ಕೆ ಗ್ರಾಮೀಣ ಬಲಾಢ್ಯರಾದವರು ಮುಂದಾದರು. ಸರ್ಕಾರಿ ಭೂಮಿ ಅದು ಯಾರ ರೂಪದಲ್ಲಿಯೇ ಇರಲಿ- ಗೋಮಾಳವಾಗಿರಲಿ ಖರಾಬ್ ಭೂಮಿಯಾಗಿರಲಿ, ಗುಡ್ಡಬೆಟ್ಟಗಳಾಗಿರಲಿ ಅದರ ಮೇಲೆ ತಮ್ಮ ಒಡೆತನ ಸ್ಥಾಪಿಸಲು ಆಕ್ರಮಣ ಮಾಡಿದರು. ಅದರಲಿ ಕೆಲವು [illegible] ದರಖಾಸ್ತು ಭೂಮಿಯಾಗಿ ತಮಗೆ ಮಣಿವ ಸರ್ಕಾರದಿಂದ ಕಾನೂನು ಬದ್ಧವಾಗಿಯೇ ಪಡೆದರು ಕೂಡ.

ಸರ್ಕಾರದಿಂದ ಸರ್ಕಾರಿ ಭೂಮಿಯ ಉಪಯೋಗ:

ಭೂಮಾಲೀಕರಿಗೆ ಸರ್ಕಾರಿ ಭೂಮಿಯನ್ನು ಆಕ್ರಮಣ ಮಾಡಲು ಸುಗಮ ಅವಕಾಶ ನೀಡಿದ ಸರ್ಕಾರ ಭೂಮಾಲಿಕರು ಆಕ್ರಮಣ ಮಾಡದೇ ಉಳಿದ ಸರ್ಕಾರಿ ಭೂಮಿಯನ್ನೆಲ್ಲಾ ವನ ಮಹೋತ್ಸವ, ಅರಣ್ಯ ಸಂರಕ್ಷಣೆ ಅರಣ್ಯ ಹಬ್ಬಿಸುವಿಕೆ, ಸಾಮಾಜಿಕ ಅರಣ್ಯ ಇತ್ಯಾದಿ ಉದ್ದೇಶಗಳಿಗಾಗಿ ಉಪಯೋಗಿಸುವುದಕ್ಕಾಗಿ, ಇಡೀ ಸಮಾಜದ ಒಳಿತಿಗಾಗಿ ಪರಿಸರ ರಕ್ಷಣೆಗಾಗಿ ಮೀಸಲಿಡುತ್ತೇನೆಂದು ಘೋಷಿಸುತ್ತಿದೆ.

ಆದರೆ ವಾಸ್ತವವಾಗಿ ನಡೆಯುತ್ತಿರುವುದೇನೆಂದರೆ ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ಅರಣ್ಯದ ಗರ್ಭದೊಳಗೆ ಹುಟ್ಟಿ ಬೆಳೆದು ಅಲ್ಲಿಯೇ ವಾಸಿಸುತ್ತಿರುವ ಹಲವಾರು ಗಿರಿಜನ ಪಂಗಡಗಳ ಬದುಕಿನ ನಾಶ ಒಂದೆಡೆ. ಮತ್ತೊಂದೆಡೆ ಭೂಹೀನರು, ಸಣ್ಣರೈತರು

ನಮ್ಮ ಆಸ್ತಿಯ ಹಕ್ಕನ್ನು ಮಾತ್ರ ರಕ್ಷಿಸುವ ಸಂವಿಧಾನದ ಪ್ರಕಾರ ಆಸ್ತಿಯುಳ್ಳವರಿಗೆ ಮಾತ್ರ ಪರಿಹಾರ. ದುಡಿದುಣ್ಣುವವರಿಗೆ ಪರಿಹಾರ ನೀಡಲು ಅದರಲ್ಲಿ ದುಡಿಯುವ ಹಕ್ಕನ್ನು ಮೂಲಭೂತ ಹಕ್ಕಾಗಿ ಸೇರಿಸಿದ್ದರೆ ತಾನೆ. ಹೀಗಾಗಿ ಕೂಲಿ ಜನರಿಗೆ ಪರಿಹಾರ ದೊರೆಯಲಿಲ್ಲ.

ಆಕ್ರಮಿಸಿರುವ ಭೂಮಿಯನ್ನು ಅವರನ್ನು ಒಕ್ಕಲೆಬ್ಬಿಸಿ ಕೈ ವಶಮಾಡಿಕೊಂಡು ಅದರಲ್ಲಿ ಮರ ಬೆಳೆಸುವ ಯೋಜನೆ ಹಾಕುವುದು. ಮರ ಬೆಳೆಸಲು ಯೋಗ್ಯವಾದ ಅಸಂಖ್ಯ ವಿಸ್ತೀರ್ಣ ಲಭ್ಯವಾಗಿದ್ದರೂ ಅವರ ಕಾಕದೃಷ್ಟಿ ಈಗಾಗಲೇ ಬಡವರು ಸಾಗು ಮಾಡಿದ ಪ್ರದೇಶದ ಮೇಲೆಯೇ. ಏಕೆಂದರೆ ಬಡರೈತರು ಕೂಲಿಕಾರರು ಹಲವು ವರ್ಷಗಳಿಂದ ಕಾಡುಭೂಮಿಯನ್ನು ಮಟ್ಟ ಮಾಡಲು ಉಳುಮೆಯೋಗ್ಯ ಮಾಡಲು ಬಸಿದ ರಕ್ತದ ಮೌಲ್ಯವನ್ನು ತಾನು ಅಭಿವೃದ್ಧಿ ಪಡಿಸಿದ ಭೂಮಿ ಎಂದು ತೋರಿಸಿಕೊಂಡು ಅದರ ವೆಚ್ಚವನ್ನು ಕಿಸೆಗೆ ಬಿಡುವುದು.

ಸರ್ಕಾರಿ ಭೂಮಿ

ಭಾರತದಲ್ಲಿ ಪ್ರಪ್ರಥಮವಾ[illegible]
ಕಮ್ಯುನಿಸ್ಟ್ ಪಕ್ಷದ ಪ್ರಪ್ರಥಮ [illegible]
ಬಂದ ಹೊಸ ಹುರುಪಿನ ದಿನ[illegible]
ಘೋಷಣೆ ಹೊರಬಿತ್ತು. ಅಧಿಕಾ[illegible]
ಘೋಷಣೆ ಸ್ವಾತಂತ್ರ್ಯ ಬಂದು [illegible]
ಮಾಡದ ಕಾಂಗ್ರೆಸ್ ಪಕ್ಷ ವನ್ನು [illegible]
ಮಾಡುತ್ತಿದ್ದ ನೆಹರೂ ಸರ್ಕಾರವ[illegible]
ಕೇರಳದ ಪ್ರತಿ ಹಳ್ಳಿಗಳಲ್ಲಿ [illegible]
ಕಾರ್ಯಗಳಿಗೆ ಮೀಸಲಿಟ್ಟು ಉಳಿದ[illegible]
ಹಂಚಿ ಬಿಡುತ್ತೇವೆ. ಈ [illegible]
ಚುನಾಯಿಸಿದ ಭೂವಿತರಣಾ [illegible]
ಘೋಷಿಸಿತು. ಇ.ಎಂ.ಎಸ್. [illegible]
ಕೇರಳದಲ್ಲಿ ಹಂಚಿಯುಬಿಟ್ಟಿತು [illegible]

ಗ್ರಾಮಗಳ ಹಾಗೂ ಅರಣ್ಯದ ನಡುವಿನ ಗಡಿಯನ್ನು ವಿಸ್ತರಿಸಿ ಅದನ್ನು ಭದ್ರಪಡಿಸಿಕೊಳ್ಳಲು ಈ ಹೊಲಗಳನ್ನು ಆಕ್ರಮಿಸಿದರೆ ನಂತರ ನಿಧಾನವಾಗಿ ಒಳಗಿನ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬಹುದು. ಈ ರೀತಿಯಿಂದ ಇನ್ನು ಎಂದೆಂದೂ ಗ್ರಾಮೀಣ ಬಡವರು ಭೂಮಿಯ ಕನಸುಕಾಣದಂತೆ ಮಾಡಬಹುಧು ಎಂದು ಅವರ ಹಂಚಿಕೆ.

ಭೂಹೀನ ಬಗರ್‌ಹುಕುಂ ಸಾಗುವಳಿದಾರರನ್ನು ಇವರು ಬೆಳೆಸುತ್ತಿರುವ ಅರಣ್ಯವಾದರೂ ಯಾವುದು? ರಾಜ್ಯದ ವಿವಿಧ ಉದ್ದಿಮೆಗಳು ಅಗ್ಗದಲ್ಲಿ ಸೌದೆ, ಉರವಲು ಹಾಗೂ ಕೈಗಾರಿಕೆಗಳ ಕಚ್ಚಾವಸ್ತುಗಳನ್ನು ಪಡೆಯುವುದು. ಮಾರುಕಟ್ಟೆಯಲ್ಲಿ ರೈತರಿಂದ ಒಂದು ಟನ್‌ಗೆ 500-600 ರೂ. ನೀಡಿ ಕೊಳ್ಳಬೇಕಾದ ನೀಲಗಿರಿ ಇತ್ಯಾದಿ ಮರಗಳನ್ನು ಒಂದು ಟನ್‌ಗೆ 65-70 ರೂ.ನಂತೆ ದಾನ ಮಾಡಲು ಮಾತ್ರ ಉಪಯೋಗವಾಗುವಂತಹದು ಈ ಅರಣ್ಯದ ಸುತ್ತ ಹಾಗೂ ಒಳಗೆ ವಾಸಿಸುವಂತಹ ಜನಕ್ಕೆ ಲವಲೇಶ ಪ್ರಯೋಜನವೂ ಇಲ್ಲ ಹಾಗೂ ಉಪಯೋಗಿಸುವ ಹಕ್ಕೂ ಇಲ್ಲ.

ಕೇವಲ ಸರ್ಕಾರಿ ಭೂಮಿಯ ಉಪಯೋಗವೊಂದನ್ನೇ ನೋಡಿದರೂ ಕೂಡ ಇಂದಿನ ಆಳುವ ಸರ್ಕಾರಗಳ ನಗ್ನ ಸ್ವರೂಪ ಕಾಣುತ್ತದೆ. ದಿನದಿನವೂ ಅರಣ್ಯವನ್ನು ಕೊಳ್ಳೆಹೊಡೆದು ನಾಶಮಾಡುವ ಪರಿಸರವನ್ನು ವಿಪತ್ತಿಗೀಡು ಮಾಡಿ ಬರ, ನೆರೆಗಳಿಂದ ಬಡಜನಗಳಿಗೆ ಗೋಳನ್ನುಂಟು ಮಾಡುವ ಜನ ಪರಿಸರ ಸಂರಕ್ಷಣೆ, ಅರಣ್ಯ ಹಸಿರು ವಲಯಗಳ ಹೆಸರಿನಲ್ಲಿ ಬಂಡವಾಳಶಾಹಿಗಳ ಮುಖ್ಯವಾಗಿ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಇಡೀ ರಾಜ್ಯದ ಸರ್ಕಾರಿ ಭೂಮಿಯನ್ನು ಒತ್ತೆಯಿಡಲು ಗ್ರಾಮೀಣ ಬಡವರ ಮೇಲೆ ಧಾಳಿ ಮಾಡಿದರೆ, ಲಕ್ಷಾಂತರ ಎಕರೆ ಗೋಮಾಳ, ಗುಂಡುತೋಪ ದೇವರ ಕಾಡುಗಳನ್ನು ನುಷುಂಗಿ ನೀರು ಕುಡಿದ ಭೂಮಾಲೀಕ ವರ್ಗ ಇಡೀ ಹಳ್ಳಿಯ ಹಿತಕ್ಕಾಗಿ, ಪಶು ಸಂಪತ್ತಿಗಾಗಿ ಗೋಮಾಳಗಳು ಬೇಕು, ಇಡೀ ಗ್ರಾಮ ಸಮುದಾಯಕ್ಕೆ ಸಮುದಾಯದ ಒಟ್ಟು ಭೂಮಿ ಇರಬೇಕು ಎಂಬ ವಾದ ಹೂಡುತ್ತಾ ಭೂಮಿಯನ್ನು ತಮ್ಮ ಉಪಯೋಗದಲ್ಲಿಯೋ ಅಸಂಖ್ಯವಾಗಿರುವ ತಮ್ಮ ಪಶು ಸಂಪತ್ತಿಗಾಗಿ ಉಪಯೋಗಿಸಿಕೊಳ್ಳುವ ಬಡವರಿಗೆ ಭೂಮಿಯನ್ನು ವಂಚಿಸುವ ಪ್ರಯತ್ನ ನಡೆಸಿದ್ದಾರೆ.

ಆದ್ದರಿಂದ ಸರ್ಕಾರಿ ಭೂಮಿಗಾಗಿ ಸಂಘರ್ಷವೆಂದರೆ ಗುತ್ತೇದಾರಿ ಬಂಡವಾಳ ಶಾಹಿಗಳ ನಾಯಕತ್ವದ ಬಂಡವಾಳಶಾಹಿ-ಭೂಮಾಲಿಕ ವರ್ಗದ ಪ್ರಭುತ್ವದ ಮೃಗೀಯ ಶಕ್ತಿಯೊಡನೆ ನೇರ ಸಂಘರ್ಷ ಎಂದರ್ಥ. ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡಿರುವ ಆಕ್ರಮಿಸಿಕೊಳ್ಳ ಬಯಸುವ, ಅಷ್ಟುಮಾತ್ರವೇ ಅಲ್ಲ

ಪುಟ 6 ಕ್ಕೆ

ಕಾರ್ಮಿಕ ವರ್ಗದ

[illegible]

ಅಲಿಪ್ತ ಆಂದೋಲನ ಮೂಲ ಉದ್ದೇಶ ಬಿಡದಂತೆ ಪ್ರಗತಿಪರ ಶಕ್ತಿಗಳು ಜಾಗರೂಕರಾಗಿರಬೇಕು

ಪುಟ 1 ರಿಂದ

ದೃಷ್ಟಿಕೋನವನ್ನು, ಹಿಂದಿನ ಏಕ ಸ್ವರೂಪವನ್ನು ದುರ್ಬಲಗೊಳಿಸುವಲ್ಲೂ ಅದು ಒಂದು ಪ್ರಧಾನ ಪಾತ್ರ ವಹಿಸಿತ್ತು. ಅದೊಂದು ಅತ್ಯಂತ ಹೆಚ್ಚು ನಿರುದ್ಯೋಗವಿರುವ, ಪಾಶ್ಚಿಮಾತ್ಯ ದೇಶಗಳ ಸಾಲದ ಮೇಲೆ ಬಹಳಷ್ಟು ಅವಲಂಬಿಸಿರುವ ಶಿಥಿಲ ಆರ್ಥಿಕತೆ ಹೊಂದಿರುವ ದೇಶ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ತನ್ನ ಈ ಎಲ್ಲಾ ಗುಣಗಳನ್ನು ಅಗತ್ಯಗಳನ್ನು ಅದು ತಯಾರಿಸಿದ ಸಮ್ಮೇಳನದ ಕರಡಿನಲ್ಲಿ ಅಳವಡಿಸಿಕೊಂಡಿತ್ತು. ಸಂಘಟನೆಯ ನೀತಿಗಳ ಬಗ್ಗೆ ಪ್ರಸ್ತಾಪವೇ ಇರಲಿಲ್ಲ. ಪರಿಸ್ಥಿತಿ ಸಂಘರ್ಷದಿಂದ ಮಾತುಕತೆಯತ್ತ ಬದಲಿಸಿರುವುದನ್ನು ಅಲಿಪ್ತ ಆಂದೋಲನ ಸ್ವೀಕರಿಸಬೇಕೆಂದು ಅದು ಪ್ರತಿಪಾದಿಸಿತ್ತು.

“ಅಲಿಪ್ತ ದೇಶಗಳು ವೈಯಕ್ತಿಕವಾಗಿ ಮತ್ತು ಒಂದು ಆಂದೋಲನವಾಗಿ ಅಮೆರಿಕಾ, ಯುರೋಪಿಯನ್ ಸಮುದಾಯ ಮತ್ತು ಜಪಾನ್ ಈ ಮೂರು ವಿಶ್ವ ಆರ್ಥಿಕ ಶಕ್ತಿಗಳಿಗೆ ನಿಕಟವಾಗಬೇಕು. ಈ ಶಕ್ತಿಗಳೊಂದಿಗೆ ಸಂಬಂಧಗಳನ್ನು, ಸಹಕಾರವನ್ನು ಹೆಚ್ಚಿಸಿದರೆ ಅಲಿಪ್ತ ದೇಶಗಳಿಗೆ ತಮ್ಮ ಚೌಕಾಶಿ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು, ಬಡವ - ಶ್ರೀಮಂತ ದೇಶಗಳ ಮಾತು ಕತೆಯ ಬಗ್ಗೆ ನಿರ್ಲಕ್ಷ್ಯವನ್ನು ಸುಧಾರಿಸಲು ಸಾಧ್ಯವೆಂಬುದು ಯುಗೋಸ್ಲಾವಿಯಾದ ಸೂತ್ರವಿದ್ದಂತಿತ್ತು” ಎಂದು ದೆಹಲಿಯ ಒಂದು ದೈನಿಕದ ವರದಿಗಾರರು ಈ ಕರಡಿನ ಬಗ್ಗೆ ಬರೆದಿದ್ದರು.

ಇದು ಮಾತುಕತೆಯ ಹೊಸ ಯುಗದ ಪ್ರತಿಪಾದನೆ ಮಾಡಿದ ಯುಗೊಸ್ಲಾವಿಯಾದ ಕರಡಿನ ಹಿಂದಿದ್ದ ಪಿತೂರಿ. ಇದರಲ್ಲಿ ಭಾರತದ ಪಾತ್ರದ ಬಗ್ಗೆ ಅದೇ ವರದಿಗಾರರು ಬರೆದಿರುವ ಅಂಶ ಕೂಡಾ ಗಮನಾರ್ಹ” ಬೆಲ್ಗ್ರೇಡ್ ಈ ಶೃಂಗ ಸಭೆಯ ಅತಿಥಿ ದೇಶವಾಗುವಂತೆ ಮಾಡುವಲ್ಲಿ ಭಾರತ ಗಮನಾರ್ಹ ಪಾತ್ರ ವಹಿಸಿತ್ತು. ಅಲಿಪ್ತ ಆಂದೋಲನದ ನಿರ್ಣಯಗಳು ಸಂಕ್ಷಿಪ್ತವಾಗಿರಬೇಕು, ಯಾರೂ ಗಂಭೀರವಾಗಿ ತಗೊಳ್ಳದ ಶಬ್ದಾಡಂಬರಗಳಿಂದ ಮುಕ್ತವಾಗಿರಬೇಕು ಎಂಬ ನಿಲುವನ್ನು ಭಾರತ ಕೂಡಾ ಬೆಂಬಲಿಸಿತ್ತು”

ಅಂದರೆ ಶಬ್ದಾಡಂಬರ ತೆಗೆದು ಹಾಕಬೇಕೆಂಬ ನೆವದಲ್ಲಿ ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ನಿಲುವುಗಳನ್ನು ಬಿಟ್ಟು ಬಿಡಬೇಕು!

ರಾಜೀವಗಾಂಧಿ ಸರ್ಕಾರವೂ ಈ ಪಿತೂರಿಯಲ್ಲಿ ಒಂದು ಪಾಲುದಾರನಾಗಿತ್ತು. ಈ ದುರ್ಬಲಗೊಳಿಸಲ್ಪಟ್ಟ ದಸ್ತಾವೇಜುಗಳನ್ನು ಸಮ್ಮೇಳನ ಅಂಗೀಕರಿಸುವಂತೆ ಸರ್ವಪ್ರಯತ್ನ ನಡೆಸಿತು ಎಂಬುದು ಸುಸ್ಪಷ್ಟ. ಈ ಪ್ರಯತ್ನಕ್ಕೆ ಬಲವಾದ ಪ್ರತಿರೋಧ ಕಂಡುಬಂದಾಗಲಷ್ಟೇ ಅದು ತನ್ನ ನಿಲುವನ್ನು ಬದಲಿಸಿತು. ಇದನ್ನು ‘ಭಾರತ ತೀವ್ರ ಭಿನ್ನಾಭಿಪ್ರಾಯದ ಪರಿಸ್ಥಿತಿಯಿಂದ ಸಮ್ಮೇಳನವನ್ನು ರಕ್ಷಿಸಿತು” ಎಂಬಂತೆ ಭಾರತದ ಸುದ್ದಿ ಮಾಧ್ಯಮ ಚಿತ್ರಿಸಿವೆ.

ಬೆಲ್ಗ್ರೇಡ್ ಅಲಿಪ್ತ ಶೃಂಗ ಸಭೆ ಆರಂಭವಾದದ್ದು ಈ ವಾತಾವರಣದಲ್ಲಿ. ವಿದೇಶಾಂಗ ಮಂತ್ರಿಗಳ ಸಮ್ಮೇಳನದ ಮುಂದೆ ಇಂತಹ ಕರಡನ್ನು ಇಡಲಾಗಿತ್ತು. ಆದ್ದರಿಂದ ಈ ಶೃಂಗಸಭೆ ತನ್ನ ಹಿಂದಿನ ಪರಂಪರೆಯನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಜತೆಗೆ ಮೂರನೇ ಜಗತ್ತಿನ ದೇಶಗಳ ತುರ್ತು ಸಮಸ್ಯೆಗಳನ್ನು ವಿಶ್ಲೇಷಿಸಬೇಕಾಗಿತ್ತು.

ಸಮ್ಮೇಳನದ ಸಮಯ ಸಾಧಕ ಕರಡಿನ ವಿರುದ್ಧ ಹೋರಾಟದ ನೇತೃತ್ವವನ್ನು ಮೊದಲ ದಿನ ಘಾನಾ, ಕ್ಯೂಬಾ, ವಿಯೆಟ್ನಾಂ ವಹಿಸಿದ್ದರೆ ಎರಡನೇ ದಿನ ಜಾಂಬಿಯಾ, ಉಗಾಂಡಾ, ಸೆನೆಗಲ್, ಲಾವೊಸ್, ಉತ್ತರ ಕೊರಿಯಾ ಅದನ್ನು ಮುಂದುವರೆಸಿದವು. ಸಮರದ ಇಕ್ಕೆಲಗಳ ಸ್ವರೂಪ ಸ್ಪಷ್ಟವಾಗಿತ್ತು. ಸಮಾಜವಾದಿ ದೇಶಗಳು ಮತ್ತು ಆಫ್ರಿಕಾದ ದೇಶಗಳು ಒಟ್ಟಾಗಿ ದೇಶಗಳು ಮತ್ತು ಆಫ್ರಿಕಾದ ದೇಶಗಳು ಒಟ್ಟಾಗಿ ನಿಂತು ಭಾರತದ ಸಮಾಲೋಚನೆಯೊಂದಿಗೆ ತಯಾರಿಸಿದ್ದ ಕರಡನ್ನು ತೀವ್ರವಾಗಿ ವಿರೋಧಿಸಿದವು.

ಭಾರತದ ಸಾಮ್ರಾಜ್ಯಶಾಹಿ - ವಿರೋಧಿ ಪ್ರತಿಷ್ಠೆ ಬಹುಶಃ ಹಿಂದೆಂದೂ ಇಷ್ಟು ಕೆಳಗಿಳಿದಿರಲಿಲ್ಲ.

ಇತ್ತೀಚೆಗೆ ಬೆಲ್ಗ್ರೇಡಿನಲ್ಲಿ ಮುಕ್ತಾಯ ಗೊಂಡ ಅಲಿಪ್ತ ಆಂದೋಲನದ 9ನೇ ಶೃಂಗಸಭೆ ಕುರಿತು
ಕಾಂ|| ಬಿ.ಟಿ. ಆರ್.

“ಆಂದೋಲನದ ಸ್ಥಾಪಕರು ಪ್ರತಿಪಾದಿಸಿದ ನೀತಿಗಳು ಚಳಿಗಾಲದ ಕಷ್ಟದ ದಿನಗಳಿಗೆಂದು ಮಾತ್ರವೇ ರೂಪಿಸಿದ ನೀತಿಗಳಲ್ಲ. ಬೇಸಗೆಕಾಲದಲ್ಲೂ, ಎಲ್ಲಾ ಋತುಗಳಲ್ಲೂ ಉಪಯೋಗಕ್ಕೆ ಬರುವ ನೀತಿಗಳು” - ಎಂದು ಆಂದೋಲನದ ಅಧ್ಯಕ್ಷತೆಯಿಂದ ನಿವೃತ್ತರಾಗುತ್ತಿದ್ದ ಝಿಂಬಾಬ್ವೆ ಅಧ್ಯಕ್ಷ ಕಟುವಾಗಿ ನುಡಿದರು. ಆಂದೋಲನದ ಧೋರಣೆಗಳ ಮರುಪರಿಶೀಲನೆ ಆಗಬೇಕೆಂದು ಬಯಸುತ್ತಿರುವವರಿಗೆ ಕೋಪೋದ್ರಿಕ್ತರಾಗಿ ಉತ್ತರಿಸಿದರು.

ಸುಧಾರಣೆಯೆಂದರೆ ನೀತಿಗಳನ್ನು ಗಾಳಿಗೆ ತೂರುವುದಲ್ಲ. ಸಾಮ್ರಾಜ್ಯಶಾಹಿ, ವಸಾಹತುಶಾಹಿ ನವವಸಾಹತುಶಾಹಿ, ವರ್ಣದ್ವೇಷ, ಝಿಯೊನಿಸಂನ ಹಸ್ತಕ್ಷೇಪದ ಬೆದರಿಕೆಯ ವಿರುದ್ಧ ಹೋರಾಟದ ನೀತಿ ಹಿಂದಿನಷ್ಟೇ ಈಗಲೂ ಪ್ರಸ್ತುತ ಅದನ್ನು ಕರಡಿನಲ್ಲಿ ಸೂಕ್ತವಾಗಿ ಒತ್ತಿಹೇಳಬೇಕೆಂದು ಈ ದೇಶಗಳು ಒತ್ತಾಯಿಸಿದವು. ದಸ್ತಾವೇಜಿನಲ್ಲಿ ಇದರ ಸರಿಯಾದ ಪ್ರಸ್ತಾಪವಿರುವಂತೆ ಮಾಡುವಲ್ಲಿ ಯಶಸ್ವಿಯಾದವು.

ಇಸ್ರೇಲನ್ನು ಮಾನ್ಯಮಾಡಿರುವ ಯುಗೋಸ್ಲಾವಿಯಾ ತಯಾರಿಸಿದ ಈ ಕರಡು 102 ದೇಶಗಳು ಈಗಾಗಲೇ ಮಾನ್ಯ ಮಾಡಿರುವ ಪ್ಯಾಲೆಸ್ಟೈನ್ ಪ್ರಭುತ್ವದ ಸ್ಥಾಪನೆಯ ಪ್ರಸ್ತಾಪವನ್ನೇ ಮಾಡಿರಲಿಲ್ಲ! ಯಾಸೆರ್ ಅರಾಫತ್ ಇದನ್ನು ಪ್ರತಿಭಟಿಸಿದರು. ರಾಜೀವಗಾಂಧಿ ಆಗ ಇದನ್ನು ದಸ್ತಾವೇಜಿನಲ್ಲಿ ಸೇರಿಸಬೇಕೆಂದು ಸೂಚಿಸಿದರು. ಆದರೂ ಈ ಸಮ್ಮೇಳನ ಆಕ್ರಮಿತ ಪ್ರದೇಶಗಳಿಂದ ಇಸ್ರೇಲೀ ಪಡೆಗಳ ವಾಪಸಾತಿ ಒತ್ತಾಯಿಸಿ, ಪ್ಯಾಲೆಸ್ತೈನಿಯನ್ನರ ಧೀರ ಹೋರಾಟಗಳನ್ನು ಬೆಂಬಲಿಸಿ ಯಾವುದೇ ನಿರ್ಣಯ ಅಂಗೀಕರಿಸಿದ ಸುದ್ದಿ ಬಂದಿಲ್ಲ.”

ದಸ್ತಾವೇಜಿನ ಕರಡು ತಯಾರಿಸಿದವರು ಸ್ವಾತಂತ್ರ್ಯ ಹೋರಾಟ ನಿರತ ದೇಶಗಳೊಂದಿಗೆ ಸೌಹಾರ್ದತೆ, ಬೆಂಬಲವನ್ನು ಮತ್ತೊಮ್ಮೆ ಒತ್ತಿ ಹೇಳಬೇಕಾಗಿ ಕೂಡಾ ಬಂತು. ಹಿಂದೆ ಹೇಳಿದಂತೆ ಆಂದೋಲನ ‘ಸೈದ್ಧಾಂತಿಕ ಅಂಶಗಳನ್ನು ಬಿಟ್ಟುಕೊಡಬೇಕೆಂದು’ ಭಾರತ ಬೆಂಬಲಿಸಿದ ಕರಡು ಪ್ರತಿಪಾದಿಸಿತ್ತು.” “ಬೇರೆ - ಬೇರೆ ಸೈದ್ಧಾಂತಿಕ ಅಭಿಪ್ರಾಯಗಳಿರಲು ಸಾಧ್ಯ ಎಂಬ ನೀತಿಯ ಮೇಲೆ ನಾವು ಈ ಆಂದೋಲನವನ್ನು ಸೃಷ್ಟಿಸಿದೆವು. ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಸಿದ್ಧಾಂತಗಳನ್ನು ಕೃಢಿಸಬೇಕೆಂದು ನಿರೀಕ್ಷಿಸಿದೆವು” ಎಂದು ಈ ಕರಡು ಹೇಳಿದ್ದುದನ್ನು ಕೈಬಿಟ್ಟು ಅದರ ಬದಲು “ಶಾಂತಿಯುತ ಸಹಬಾಳ್ವೆ”ಯ ಪದವನ್ನು ಕೊನೆಗೂ ಹಾಕಲಾಯಿತು.

ಹೀಗೆ ಅಲಿಪ್ತ ಆಂದೋಲನವನ್ನು ಇಂತಹ ನಪುಂಸಕತನಕ್ಕೆ ಇಳಿಸುವ ಬುಡಮೇಲು ಕೃತ್ಯದ ವಿರುದ್ಧ ಹೋರಾಡಿದ ದೇಶಗಳನ್ನು ಎಲ್ಲಾ ಪ್ರಗತಿಪರ ಶಕ್ತಿಗಳು ಅಭಿನಂದಿಸಬೇಕು. ಆದರೆ ಇಷ್ಟರಿಂದಲೇ ಸಂತೃಪ್ತರಾಗುವಂತಿಲ್ಲ. ಯಾಕೆಂದರೆ ಬಹುಪಾಲು ದೇಶಗಳು ಮೂಲ ಕರಡನ್ನು ಬೆಂಬಲಿಸಿದ್ದವೆಂದು ವರದಿಯಾಗಿದೆ. ಮೇಲೆ ಹೇಳಿದ ತಿದ್ದುಪಡಿಗಳನ್ನೆಲ್ಲ ಸ್ವೀಕರಿಸಲಾಯಿತಾದರೂ, ಆಂದೋಲನದ ನೀತಿಗಳನ್ನು ಮರುಸ್ಥಾಪನೆಯಾದರೂ ಕೂಡಾ ಈ ದಸ್ತಾವೇಜು ಆಚರಣೆಯಲ್ಲಿ ಈ ನೀತಿಗಳನ್ನು ದುರ್ಬಲಗೊಳಿಸಲಿಕ್ಕಿಲ್ಲ ಎಂಬ ಬಗ್ಗೆ ಭರವಸೆ ನೀಡಲಾರದು. ಅತ್ಯಂತ ಜಾಗರೂಕ ದೃಷ್ಟಿಯಿಂದ ಮಾತ್ರವೇ ಅಲಿಪ್ತ ಆಂದೋಲನ ತನ್ನ ಘೋಷಿತ ಮೂಲಭೂತ ನೀತಿಗಳಿಗೆ ಕಟ್ಟುನಿಟ್ಟಾಗಿ ಬದ್ಧವಾಗಿರುವಂತೆ ನೋಡಿಕೊಳ್ಳಲು ಸಾಧ್ಯ.

ಮೂರನೇ ಜಗತ್ತಿನ ತುರ್ತು ಸಮಸ್ಯೆಗಳನ್ನು ಶೃಂಗ ಸಮ್ಮೇಳನ ಚರ್ಚಿಸಿತು. ಈ ಬಗ್ಗೆ ಮೂಲಭೂತ ನಿಲುವಿನಲ್ಲಿ ಭಿನ್ನಾಭಿಪ್ರಾಯಗಳಿರಲು ಸಾಧ್ಯವಿರಲಿಲ್ಲ. ಆದರೂ ಇದೆಲ್ಲಾ ಅವಲಂಬಿಸಿರುವುದು ‘ಹೊಸದಿಕ್ಕಿ’ನ ಸಂದರ್ಭದಲ್ಲಿ ಈ ದೇಶಗಳ ಆಚರಣೆ ಹೇಗಿರುತ್ತದೆ ಎಂಬುದರ ಮೇಲೆ.

ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಪಟ್ಟಂತೆ ಮುಂದುವರಿದ ದೇಶಗಳ ರಕ್ಷಣಾತ್ಮಕ ನೀತಿ ಮತ್ತು ಅವು ಅನುಸರಿಸುವ ದಬ್ಬಾಳಿಕೆಯ ಕ್ರಮಗಳನ್ನು ಪ್ರತಿರೋಧಿಸಬೇಕೆಂದು ಸಮ್ಮೇಳನ ದೃಢನಿರ್ಧಾರ ಮಾಡಿತು. ಉರುಗ್ವೆ ಸುತ್ತಿನ ಮಾತುಕತೆಗಳ ಯಶಸ್ವೀ ಮುಕ್ತಾಯದ ಮಹತ್ವವನ್ನು ಅದು ಒತ್ತಿ ಹೇಳಿತು.

ತಿದ್ದುಪಡಿಗೊಂಡ ಸಮ್ಮೇಳನದ ಘೋಷಣೆ ಕ್ಯೂಬಾದ ವಿರುದ್ಧ ಅಮೆರಿಕಾ ತನ್ನ ವೈರಪೂರ್ಣ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕೆಂದು ಒತ್ತಾಯಿಸಿತು. ಲ್ಯಾಟಿನ್ ಅಮೆರಿಕಾ ದೇಶಗಳ ಇತ್ತೀಚಿನ ಪ್ರಯತ್ನಗಳಿಗೆ ಬೆಂಬಲ ನೀಡಿತು. ಲೆಬನಾನ್ ಪ್ರದೇಶಗಳಿಂದ ಇಸ್ರೇಲಿ ಪಡೆಗಳ ವಾಪಸಾತಿಗೆ ಕರೆ ನೀಡಿತು. ನಮೀಬಿಯಾ ಚುನಾವಣೆಗಳನ್ನು ಹುಸಿಗೊಳಿಸುವ ಅಪಾಯವಿರುವುದರಿಂದ, ಚುನಾವಣೆಗಳ ಉಸ್ತುವಾರಿಗೆ ಸಾಕಷ್ಟು ಸಿಬ್ಬಂದಿಯನ್ನು ಕಳುಹಿಸುವಲ್ಲಿ ವಿಶ್ವ ಸಂಸ್ಥೆ ಮತ್ತೆ ಭದ್ರತಾ ಸಮಿತಿ ವಿಫಲಗೊಂಡಿರುವುದರಿಂದ ನಮೀಬಿಯಾಕ್ಕೆ ಒಂದು ಅಲಿಪ್ತ ತಂಡ ಕಳುಹಿಸಲು ಶೃಂಗ ಸಮ್ಮೇಳನ ನಿರ್ಧರಿಸಿತು. ವಿಶ್ವ ಇನ್ನೂ ಅಗಾಧ ನ್ಯೂಕ್ಲಿಯರ್ ಶಸ್ತ್ರಾಗಾರ ಬೆದರಿಕೆ ಎದುರಿಸುತ್ತಿದೆ, ಅದನ್ನು ಮತ್ತಷ್ಟು ಅಧಿಕಗೊಳಿಸಲಾಗುತ್ತಿದೆ. [illegible] ವ್ಯಾಪಕಗೊಳಿಸಲಾಗುತ್ತಿದೆ ಎಂಬುದರ ಬಗ್ಗೆ ಆತಂಕ ವ್ಯಕ್ತಪಡಿಸಿತು.

“ಆರ್ಥಿಕ ಅಂಶವನ್ನೊಳಗೊಳ್ಳದ ವೈಷಮ್ಯ ಪರಿಹಾರದ ಪ್ರಕ್ರಿಯೆ ಬಹುಕಾಲ ಉಳಿಯುವ ಸಂಭವವಿಲ್ಲ” ಎಂದು ಸರಿಯಾಗಿಯೇ ಹೇಳಿರುವ ಅಲಿಪ್ತ ಆಂದೋಲನದ ಸಾಲಹೊರೆ ಕುರಿತಾದ ದಸ್ತಾವೇಜು 1320 ಶತಕೋಟಿ ಡಾಲರುಗಳನ್ನು ಮೀರಿದ ಅಭಿವೃದ್ಧಿಶೀಲ ದೇಶಗಳ ವಿದೇಶಿ ಸಾಲ ಹೊರೆ ಸಾಮಾಜಿಕ, ಆರ್ಥಿಕ ಬೆಳವಣಿಗೆಗಳ ನಿವ್ವಳ ವರ್ಗಾವಣೆಗೆ ಗಮನೀಯವಾಗಿ ಹಚ್ಚಬೇಕು. ವಿದೇಶಿ ಸಾಲದ ಸಮಸ್ಯೆಗೆ ಶಾಶ್ವತ ಪರಿಹಾರಬೇಕು, ವಿಶ್ವ ವ್ಯಾಪಾರ ಉದಾರಗೊಳ್ಳಬೇಕು, ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಆರ್ಥಿಕಗಳನ್ನು ರಕ್ಷಿಸಿಕೊಳ್ಳಲು ಹಾಕಿದ ತಡೆಗಳನ್ನು ತೆಗೆಯಬೇಕು ಹಾಗೂ ಸರಕುಗಳಿಗೆ ಪ್ರತಿಫಲಕಾರಿ ಬೆಲೆ ನೀಡಬೇಕು ಎಂದು ಕರೆ ನೀಡಿತು. ಇಕ್ವೆಡೋರ್‌ನ ಅಧ್ಯಕ್ಷ ಬೋರ್ಜ್ ಹೇಳಿದಂತೆ ಸಾಲದ ಪ್ರಶ್ನೆ ಒಂದು ಆರ್ಥಿಕ ಪ್ರಶ್ನೆಯಲ್ಲ. ಅದೀಗ ರಾಜಕೀಯ ಪ್ರಶ್ನೆಯಾಗಿದೆ. ಇದು ವಾಸ್ತವಿಕತೆ. ಹೊಸ ‘ಮಾತುಕತೆ’ಯ ದಿಕ್ಕಿನ ಹುಡುಕಾಟದಲ್ಲಿ ಅಲಿಪ್ತ ಆಂದೋಲನ ಅದನ್ನು ಕೇವಲ ಆರ್ಥಿಕ ಚೌಕಾಶಿಯ ಪ್ರಶ್ನೆಯಾಗಿ ಮಾಡಿದರೆ ಪರಿಸ್ಥಿತಿಯ ಗಂಭೀರತೆಗೆ ಅನ್ಯಾಯವೆಸಗಿದಂತೆ. ಯಾಕೆಂದರೆ ಇಂತಹ ಚೌಕಾಶಿಯ ಸೂತ್ರ ಸಾಲ ನೀಡಿದವರ ಬಳಿಯಲ್ಲಿರುತ್ತದೆ.

ಅಲಿಪ್ತ ಸಮ್ಮೇಳನ ಆರ್ಥಿಕ ಪ್ರಶ್ನೆಗಳ ಮೇಲೆ ಶೃಂಗಮಟ್ಟದಲ್ಲಿ ಉತ್ತರ - ದಕ್ಷಿಣ ಸಮಾಲೋಚನೆಗೆ ಕರೆ ನೀಡಿತು. ಮುಂದುವರಿದ ದೇಶಗಳು ವಾತಾವರಣವನ್ನು ಕಲುಷಿತಗೊಳಿಸುವ ವಿರುದ್ಧ, ನ್ಯೂಕ್ಲಿಯರ್ ಕಸ ರಾಶಿ ಹಾಕುವುದನ್ನು ಪ್ರತಿಭಟಿಸಿದ ಸಮ್ಮೇಳನ ರಾಜೀವ ಗಾಂಧಿಯವರ ‘ಪೃಥ್ವಿ ರಕ್ಷಣಾ ನಿಧಿ’ ನಿರ್ಮಿಸಬೇಕೆಂಬ ಸೂಚನೆಯನ್ನು ಬೆಂಬಲಿಸಿತು.

ಅಫ್‌ಘಾನಿಸ್ತಾನದ ಗಂಭೀರ ಪ್ರಶ್ನೆಯಲ್ಲಿ, ಅಲಿಪ್ತ ಆಂದೋಲನ ಒಂದು ಪಾತ್ರವಹಿಸಬೇಕೆಂಬ ಪ್ರಸ್ತಾಪ ಪಾಕಿಸ್ತಾನದಿಂದಾಗಿ ಬಿದ್ದು ಹೋಯಿತು. ಆದ್ದರಿಂದ ಈ ಸಮಸ್ಯೆ ಪರಿಹರಿಸುವಲ್ಲಿ ನಿವೃತ್ತರಾಗುತ್ತಿರುವ ಅಧ್ಯಕ್ಷರ ಪ್ರಯತ್ನಗಳ ಬಗ್ಗೆ ಮೆಚ್ಚುಗೆ ಸೂಚಿಸುವಲ್ಲೇ ಶೃಂಗಸಭೆ ತೃಪ್ತವಾಗಬೇಕಾಯಿತು.

ಒಟ್ಟಾರೆಯಾಗಿ ಶೃಂಗಸಭೆಯ ಬಗ್ಗೆ ಏನೆನ್ನಬಹುದು? ಬಹಳ ವರ್ಷಗಳ ಸಿದ್ಧತೆಯ ನಂತರ ಅಲಿಪ್ತ ಆಂದೋಲನವನ್ನು ಅದರ ಮೂಲ ಉದ್ದೇಶದಿಂದ ದೂರ ಸೆಳೆದು ಅದನ್ನು ಯಾವುದೇ ನೀತಿ, ಧೋರಣೆಯಿಲ್ಲದ ಒಂದು ಸ್ವರೂಪ ಹೀನ ಕೂಟವಾಗಿ ಮಾಡಲು ಒಂದು ಸಂಯೋಜಿತ ಪ್ರಯತ್ನ ನಡೆಯಿತು. ಇದಕ್ಕೆ ಭಾರತದ ಬೆಂಬಲವೂ ಇತ್ತೆಂಬುದು ನಾಚಿಕೆಗೇಡಿನ ಸಂಗತಿ. ಆದರೆ ಈ ಬಹಿರಂಗ ಪಿತೂರಿಯನ್ನು ಸಮಾಜವಾದಿ ಮತ್ತು ಆಫ್ರಿಕನ್ ಗಡಿ ದೇಶಗಳು ವಿಫಲಗೊಳಿಸಿದವು.

ಈಗ ನೋಡಿರುವ ಶಕ್ತಿಗಳು ತಮ್ಮ ವ್ಯವಹಾರವನ್ನು ತಾವು ಬಯಸಿದ ದಿಕ್ಕಿನಲ್ಲೇ ಮುಂದುವರಿಸಿ, ಆಂದೋಲನವನ್ನು ಆ ದಿಕ್ಕಿಗೆಳೆಯಲು ಪ್ರಯತ್ನ ಮುಂದುವರಿಸುತ್ತವೆ. ಇದೇನು ಸುಲಭದ ಕೆಲಸವಲ್ಲ ಎಂದೂ ಈ ಸಮ್ಮೇಳನ ತೋರಿಸಿಕೊಟ್ಟಿದೆ. ಆದರೂ ಅಲಿಪ್ತ ಆಂದೋಲನ ಸರಿಯಾದ ಹಾದಿಯಲ್ಲೇ ಉಳಿಯಬೇಕಾದರೆ ಎಲ್ಲಾ ಪ್ರಗತಿಪರ ಶಕ್ತಿಗಳು, ದೇಶಗಳು ಜಾಗರೂಕರಾಗಿರಬೇಕು, ತಮ್ಮ ಸರಕಾರಗಳ ರಾಜಿಗಿಳಿಯುವ ಪ್ರಯತ್ನಗಳನ್ನು ವಿಫಲಗೊಳಿಸಬೇಕು.

ಬೋಫೋರ್ಸ್ ದುರ್ನಾತವನ್ನು ಬಣ್ಣದ ಮಾತುಗಳು ಮುಚ್ಚಲಾರವು

ಮಾಜಿ ಪ್ರಧಾನ ದಂಡನಾಯಕ ಜನರಲ್ ಸುಂದರ್‌ಜಿ 'ಇಂಡಿಯಾ ಟುಡೆ' ಪತ್ರಿಕೆಗೆ ನೀಡಿದ ಒಂದು ವಿವರವಾದ ಸಂದರ್ಶನದಲ್ಲಿ ಬೆಳಕಿಗೆ ತಂದ ಸಂಗತಿಗಳಿಗೆ ಪ್ರತ್ಯುತ್ತರವೊಂದನ್ನು ರಕ್ಷಣಾ ಸಚಿವಾಲಯ ಮೂರು ದಿನಗಳ ತೀವ್ರ ಒದ್ದಾಟದ ನಂತರ ನೀಡಿದೆ.

ಸುಂದರ್‌ಜಿ ಬಹಿರಂಗಗೊಳಿಸಿದ ಸಂಗತಿಯ ಸಾರ ಇಷ್ಟು. 64 ಕೋಟಿ ರೂ.ಗಳ ಲಂಚ ಪಡೆದವರು ಯಾರು ಎಂದು ಬೊಫೋರ್ಸ್ ತಿಳಿಸದಿದ್ದರೆ ಅವರೊಡನೆ ಕಾಂಟ್ರಾಕ್ಟ್ ಅಂತ್ಯಗೊಳಿಸುವ ಬೆದರಿಕೆ ಹಾಕಬೇಕೆಂದು ಅವರು ಶಿಫಾರಸು ಮಾಡಿದ್ದರು. 1987ರ ಜೂನ್ 12ರಂದು ಕೆ[illegible] ಟಿಪ್ಪಣಿಯಲ್ಲಿ ಅವರು ಇದನ್ನು ತಿಳಿಸಿದ್ದರು. ಜುಲೈ 14ರ ಟಿಪ್ಪಣಿಯಲ್ಲಿ ಅದನ್ನು ಮತ್ತೊಮ್ಮೆ ಹೇಳಿದರು. ಆಗಿನ ರಕ್ಷಣಾ ರಾಜ್ಯಮಂತ್ರಿ ಅರುಣ್‌ಸಿಂಗ್ ಕೂಡಾ ಇದೇ ಅಭಿಪ್ರಾಯ ತೋರ್ಪಡಿಸಿದರು. ಆದರೆ ಸ್ವತಃ ರಾಜೀವ್ ಗಾಂಧಿಯವರೇ ಅದನ್ನು ತಳ್ಳಿಹಾಕಿದರು.

ರಕ್ಷಣಾ ಸಚಿವಾಲಯ ತನ್ನ ಪ್ರತ್ಯುತ್ತರದಲ್ಲಿ ಸುಂದರ್‌ಜಿಯವರು ಇಂತಹ ಶಿಫಾರಸ್ಸು ಮಾಡಿದ್ದರು. ಇದರಿಂದ ಹೊಸ ತೋಪುಗಳು ಬರುವುದು 18 ರಿಂದ 24 ತಿಂಗಳು ತಡವಾದರೂ ಅದೊಂದು "ಸ್ವೀಕರಿಸ ಬಹುದಾದ ಅಪಾಯ" ಎಂದು ಅವರು ಹೇಳಿರುವುದಾಗಿ ಕೂಡ ಒಪ್ಪಿಕೊಂಡಿದೆ. ಆದರೆ ಜನರಲ್ ಸುಂದರ್‌ಜಿ ನೀಡಿರುವುದು ಕೇವಲ ಮಿಲಿಟರಿ ಪರಿಶೀಲನೆಯಷ್ಟೆ. ಸುಭದ್ರತೆಯ ಪೂರ್ಣ ಪರಿಶೀಲನೆಯ ಅಧಿಕಾರ ಇರುವುದು ಸರಕಾರಕ್ಕೆ ರಾಜಕೀಯ ಅಧಿಕಾರಕ್ಕೆ ಮಾತ್ರ ಎಂಬ ವಾದವನ್ನು ಅದೀಗ ಮುಂದೊಡ್ಡಿದೆ. 1987ರಲ್ಲಿ ಭದ್ರತಾ ಸನ್ನಿವೇಶ ಇಂತಹ ಅಪಾಯಕ್ಕೆ ಹೆಗಲು ಕೊಡುವಂತಹದಾಗಿರಲಿಲ್ಲ ಎಂಬುದು ಅದರ ಸಮಜಾಯಿಷಿ.

ಆದರೆ ಅರುಣ್‌ಸಿಂಗ್‌ರ ನಿಲುವೇನಿತ್ತು ಎಂಬ ಬಗ್ಗೆ ಈ ಮಾರುತ್ತರ ಮೌನವಾಗಿದೆ. ಯಾಕೆಂದರೆ ಅವರದ್ದು ಮಿಲಿಟರಿ ಅಭಿಪ್ರಾಯವಾಗಿರಲಿಲ್ಲ. ಅವರು ಆಗ ರಾಜಕೀಯ ಅಧಿಕಾರದ ಒಂದು ಭಾಗವೇ ಆಗಿದ್ದರಲ್ಲ! ಆಗಿನ ರಕ್ಷಣಾ ರಾಜ್ಯಸಚಿವರ ಬೋಫೋರ್ಸ್ ಕಾಂಟ್ರಾಕ್ಟ್ ಅಂತ್ಯಗೊಳಿಸ ಬೇಕೆಂಬ ದೃಢ ಅಭಿಪ್ರಾಯವನ್ನು ಏಕೆ ರಾಜೀವ್‌ಗಾಂಧಿಯವರು ತಳ್ಳಿಹಾಕಿದರೆಂಬ ಪ್ರಶ್ನೆಯನ್ನು ಕುರಿತಂತೆ ಸುಂದರ್‌ಜಿಯವರ ಮಾತನ್ನು ನಿರಾಕರಿಸುವುದು ರಕ್ಷಣಾ ಸಚಿವಾಲಯಕ್ಕೆ ಸಾಧ್ಯವಾಗಿಲ್ಲವೆಂಬುದು ಸ್ವಯಂವೇದ್ಯ.

ಹೀಗೆ ಈ ಮಾರುತ್ತರದ ನಂತರವೂ ಸುಂದರ್‌ಜಿ ಬಹಿರಂಗಗೊಳಿಸಿದ ಸಂಗತಿಗಳು ಹಾಗೆಯೇ ಉಳಿಯುತ್ತವೆ. ಅಂದರೆ ಸೈನಿಕ ಸಿದ್ಧತೆಯ ದೃಷ್ಟಿಯಿಂದ ಬೊಫೋರ್ಸ್ ವ್ಯವಹಾರದ ರದ್ದತಿ ಸ್ವೀಕಾರಾರ್ಹವಲ್ಲವೆಂದು ಪ್ರಧಾನ ದಂಡನಾಯಕರು ಹೇಳಿರುವುದಾಗಿ ಪ್ರಧಾನ ಮಂತ್ರಿಗಳು ರಕ್ಷಣಾಮಂತ್ರಿ ಕೆ.ಸಿ.ಪಂತ್ ಮತ್ತು ಇತರ ಅಧಿಕೃತ ವಕ್ತಾರರು ಸಂಸತ್ತಿನಲ್ಲಿ ಮತ್ತೆ-ಮತ್ತೆ ಹೇಳಿಕೆಗಳನ್ನು ನೀಡಿದರು. ಪ್ರಧಾನ ದಂಡನಾಯಕರೇ ತದ್ವಿರುದ್ಧ ಅಭಿಪ್ರಾಯ ಹೊಂದಿರುವಾಗ ಈ ಸುಳ್ಳನ್ನು ಮತ್ತೆ-ಮತ್ತೆ ಏಕೆ ಹೇಳಲಾಯಿತು ಎಂಬುದಕ್ಕೆ ರಕ್ಷಣಾ ಸಚಿವಾಲಯ ನಿರುತ್ತರವಾಗಿದೆ.

ಪ್ರಶ್ನೆ ಬೋಫೋರ್ಸ್ ತೋಪಿನ ಗುಣಮಟ್ಟದ್ದಲ್ಲ. ಬದಲಿಗೆ ರಕ್ಷಣಾ ಪಡೆಗಳು ಯಾವುದೇ ಸಲಕರಣೆಗಳನ್ನು ಕೊಂಡುಕೊಳ್ಳುವಾಗ ಲಂಚ, ಭ್ರಷ್ಟಾಚಾರಗಳಿಗೆ ಅನುಮತಿಯಿದೆಯೇ ಎಂಬುದೇ ಮುಖ್ಯ ಪ್ರಶ್ನೆ. ಸುಂದರ್‌ಜಿಯವರು ಸರಿಯಾದ ಪ್ರಶ್ನೆಯನ್ನೇ ಎತ್ತಿದ್ದಾರೆ. ನಿಜವಾದ ಪ್ರಶ್ನೆ ದೇಶದ ಹಣ ಸುಲಿಗೆ ಮಾಡಿರುವ ಅಪರಾಧಿಗಳು ಯಾರು ಎಂಬುದು.

ರಾಜೀವ್‌ಗಾಂಧಿಯವರ ಆಜ್ಞಾನುಸಾರ ರಕ್ಷಣಾ ಸಚಿವಾಲಯ ಕಟ್ಟಿರುವ ಮಾತಿನ ಮಂಟಪ, ಈ ಹಗರಣದ ಕೊಳೆ ವಾಸನೆಯನ್ನು ಮುಚ್ಚಿರಲಾರದು.ಸುಳ್ಳು ಹೇಳುವ, ಮುಚ್ಚಿಹಾಕುವ, ತಪ್ಪುದಾರಿಗೆಳೆಯುವ ಪ್ರತಿಯೊಂದು ಹೆಜ್ಜೆಯೂ ರಾಜೀವ ಸರ್ಕಾರವನ್ನು ಪ್ರಪಾತಕ್ಕೆ ತಳ್ಳುತ್ತದೆಯಷ್ಟೆ.

ಈ ಹಗರಣದ ಬಗ್ಗೆ ಗಮನಾರ್ಹ ಸಾಕ್ಷ್ಯವನ್ನು ಸಂಗ್ರಹಿಸಿದ ಹಿಂದೂ ಪತ್ರಿಕೆಯ ಸಂಪಾದಕೀಯ ಹೇಳಿರುವಂತೆ "ಒಂದು ಪ್ರಜಾಪ್ರಭುತ್ವದಲ್ಲಿ, ಜನರಲ್ ಸುಂದರ್‌ಜಿಯವರು ಬೆಳಕಿಗೆ ತಂದ ಸಂಗತಿಗಳ ನಂತರ, ವೈಯಕ್ತಿಕ ತಪ್ಪು ನಡತೆ ಇನ್ನೂ ಸಿದ್ಧಗೊಂಡಿಲ್ಲ ಎಂಬ ನೆವದ ಮೇಲೆ ಯಾವ ಮುಖಂಡನೂ, ಪಕ್ಷವೂ, ಸರಕಾರವೂ ನ್ಯಾಯವಾಗಿ ಅಧಿಕಾರಕ್ಕೆ ಅತುಕೊಳ್ಳುವುದು ಸಾಧ್ಯವಿಲ್ಲ."

★ ★ ★

ಭಾರತ್ ಬಂದ್ ಮತ್ತಷ್ಟು ಸುದ್ದಿಗಳು

ಉ.ಕ.ಜಿಲ್ಲೆ

ಭಾರತ್ ಬಂದ್ ಯಶಸ್ವಿಗೊಳಿಸಲು ಜಿಲ್ಲೆಯಾದ್ಯಂತ ಪಕ್ಷದ ಕಾರುಜಾಥ ಏರ್ಪಡಿಸಿ ಜಿಲ್ಲೆಯ ಕರಾವಳಿ ಉದ್ದಕ್ಕೂ ರಾಜೀವ್‌ಗಾಂಧಿ ರಾಜೀನಾಮೆಗೆ ಒತ್ತಾಯಿಸುವಪ್ರಚಾರ ಸಭೆಗಳನ್ನು ಸಂಘಟಿಸಲಾಯಿತು. 3 ದಿನಗಳು ನಡೆದ ಈ ಜಾಥಾ 'ದಾಂಡೇಲಿ'ಯಿಂದ ಪ್ರಾರಂಭವಾಗಿ ಕಾಳೀ ಯೋಜನೆಯ ಅಂಬಿಕಾ ನಗರ, ಕೈಗಾ ಕೇಂದ್ರದ ಯಲ್ಲಾಪುರ, ಕಾರವಾರ, ಅಂಕೋಲಾ, ಕುಮುಟಾ ಹೊನ್ನಾವರ, ಭಟ್ಕಳ ತಾಲೋಕುಗಳಲ್ಲಿ ಯಶಸ್ವಿ ಜಾಥ, ಸಭೆಗಳನ್ನು ನಡೆಸಲಾಯಿತು.

ಕುಮಟಾದಲ್ಲಿ ಕಾಂಗ್ರೆಸ್ ಹೆಸರಿನಲ್ಲಿ ಆರ್.ಎಸ್.ಎಸ್.ನವರು ಸಭೆಗೆ ಅಡ್ಡಿಪಡಿಸಿದರು ಅದನ್ನು ವಿಫಲಗೊಳಿಸಲಾಯಿತು. ಕಾ॥ ಎಂ.ಎಸ್.ಧಾರೇಶ್ವರ, ಹರೀಶನಾಯ್ಕ, ಶತೀಶನಾಯ್ಕ, ಜಾಥ ನೇತೃತ್ವ ವಹಿಸಿದ್ದರು. ಜಾಥದ ಉದ್ದಕ್ಕೂ ಜನರು-ಕಾರ್ಮಿಕರು ಉತ್ಸಾಹದಿಂದ ಜಾಥ ಬರಮಾಡಿಕೊಂಡು ಸಭೆಗಳಲ್ಲಿ ಅವರ ಭಾಷಣವನ್ನು ಆಲಿಸಿದರು.

ದಾಂಡೇಲಿಯಲ್ಲಿ ಆಗಸ್ಟ್ 22ರಿಂದ 26ರವರೆವಿಗೂ ಪ್ರತಿ ವಾರ್ಡ್‌ಗಳಲ್ಲಿ ಸಭೆ ನಡೆಸಲಾಯಿತು. 29ರಂದು ಕಾರ್ಖಾನೆಗಳಲ್ಲಿ ಕಾರ್ಮಿಕರು ಮುಷ್ಕರ. ಯಶಸ್ವಿಗೊಳಿಸಿ ಸಾವಿರ ಜನರ ಮೆರವಣಿಗೆ ನಡೆಯಿತು. 29ರಂದೆ ಪಕ್ಷದ ಕಾರ್ಯಕರ್ತರನ್ನು ಬಂಧಿಸಲಾಗಿತ್ತು. 30ರಂದು ಸಿ.ಪಿ.ಐ.(ಎಂ), ಜನತಾದಳದ 49 ಮಂದಿ ಕಾರ್ಯಕರ್ತರನ್ನು ಬಂಧಿಸಲಾಯಿತು.

ಕುಷ್ಟಗಿ

ರಾಯಚೂರು ಜಿಲ್ಲೆ ಕುಷ್ಟಗಿಯಲ್ಲಿ ಬಂದ್ ಯಶಸ್ವಿಯಾಯಿತು. ಎಲ್ಲಾ ಅಂಗಡಿಗಳು ಮುಚ್ಚಿದ್ದವು. ಸುತ್ತಲ 5 ಗ್ರಾಮಗಳ 150 ಜನರು ಸಿ.ಪಿ.ಐ.(ಎಂ) ನೇತೃತ್ವದಲ್ಲಿ ಮೆರವಣಿಗೆ ಹೊರಟಾಗ ಪೊಲೀಸರೊಡನೆ ಘರ್ಷಣೆಗಳು ನಡೆದವು. ಅರ್‍ಯಾಕಬಾಟಲಿನ್ ಫ್ಯಾಕ್ಟರಿ ಮುಷ್ಕರ ನಡೆಯಿತು. ಕಾ॥ ಆರ್.ಕೆ.ದೇಸಾಯಿ, ಅಡಿವೆಪ್ಪ, ಗ್ಯಾನಪ್ಪ ವಡಿಗೇರ ನೇತೃತ್ವ ವಹಿಸಿದ್ದರು.

ಕಾಟಾಪುರ: ಈ ಗ್ರಾಮದಲ್ಲಿ ರೈತಸಂಘದ ಮೆರವಣಿಗೆ ನಡೆಸಿ ಬಂದ್ ಯಶಸ್ವಿಯಾಯಿತು. ಹೋಟೆಲ್, ಅಂಗಡಿಗಳು ಕಿರಾಣಿ ಅಂಗಡಿ, ಮುಚ್ಚಿದ್ದವು.

ತಳವ ನೀರ ಮಂಡಲ ಪಿಕೆಟಿಂಗ್: ರೈತ-ಕೃಷಿ ಕೂಲಿಗಾರರ ಬೇಡಿಕೆ ಆಗ್ರಹಿಸಿ 80 ಮಂದಿ ರೈತರು ಆಗಸ್ಟ್ 25 ರಂದು ಮಂಡಲ ಕಛೇರಿ ಪಿಕೆಟಿಂಗ್ ನಡೆಸಿದರು.

ರಾಮದುರ್ಗ

ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲೋಕಿನಲ್ಲಿ ಬಂದ್ ಯಶಸ್ವಿಗೊಂಡಿದೆ. ಸಿ.ಪಿ.ಐ.(ಎಂ), ಜನತಾದಳ, ಎಸ್.ಎಫ್.ಐ.. ಹಾಗೂ ನಾಗರೀಕರು ಮೆರವಣಿಗೆ ನಡೆಸಿ ತಹಸೀಲ್ದಾರ್ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಿದರು. ಜನತಾದಳದ ಅಧ್ಯಕ್ಷ ಮಾಜಿಶಾಸಕ ಶ್ರೀ ಬಿ.ಬಿ.ಹಿರೇರೆಡ್ಡಿ, ಸಿ.ಪಿ.ಐ.(ಎಂ) ನಾಯಕ ವಿ.ಪಿ.ಕುಲಕರ್ಣಿ, ವಿದ್ಯಾರ್ಥಿ ಮುಖಂಡ ಕೆ.ಜಿ. ವಗ್ಗರ ಮಾತನಾಡಿದರು.

ಯುವ ಸಮಾವೇಶ

ಪುಟ 3 ರಿಂದ

[illegible] ಭತ್ಯೆ, ಶಿಕ್ಷಣ - ಉದ್ಯೋಗ ಮೂಲಭೂತ ಹಕ್ಕನ್ನಾಗಿ ಮಾಡಬೇಕು. ಮುಚ್ಚಿದ ಕಾರ್ಖಾನೆ ತೆರೆಯಬೇಕು ಪ್ರಗತಿ ಪರ ಭೂ ಸುಧಾರಣೆ , ಕೋಮು ಘರ್ಷಣೆಗೆ ಪ್ರೇರಣೆ ನೀಡುವವರ ಮೇಲೆ ಕಠಿಣ ಕ್ರಮ, ಮುಂತಾದ 17 ಬೇಡಿಕೆಗಳ ಕುರಿತು ನಿರ್ಣಯ ಸ್ವೀಕರಿಸಿ ಈ ಬೇಡಿಕೆಗೆ ಒತ್ತಾಯಿಸಿ ಮುಂದಿನ ಚಳುವಳಿಗೆ ಸಿದ್ಧರಾಗಲು ಸಮಾವೇಶ ಕರೆ ನೀಡಿತು. ಇತ್ತೀಚೆಗೆ ಭಯೋತ್ಪಾದಕರ ದಾಳಿಗೆ ಬಲಿಯಾದ ಡಿ.ವೈ.ಎಫ್.ಐ. ಪಂಜಾಬ್ ರಾಜ್ಯಕಾರ್ಯದರ್ಶಿ ಕಾ॥ ಸೋಹನ್‌ಸಿಂಗ್ ಜೋಷಿಯವರ ಹತ್ಯೆಯನ್ನು ಖಂಡಿಸಿತು.

ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ಕಾ॥ ಎಸ್.ಶಿವರಾಂ ಎಸ್. ಎಫ್.ಐ ರಾಜ್ಯ ಕಾರ್ಯದರ್ಶಿ ಕಾ॥ ಎಸ್. ವೈ. ಗುರುಶಾಂತರವರು ಈ ಐಕ್ಯ ಹೋರಾಟದ ಮಹತ್ವ ತಿಳಿಸಿ ಇದನ್ನು ಕೆಳಹಂತದಲ್ಲಿ ಹೇಗೆ ಕೊಂಡೊಯ್ಯಬೇಕೆಂದು ವಿವರಿಸಿದರು.

ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಸದಸ್ಯ ಕಾ॥ ಜಿ.ಎನ್. ನಾಗರಾಜ್‌ರವರು ಪ್ರಸಕ್ತ ರಾಜಕೀಯ ಪರಿಸ್ಥಿತಿ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಯುವ ಜನತೆ ನಿರ್ವಹಿಸಬೇಕಾದ ಜವಾಬ್ದಾರಿ ಕುರಿತು ದೀರ್ಘವಾಗಿ ಮಾತನಾಡಿದರು. ಸಿ.ಪಿ.ಐ.ನ ರಾಜ್ಯ ಸಹಕಾರ್ಯದರ್ಶಿ ಕಾ॥ ಜಗದೀಶ್ ಜನತಾದಳದ ಅಶೋಕ ನವಲಗುಂದ ಮಾತನಾಡಿದರು.

ಮೊದಲಿಗೆ ಡಿ.ವೈ.ಎಫ್.ಐನ ರಾಜ್ಯ ಸಹಕಾರ್ಯದರ್ಶಿ ಕಾ॥ಆರ್. ಜಯಕುಮಾರ್ ಸ್ವಾಗತಿಸಿ ಸಮಾವೇಶದ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು. ಯುವ ಜನತಾದಳದ ರಾಜ್ಯ ಅಧ್ಯಕ್ಷ ಅಶೋಕ ನವಲಗುಂದ ಸಮಾವೇಶದ ಅಧ್ಯಕ್ಷತೆ ವಹಿಸಿ ನಿರ್ಣಯ ಮಂಡಿಸಿದರು.

ಸೆಪ್ಟೆಂಬರ್ 25 ರಿಂದ 28 ರವರೆವಿಗೂ ವಿವಿಧ ಹಂತದ ಚಳುವಳಿಗೆ ಸಮಾವೇಶ ಕರೆ ನೀಡಿದೆ. 26 ರಂದು ರಾಜ್ಯದ ಎಲ್ಲಾ ಬಿ.ಡಿ.ಓ. ಕಛೇರಿ ಮಂಡಲಗಳ ಮುಂದೆ ಧರಣಿ ಸತ್ಯಾಗ್ರಹ, 27 ರಂದು ಬೆಂಗಳೂರಿನಲ್ಲಿ ಶಾಲಾ ಕಾಲೇಜು ಬಹಿಷ್ಕಾರ, 28 ರಂದು ರಾಷ್ಟ್ರವ್ಯಾಪಿ ವಿದ್ಯಾರ್ಥಿ ಮುಷ್ಕರದ ಕರೆಯಂತೆ ರಾಜ್ಯದಲ್ಲಿ ತರಗತಿ ಬಹಿಷ್ಕರಿಸಿ ಮೆರವಣಿಗೆ, ರೈಲ್ ರೋಕೋ ರೈಲು ರೋಕೋ ನಡೆಸಲು ಕರೆ ನೀಡಿತು.

ಭೂಮಿಗಾಗಿ....

ಪುಟ 5 ರಿಂದ

ತಮಗೆ ಕೂಲಿಗಳಾಗಿ ಅಗ್ಗವಾಗಿ ಮುಫತ್ತಾಗಿ. ಯಾವಾಗೆಂದರೆ ಆಗ, ಸಿಗಬೇಕಾದ ಜನ ತಮ್ಮ ಕಾಲಮೇಲೆ ನಿಲ್ಲುವ ಯಾವುದೇ ಯೋಚನೆ. ಅವರ ಶಕ್ತಿ ಬಲಿಯುವ ಯಾವುದೇ ಚಿಹ್ನೆ ಅಸಹನೀಯವಾಗಿರುವ ಭೂಮಾಲೀಕರ ಪೈಶಾಚಿಕ ಶಕ್ತಿಯೊಡನೆ ಸಂಘರ್ಷ ಎಂದರ್ಥ.

ಈ ಸಂಘರ್ಷದಲ್ಲಿ ಆಳುವ ವರ್ಗವನ್ನು ನೇರವಾಗಿ ಎದುರಿಸುವುದರ ಜೊತೆಗೇ ಅವರು ಹುಟ್ಟು ಹಾಕುವ ಸಿದ್ಧಾಂತಗಳನ್ನು ಗ್ರಾಮೀಣ ಬಡವರ ಐಕ್ಯತೆಯಲ್ಲಿ ಹುಟ್ಟಿಸುವ ಒಡಕನ್ನು ಎದುರಿಸಲು ಸ್ಥಿರಸಂಕಲ್ಪದಿಂದ ಮುನ್ನಡೆಯಬೇಕು.

ಭಾರತದ ಉತ್ಪಾದನ ಸಾಧನಗಳ ಶಕ್ತಿಗಳ ಮೇಲಿನ ಹಿಡಿತಕ್ಕಾಗಿ ಅತ್ಯಂತ ಮುಖ್ಯ ಉತ್ಪಾದನಾ ಸಾಧನವಾದ ಭೂಮಿಯ ಮೇಲಿನ ಹಿಡಿತಕ್ಕಾಗಿ ನಡೆಯುತ್ತಿರುವ ವರ್ಗ ಸಂಘರ್ಷ. ಈ ಸಂಘರ್ಷಕ್ಕೆ ಗ್ರಾಮೀಣ ಬಡವರ ಜೊತೆಗೆ ದೇಶದ ಎಲ್ಲ ಪ್ರಗತಿಪರಶಕ್ತಿಗಳು ಹೆಗಲಿಗೆ ಹೆಗಲು ಕೊಟ್ಟು ನಿಲ್ಲಬೇಕು.

ವಿಶ್ವ ಶಾಂತಿದಿನ

ಸೆಪ್ಟೆಂಬರ್ 1 ರಂದು ಸಿ.ಐ.ಟಿ.ಯು. ನೇತೃತ್ವದಲ್ಲಿ ಉಡುಪಿಯಲ್ಲಿ ವಿಶ್ವ ಶಾಂತಿ ದಿನಾಚರಣೆ ಅಂಗವಾಗಿ ಮೆರವಣಿಗೆ ಸಭೆ ನಡೆಸ ಲಾಯಿತು. ಕಾ॥ ಡೇವಿಡ್ ಕರ್ಕಡ ಸಾಧು ಅಮೀನರವರು ವಿಶ್ವ ಶಾಂತಿ ರಕ್ಷಿಸುವಲ್ಲಿ ಕಾರ್ಮಿಕ ವರ್ಗದ ಪಾತ್ರ, ಸಾಮ್ರಾಜ್ಯ ಶಾಹಿಗಳ ಯುದ್ಧಕೋರ ನೀತಿ, ಕುರಿತು ಮಾತನಾಡಿದರು. ಕಾ॥ ಸಂಜೀವ ನಾಯಕ್ ಅಧ್ಯಕ್ಷತೆ ವಹಿಸಿದ್ದರು.

ಶಿವಮೊಗ್ಗ

ಭೂಮಿ ಒತ್ತಾಯಿಸಿ ರೈತರ ಮೆರವಣಿಗೆ

ಭೂಹೀನ ಬಡರೈತರು, ಕೃಷಿ ಕೂಲಿಗಾರರಿಗೆ ಹೆಚ್ಚುವರಿ ಭೂಮಿ, ಸರ್ಕಾರಿ, ಭೂಮಿಯನ್ನು ಹಂಚಬೇಕೆಂದು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿ ನೂರಾರು ಮಹಿಳೆಯರು ಸೇರಿದಂತೆ ಐನೂರಕ್ಕೂ ಹೆಚ್ಚು ರೈತ ಕೃಷಿ ಕೂಲಿಗಾರರು ಶಿವಮೊಗ್ಗದಲ್ಲಿ ಮೆರವಣಿಗೆ ನಡೆಸಿದರು.

ಜಿಲ್ಲಾಧಿಕಾರಿಯವರಿಗೆ ಬೇಡಿಕೆಗಳ ಮನವಿ ಅರ್ಪಿಸಿ ಗೋಪಿ ವೃತ್ತದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ॥ಚಂದ್ರಶೇಖರ ಬಾಳೆಯವರು ಮಾತನಾಡಿ ಭೂಮಿ ಹೋರಾಟದ ಮಹತ್ವ ಕಾಂಗ್ರೆಸ್ ಸರ್ಕಾರ ರೈತ ವಿರೋಧಿಯಾಗಿ ನಡೆದು ಕೊಳ್ಳುತ್ತಿರುವುದರ ಕುರಿತು ವಿವರಿಸಿ ಭೂಮಿ ಪ್ರಶ್ನೆ ರೈತನ ಮೂಲ ಪ್ರಶ್ನೆಯಾಗಿದೆ ಎಂದು ಹೇಳಿದರು. ರೈತಸಂಘದ ಮತ್ತೊಬ್ಬ ಮುಖಂಡ ಕಾ॥ ನಿತ್ಯಾನಂದ ಸ್ವಾಮಿಯವರು ರೈತರು ಒಗ್ಗಟ್ಟಿನಿಂದ ಹೋರಾಡಲು ಕರೆ ನೀಡಿದರು. ಕಾ॥ ಎಸ್.ಬಿ. ಶಿವಶಂಕರ್ ಅಧ್ಯಕ್ಷತೆ ವಹಿಸಿ ಬಿ.ಎಸ್.ದಾಸ್ ಸ್ವಾಗತಿಸಿ ನರಸಿಂಹಯ್ಯ ವಂದಿಸಿದರು.

ವಿದ್ಯಾರ್ಥಿ ಚಳುವಳಿಗೆ ಅಭೂತಪೂರ್ವ ಜಯ

ಬಳ್ಳಾರಿ ಜಿಲ್ಲೆ ಹಗರಿ ಬೊಮ್ಮನಹಳ್ಳಿ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ, ಕಟ್ಟಡ ಗ್ರಂಥಾಲಯ, ಶೌಚಾಲಯ ಒತ್ತಾಯಿಸಿ ಇಡೀ ಕಾಲೇಜಿನ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಸತತ 3 ದಿನಗಳು ಕಾಲೇಜು ತರಗತಿ ಬಹಿಷ್ಕರಿಸಿ ಆಗಸ್ಟ್ 22 ರಿಂದ 24ರವರೆವಿಗೂ ನಡೆಸಿದ ಚಳುವಳಿಗೆ ಜಯ ದೊರಕಿದೆ.

ಹಗರಿ ಬೊಮ್ಮನಹಳ್ಳಿಯ ವಿದ್ಯಾರ್ಥಿ ಚಳುವಳಿಯಲ್ಲಿಯೇ ಅಭೂತಪೂರ್ವ ವೆನ್ನಿಸಿದ ಈ ಚಳುವಳಿಯಲ್ಲಿ ಪ್ರತಿನಿತ್ಯ 800ಕ್ಕೂ ಅಧಿಕ ವಿದ್ಯಾರ್ಥಿ- ವಿದ್ಯಾರ್ಥಿನಿಯರು ಮೆರವಣಿಗೆ ಪ್ರತಿಭಟನಾ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ವಿದ್ಯಾರ್ಥಿಗಳ ಪ್ರಬಲ ಹೋರಾಟಕ್ಕೆ ಮಣಿದ ಜಿಲ್ಲಾ ಪರಿಷತ್ ಹಾಗೂ ಶಿಕ್ಷಣ ಸ್ಥಾಯಿ ಸಮಿತಿ ವಿದ್ಯಾರ್ಥಿ ಮುಖಂಡರೊಂದಿಗೆ ಮಾತುಕತೆ ನಡೆಸಿತು. ವಾಣಿಜ್ಯ ಶಾಸ್ತ್ರ ಉಪನ್ಯಾಸಕರನ್ನು ತಕ್ಷಣವೇ ನೇಮಕ ಮಾಡುವ ಕಾಲೇಜು ಕಟ್ಟಡಕ್ಕೆ 60 ಸಾವಿರ ರೂ. ಮಂಜೂರಾತಿ, ಗ್ರಂಥಾಲಯಕ್ಕೆ 2 ಸಾವಿರ ರೂ ಪುಸ್ತಕ ವಿತರಣೆ, ವಿದ್ಯುತ್ ಹಾಗೂ ಶೌಚಾಲಯ ದುರಸ್ತಿ ಮಾಡಿಸುವ ಭರವಸೆ ನೀಡಿದರು.

ಹೋರಾಟದಿಂದಲೇ ಸಮಸ್ಯೆಗೆ ಪರಿಹಾರ ಕಾಣಲು ಸಾಧ್ಯವೆಂದು ಅನುಭವದಿಂದ ಅರಿತ ವಿದ್ಯಾರ್ಥಿಗಳು ಎಸ್.ಎಫ್.ಐ.ಯನ್ನು ಕಾಲೇಜಿನಲ್ಲಿ ಬಲಿಷ್ಠವಾಗಿ ಕಟ್ಟಿ ಬೆಳೆಸುವ ಪ್ರತಿಜ್ಞೆ ಸ್ವೀಕರಿಸಿದರು. ಜಿಲ್ಲಾ ಸಹಕಾರ್ಯದರ್ಶಿ ಕಾ॥ ಹೆಚ್. ಪ್ರಕಾಶ್, ನಗರ ಸಮಿತಿ ಉಪಾಧ್ಯಕ್ಷ ವಿ.ರಾಮಣ್ಣ, ಅಧ್ಯಕ್ಷ ನಾಗರಾಜ್, ಕಾಲೇಜಿನ ಮುಖಂಡರಾದ ಹನುಮಂತಪ್ಪ, ರಾಮಪ್ಪ, ಕೃಷ್ಣ ದ್ವಾರಕೀಶ್, ನಾಗರಾಜ್, ನಿಸ್ಸಾರ ಅಹಮ್ಮದ್, ಶೇಖರ್ ಹಾಗೂ ಮಂಜುನಾಥ ಚಳುವಳಿ ನೇತೃತ್ವ ವಹಿಸಿದ್ದರು. ನೂತನ ಕಾಲೇಜು ಸಮಿತಿಗೆ ಬಿ. ಕೃಷ್ಣ(ಅಧ್ಯಕ್ಷ) ಪಿ. ನಾಗರಾಜ, ಎಂಎ. ರಾಮಪ್ಪ ನರಪತ್, ವೆಂಕಟೇಶ, ಪ್ರಭು(ಉಪಾಧ್ಯಕ್ಷರು) ಹುಲುಗಪ್ಪ(ಕಾರ್ಯದರ್ಶಿ) ನಿಸ್ಸಾರಅಹಮದ್ ಶೇಖರ್, ಶ್ರೀಧರ, ದ್ವಾರಕೀಶ್, ಕೆ.ಈಶ್ವರಪ್ಪ(ಸಹ ಕಾರ್ಯದರ್ಶಿ)ರವರನ್ನು ಹಾಗೂ ಹನುಮಂತಪ್ಪ ಸಂಚಾಲಕರನ್ನಾಗಿ ಆಯ್ಕೆ ಮಾಡ ಲಾಯಿತು.

ನಿಧನಕ್ಕೆ ಪಕ್ಷದ ಸಂತಾಪ

ಸೆಪ್ಟೆಂಬರ್ 12 ರಂದು ನಿಧನರಾದ ಶ್ರೀ ಬಿ.ರಾಮಯ್ಯನವರು ನಮ್ಮ ಪಕ್ಷದ ಸಕ್ರಿಯ ಒಡನಾಡಿ ಕಾ॥ ಆರ್. ಮೋಹನ್ ರವರ ತಂದೆಯವರಾಗಿದ್ದರು. ಕಾ॥ಪಿ. ರಾಮಚಂದ್ರರಾವ್, ಕಾ॥ ಸೂರ್ಯ ನಾರಾಯಣ ರಾವ್, ಕಾ॥ ಸಿ.ನಂಜುಂಡಪ್ಪ, ದಸ್ತಗೀರ್, ಚಂದ್ರಶೇಖರ್ ಬಾಳೆ ಮುಂತಾದವರು ಭೇಟಿ ನೀಡಿ ತಮ್ಮ ಗೌರವ ಸೂಚಿಸಿದರು. ಬೆಂಗಳೂರಿನ ಶ್ರೀರಾಮಪುರದ ಆರ್.ಜಿ.ಐ. ಕಾಲೋನಿಯಲ್ಲಿ ಸೆಪ್ಟೆಂಬರ್ 23 ರಂದು ಉತ್ತರ ಕ್ರಿಯಾಧಿಯನ್ನು ಏರ್ಪಡಿಸಲಾಗಿದೆ. ಮೃತರಿಗೆ 66 ವರ್ಷ ವಯಸ್ಸಾಗಿತ್ತು. ರಾಜಾ ಮಿಲ್ಸ್‌ನಲ್ಲೂ ಹಾಗೂ ಪೋಸ್ಟ್ ಮಾಸ್ಟರ್ ಆಗಿಯೂ ದುಡಿದು ನಿವೃತ್ತರಾಗಿದ್ದರು.ಬಿ.ರಾಮಯ್ಯನವರ ನಿಧನಕ್ಕೆ ಹಾಗೂ ಸೆಪ್ಟೆಂಬರ್ 2 ರಂದು ನಿಧನರಾದ ಪಕ್ಷದ ಹಿತೈಷಿಗಳಾದ ಕಾ॥ ಮಾದವರವರ ನಿಧನಕ್ಕೆ ಪಕ್ಷ ಹಾಗೂ ಐಕ್ಯರಂಗ ತನ್ನ ಸಂತಾಪ ಸೂಚಿಸುತ್ತವೆ.

....ಜನತೆಯ ಬೆಂಬಲವಿಲ್ಲ

> ಸಾಹಿತಿಗಳಲ್ಲಿ ವಿನಂತಿಸುತ್ತೇನೆ: "ವಾಸ್ತವತೆಯನ್ನು ಅರಿತು ಸತ್ಯವನ್ನು ಜನತೆಗೆ ತಿಳಿಸಿ" ಎಂದು.

2 ನೇ ಪುಟದಿಂದ

0 ಕ್ರಾಂತಿ-ವಿರೋಧಿ ದಂಗೆಯ ನಿಜಸ್ವರೂಪ ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷ ತೆಗೆದುಕೊಂಡ ನಿರ್ಣಯದ ಬಗ್ಗೆ ಅಲ್ಲಿಯ ವಿದ್ಯಾರ್ಥಿಗಳು, ಕಾರ್ಮಿಕರು ಯಾವ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಿದರು?

★ ನಾವು ಅನೇಕ ಕಾರ್ಖಾನೆಗಳಿಗೆ ಭೇಟಿ ಕೊಟ್ಟೆವು. ಗ್ರಾಮಗಳಿಗೆ ಭೇಟಿ ಕೊಟ್ಟೆವು. ಕಾರ್ಮಿಕರ ಮನೆಗಳಿಗೆ ಭೇಟಿಕೊಟ್ಟೆವು. ಅನೇಕ ಮುಖಂಡರ ಜತೆ ಮಾತನಾಡಿದೆವು. ನಾವು ಮೊದಲು ಪ್ರವಾಸ ಮಾಡಿದ್ದು ಗ್ವಾನ್‌ಶೋಗೆ. ಅದು ಹಿಂದೆ ಕ್ಯುಮಿಂಟಾಂಗ್ ವಿರುದ್ಧ ದೊಡ್ಡ ಚಳುವಳಿ ನಡೆದಂತಹ ಸ್ಥಳ. ಮಾವೊ ರೈತ ಚಳುವಳಿಯನ್ನು ಯಾವ ರೀತಿ ರೂಪಿಸಬೇಕು ಎಂದು ತರಬೇತಿ ಕೊಟ್ಟಂತಹ ಸ್ಥಳ. 20 ಪ್ರದೇಶಗಳಿಂದ ಪ್ರತಿನಿಧಿಗಳು ಬಂದು 3 ತಿಂಗಳ ತರಬೇತಿ ನಂತರ ಲಾಂಗ್‌ಮಾರ್ಚ್‌ಗೆ ಮುನ್ನಡೆದಂತಹ ಸ್ಥಳ. ಆ ನಗರದಲ್ಲಿ ಕಾರ್ಮಿಕ ಮುಖಂಡರು ಮತ್ತು ಕಾರ್ಮಿಕರನ್ನು ಕೇಳಿದಾಗ ಅವರು ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಲಿಲ್ಲವೆಂದರು. ಇಲ್ಲಿಯೂ ಸಹ ಅವರು ಕೆಲವು ಪ್ರದರ್ಶನಗಳನ್ನು ಮಾಡಿದರು. ನಮ್ಮ ಕಾರ್ಮಿಕರನ್ನೂ ಚಳುವಳಿಯಲ್ಲಿ ಭಾಗವಹಿಸುವಂತೆ ಹೇಳಿದರು. ಒಂದೆರಡು ಗಂಟೆಗಳ ರಾಸ್ತಾರೋಕೋ ಚಳುವಳಿ ಮಾಡಿದರು. ಜನರಿಗೆ, ಕಾರ್ಮಿಕರಿಗೆ ತೊಂದರೆಯಾಗುತ್ತದೆಂದು ತಿಳಿಸಿದಾಗ ಅದು ವಿಫಲವಾಯಿತು. ತಾವು ಯಾವುದೇ ಕಮ್ಯುನಿಸ್ಟ್ ಪಾರ್ಟಿ ವಿರೋಧಿಗಳೊಂದಿಗೆ ಸಹಕರಿಸುವುದಿಲ್ಲ ಎಂದರು. ತಮ್ಮ ಪರಿಸ್ಥಿತಿ ಸುಧಾರಿಸಲು ಕಮ್ಯುನಿಸ್ಟ್ ಪಾರ್ಟಿಯೇ ಕಾರಣ ಎಂಬ ಅಭಿಪ್ರಾಯ ಜನಗಳಲ್ಲಿ ಇದೆ ಎಂದು ಗೊತ್ತಾಯಿತು.

ನಾನ್‌ಜಿಂಗ್ ಚೈನಾ ದೇಶದ ಕಮ್ಯುನಿಸ್ಟ್ ಪಾರ್ಟಿ ಮೊದಲು ಆರಂಭವಾದ ಜಾಗ. ಆ ಊರಿನಲ್ಲಿ ಎಲ್ಲಿಯೂ ಯಾವ ಚಳುವಳಿಯೂ ನಡೆಯಲಿಲ್ಲ. ವಿದ್ಯಾರ್ಥಿಗಳು ಸ್ವಲ್ಪ ಪ್ರದರ್ಶನ ಮಾಡಿಕೊಂಡರೇ ವಿನಃ ಯಾವ ಅಡ್ಡಿಯೂ ಆಗಲಿಲ್ಲವೆಂದರು. ಸರ್ಕಾರದ ಧೋರಣೆಯನ್ನು ಒಪ್ಪಿಕೊಂಡಿದ್ದೇವೆಂದು ಹೇಳಿದರು. ನಂತರ ಕೈಗಾರಿಕಾ ನಗರಕ್ಕೆ ಭೇಟಿಕೊಟ್ಟು ಅಲ್ಲಿನ ಕಾರ್ಮಿಕರ ಮನೆಗಳಿಗೆ ಹೋದೆವು. ವಿದ್ಯಾರ್ಥಿಗಳನ್ನು ಕೇಳಿದಾಗ ಒಬ್ಬ ವಿದ್ಯಾರ್ಥಿ -ಆತ ಪದವೀಧರ- ಹೇಳಿದ ಈ ಚಳುವಳಿಗೆ ಪ್ರಾರಂಭದಲ್ಲಿ ನಾವು ಧುಮುಕಿದ್ದು ನಿಜ. ಆದರೆ ಆಮೇಲೆ ಅವರು ನಡೆದುಕೊಂಡ ರೀತಿ, ಕಮ್ಯುನಿಸ್ಟ್ ಪಾರ್ಟಿಯನ್ನೇ ಬದಲಿಸಬೇಕೆಂಬ ಅಭಿಪ್ರಾಯ ತಿಳಿದ ಮೇಲೆ ನಾವು ಅವರಿಗೆ ಬೆಂಬಲ ನೀಡಲಿಲ್ಲ, ಎಂದರು. ಸರ್ಕಾರದ ನಿಲುವನ್ನು ತಾವು ಬೆಂಬಲಿಸುವುದಾಗಿ ಹೇಳಿದರು.

0 ಸಾಹಿತಿ ಯು.ಆರ್. ಅನಂತಮೂರ್ತಿಯವರು ದಂಗೆ ನಡೆದ ಸಮಯದಲ್ಲಿ ಚೀನಾದಲ್ಲಿದ್ದು, ಭಾರತಕ್ಕೆ ಹಿಂದಿರುಗಿದ ನಂತರ ನೀಡಿರುವ ಹೇಳಿಕೆ ನಿಮ್ಮ ಹೇಳಿಕೆಗಿಂತ ಭಿನ್ನವಾಗಿದೆಯಲ್ಲ?

★ ಜೂನ್ 3, 4 ರಂದು ಘಟನೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಅವರು ರೂಮಿನಲ್ಲಿದ್ದರು. ಹೊರಗಡೆ ಹೋಗಿ ನೋಡಲಿಕ್ಕೆ ಸಾಧ್ಯವಾಗಲಿಲ್ಲ. ರೂಂನಲ್ಲಿ ಟೀವಿಯವರು ಬಂದು ಹೇಳಿದ ಮಾತುಗಳ ಆಧಾರದ ಮೇಲೆ ಅವರು ಹೇಳಿರುತ್ತಾರೆ. ನಾವು ಕಾರ್ಮಿಕರನ್ನು, ಒಡನಾಡಿ ಮಾತನಾಡಿಸಿದ್ದೇವೆ. ವಿದ್ಯಾರ್ಥಿಗಳನ್ನು ಇತರ ಜನಸಮೂಹಗಳನ್ನು ವಿಚಾರಿಸಿದ್ದೇವೆ. ಆದ್ದರಿಂದ ನನ್ನ ಹೇಳಿಕೆಗೂ ಅವರ ಹೇಳಿಕೆಗೂ ವ್ಯತ್ಯಾಸ ವಿದೆ. ಆದರೆ ಒಂದು ವಿಷಯವನ್ನು ಮಾತ್ರ ಸ್ಪಷ್ಟವಾಗಿ ಸಾಹಿತಿಗಳಲ್ಲಿ ವಿನಂತಿಸುತ್ತೇನೆ- ವಾಸ್ತವತೆಯನ್ನು ಅರಿತು ಸತ್ಯವನ್ನು ಜನತೆಗೆ ತಿಳಿಸಿ ಎಂದು. ಅವರು ಹೇಳಿರುವ ವಿಷಯದ ಬಗ್ಗೆ ನಾನು ಇಲ್ಲಿ ಹೇಳ ಬಯಸುವುದಿಲ್ಲ.

0 ನಮ್ಮ ಪತ್ರಿಕೆಗಳು ಚೀನಾದ ಘಟನೆಗಳನ್ನು ಕುರಿತು ಪ್ರಕಟಿಸಿದುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

★ ಹಿಂದೆ ಮೈಕೋ ಕಾರ್ಮಿಕರ ಸಂಘಟನೆ ಹೆಚ್ಚು ಬಲಿಷ್ಠವಾಗುವ ಸಮಯದಲ್ಲಿ ಸೈಕಲ್‌ನಲ್ಲಿ ಯಾರಿಗೋ ಆಕ್ಸಿಡೆಂಟ್ ಆದಾಗ ಇಡೀ ಕಾರ್ಖಾನೆ ಮುಚ್ಚಿ, ಸೂರಿಯವರು ಕೊಲೆಮಾಡಿದ್ದಾರೆಂದು ದೊಡ್ಡ ಪತ್ರಿಕೆಯವರು ಗಲಭೆ ಎಬ್ಬಿಸಿದರು. ಇವರ ಪಾತ್ರ ಯಾವ ರೀತಿಯಲ್ಲಿ ಮಾಲೀಕರ ಪರವಾಗಿರುತ್ತದೆ ಎಂಬುದಕ್ಕೆ ಇದು ಉದಾಹರಣೆ. ಹಾಗೇ ಸಾರ್ವಜನಿಕ ಅಭಿಪ್ರಾಯವನ್ನು ತಮ್ಮೆಡೆಗೆ ಒಲಿಸಿಕೊಳ್ಳಲು ಚೀನಾದಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಗೆ ಯತ್ನಿಸಿದ ಪಿತೂರಿಗಾರರನ್ನು ಬಹಿರಂಗವಾಗಿಯೇ ಬೆಂಬಲಿಸಿ ಕಮ್ಯುನಿಸ್ಟ್-ವಿರೋಧಿ ಭಾವೋನ್ಮಾದ ಎಬ್ಬಿಸಲು ಬಂಡವಾಳಶಾಹಿಗಳ ನಿಯಂತ್ರಣದ ಪತ್ರಿಕಾ ರಂಗ ಎಲ್ಲಾ ಸುಳ್ಳು ಸುದ್ದಿಗಳನ್ನೂ ಚೀನಾದ ಘಟನೆಯ ಬಗ್ಗೆ ಬಿಗ್ಗಿಸಿ ಪ್ರಕಟಿಸಿದೆ.

0 ನೀವು ಒಬ್ಬ ಕಾರ್ಮಿಕ ಮುಖಂಡರಾಗಿ ಚೀನಾಕ್ಕೆ ಭೇಟಿ ಕೊಟ್ಟು ಬಂದ ನಂತರ ಕಾರ್ಮಿಕ ವರ್ಗಕ್ಕೆ ನಿಮ್ಮ ಸಂದೇಶವೇನು?

★ ನಾವು ಸಹ ದೊಡ್ಡ ರೀತಿಯಲ್ಲಿ ಕಾರ್ಮಿಕರ ಸಂಘಟನೆಯನ್ನು ಕಟ್ಟಿ ಭಾರತ ದೇಶದ ಪರಿಸ್ಥಿತಿಗೆ ಹೊಂದುವಂತ ರಾಜಕೀಯ ಸಿದ್ಧಾಂತವನ್ನು ಜನರಲ್ಲಿ ತೆಗೆದುಕೊಂಡು ಹೋಗಿ ಚೈನಾದಲ್ಲಿ ಬಂದಂತಹ ಸಮಾಜವಾದವನ್ನು ನಮ್ಮ ದೇಶದಲ್ಲೂ ಸ್ಥಾಪಿಸಬೇಕೆನ್ನುವ ಹಂಬಲವೇ ಚೈನಾ ದೇಶದಿಂದ ತಂದ ಸಂದೇಶ.

ಸಂದರ್ಶನ ಶ್ರೀಧರ್

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಸಾಧನೆಗಳು

ಇಲ್ಲಿ ಜನತೆಯ ಪ್ರಜಾಪ್ರಭುತ್ವ ಮತ್ತು ಕಾರ್ಮಿಕ ಸಂಘಟನೆಯ ಹಕ್ಕುಗಳು ಸಮೃದ್ಧವಾಗಿವೆ. ಎಸ್ಮಾದಂತಹ ಕರಾಳ ಶಾಸನಗಳು ಇಲ್ಲಿ ಜಾರಿಯಲ್ಲಿಲ್ಲ. ರಾಜಕೀಯ ಕಾರಣಕ್ಕೆ ಯಾರೂ ಬಂಧಿತರಾಗುವುದಿಲ್ಲ.

ಪಶ್ಚಿಮಬಂಗಾಳ ಜಾತಿ, ಕೋಮು ಗಲಭೆಗಳಿಂದ ಮುಕ್ತವಾಗಿಯೇ ಉಳಿದಿದೆ. ಅಲ್ಪಸಂಖ್ಯಾತ ಕೋಮುಗಳ ಸದಸ್ಯರು ಈ ರಾಜ್ಯ ಶಾಂತಿಯ ಒಂದು ಸುರಕ್ಷಿತ ಸ್ವರ್ಗವೆಂದು ಪರಿಗಣಿಸುತ್ತಾರೆ. ಮಹಿಳೆಯರಿಗೆ ಕಿರುಕುಳದ ಉದಾಹರಣೆಗಳು ಅತ್ಯಲ್ಪ. ವಿಶೇಷವಾಗಿ, ರಾಷ್ಟ್ರಮಟ್ಟದ ಸ್ಥಿತಿಯೊಡನೆ ಹೋಲಿಸಿದಾಗ.

ಪಶ್ಚಿಮಬಂಗಾಳದ ಕಾನೂನು ವ್ಯವಸ್ಥೆಯ ದಾಖಲೆ ಇತರರಲ್ಲಿ ಅಸೂಯೆ ಮಾಡಿಸಬಹುದಾದಂಥದ್ದು. ಅಪರಾಧ ದರ ತುಂಬಾ ಕಮ್ಮಿ. ದಂಗೆಗಳು ನಡೆಯುವುದೇ ಇಲ್ಲ. ಜಿ.ಎನ್.ಎಲ್.ಎಫ್. ಮುಗ್ಗಟ್ಟಿನ ರಾಜಕೀಯ ಪರಿಹಾರದ ನಂತರ ಡಾರ್ಜಿಲಿಂಗ್ ಶಾಂತವಾಗಿದೆ.

ಮರುವಿತರಣೆಗೆ ಒತ್ತು ನೀಡಿದ ಭೂಸುಧಾರಣೆಯಲ್ಲಿ ಗಮನಾರ್ಹ ಸಾಧನೆಗಳಾಗಿವೆ. ಭೂಮಿತಿಗಿಂತ ಹೆಚ್ಚುವರಿಯಾದ 12.57 ಲಕ್ಷ ಎಕರೆ ಕೃಷಿ ಜಮೀನು ಸರಕಾರದ ವಶಕ್ಕೆ ಬಂದಿದೆ (ಇದು ಇಡೀ ದೇಶದಲ್ಲಿ ಈ ರೀತಿ ಸರಕಾರೀ ವಶಕ್ಕೆ ಬಂದ ಒಟ್ಟು ಜಮೀನಿನ ಆರನೇ ಒಂದಂಶಕ್ಕಿಂತಲೂ ಹೆಚ್ಚು) ಇದರಲ್ಲಿ 8.6 ಲಕ್ಷ ಎಕರೆ ಭೂಮಿ ಗ್ರಾಮೀಣ ಬಡವರು ಮತ್ತು ಭೂಹೀನರ ನಡುವೆ ಮರುವಿತರಣೆಗೊಂಡಿದೆ. ಇದು ಇಡೀ ದೇಶದಲ್ಲಿ ಮರುವಿತರಣೆಗೊಂಡ ಭೂಮಿಯ 21% ಆಗುತ್ತದೆ. ಒಟ್ಟು ಇದುವರೆಗೆ 18 ಲಕ್ಷ ಭೂಹೀನ ರೈತರಿಗೆ ಇದರಿಂದ ಪ್ರಯೋಜನವಾಗಿದೆ. ಸುಮಾರು 14 ಲಕ್ಷ ಅಧಿಯಾರರು ಅಥವಾ ಬರ್ಗಾದಾರರು (ಪಾಲುಬೆಳೆದಾರರು) ಹಕ್ಕುಗಳನ್ನು ಕಾನೂನು ರೀತ್ಯ ರಿಜಿಸ್ಟರ್ ಮಾಡಲಾಗಿದೆ. ಈ ಸಂಖ್ಯೆ ಬೆಳೆಯುತ್ತಲೇ ಇದೆ.

ಮರು ವಿತರಣೆಗೆ ಒತ್ತು ನೀಡಿದ ಭೂಸುಧಾರಣೆಗಳಿಂದ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಸಾಧ್ಯವಾಗಿದೆ. ಭೂಮಿತಿಗೆ ಮೀರಿದ ಹೆಚ್ಚುವರಿ ಭೂಮಿಯನ್ನು ಪಡೆದವರಲ್ಲಿ ಕನಿಷ್ಟ 56% ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದವರು. ಇದೇ ರೀತಿ ಹಕ್ಕು ರಿಜಿಸ್ಟರಾದ ಬರ್ಗಾದಾರರಲ್ಲಿ 30% ಪರಿಶಿಷ್ಟ ಜಾತಿಯವರು, 12% ಗಿಂತಲೂ ಹೆಚ್ಚು ಪರಿಶಿಷ್ಟ ಬುಡಕಟ್ಟುಗಳವರು.

ಆಹಾರ ಧಾನ್ಯಗಳ ಉತ್ಪಾದನೆ 1987-88ರಲ್ಲಿ 103 ಲಕ್ಷ ತಲುಪಿ ದಾಖಲೆ ಸ್ಥಾಪಿಸಿದ ನಂತರ ಎಂದೂ ಕಮ್ಮಿಯಾಗಲಿಲ್ಲ. ಈ ರಾಜ್ಯ ಭಾರತದ ಭೌಗೋಳಿಕ ಪ್ರದೇಶದ 2.7% ರಷ್ಟೇ ಇದ್ದರೂ ರಾಷ್ಟ್ರದ ಜನಸಂಖ್ಯೆಗೆ ಅವಶ್ಯಕ ಆಹಾರದ 8%ವನ್ನು ಸದ್ಯ ಪೂರೈಸುತ್ತಿದೆ.

ಬುಡಮಟ್ಟದಲ್ಲಿ ಪ್ರಜಾಪ್ರಭುತ್ವವಿರುವಂತೆ ನೋಡಿಕೊಳ್ಳಲಾಗಿದೆ. ವಯಸ್ಕ ಮತದಾನದ ಆಧಾರದ ಮೇಲೆ ಮೂರು ಹಂತಗಳ (ಜಿಲ್ಲಾ ಪರಿಷತ್ತು, ಪಂಚಾಯತು ಸಮಿತಿ ಮತ್ತು ಗ್ರಾಮ ಪಂಚಾಯತು) ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆಗಳು ನಡೆದಿವೆ.

ರಾಜ್ಯದ 116 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿಯಮಿತ ಚುನಾವಣೆಗಳು ನಡೆದಿವೆ. ಜನತೆ ಪಾಲ್ಗೊಳ್ಳುವ ಪ್ರಜಾಪ್ರಭುತ್ವೀಕರಣದ ನೀತಿಗಳನ್ನು ಎತ್ತಿ ಹಿಡಿಯಲಾಗಿದೆ. ಮತದಾನ ವಯಸ್ಸನ್ನು 18ಕ್ಕೆ ಇಳಿಸುವ ನೀತಿಯನ್ನು ರಾಜ್ಯ ಸರಕಾರ ರಾಷ್ಟ್ರಮಟ್ಟದಲ್ಲಿ ಇದೊಂದು ಮಹತ್ವದ ನೀತಿಯೆಂದು ಭಾವಿಸುವ ಎಷ್ಟೋ ಮೊದಲೇ 1978ರಲ್ಲಿ ಆರಂಭಿಸಿತು.

ಯೋಜನೆಯ ರೂಪೀಕರಣ ಮತ್ತು ಯೋಜನೆಯ ಅನುಷ್ಠಾನದಲ್ಲಿ ಹಣಕಾಸು ಮತ್ತು ಆಡಳಿತ ಅಧಿಕಾರಗಳನ್ನು ಚುನಾಯಿತ ಪಂಚಾಯತಿ ರಾಜ್ಯ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳತ್ತ ಧಾರೆ-ಧಾರೆಯಾಗಿ ಹರಿಯಬಿಡಲಾಗಿದೆ. ಜನಪರ ವಿಕೇಂದ್ರೀಕರಣ ಹೇಗಿರುತ್ತದೆ ಎಂದು ತೋರಿಸಿಕೊಟ್ಟ ಕ್ರಮವಿದು. ರಾಜ್ಯ ಯೋಜನಾ ಬಜೆಟ್ಟಿನ 50% ವನ್ನು ಜಿಲ್ಲೆಗಳಿಗೆ ನಿಗದಿಪಡಿಸಲಾಗಿದೆ. ಬ್ಲಾಕ್ ಮಟ್ಟದ ಮತ್ತು ಜಿಲ್ಲಾ ಮಟ್ಟದ ಯೋಜನೆ ವಿಕೇಂದ್ರೀಕೃತ ಯೋಜನೆಯ ಎರಡು ಮಜಲುಗಳು ರಾಷ್ಟ್ರೀಯ ಮಟ್ಟದಲ್ಲಿ ಈಗೀಗ ವಿಕೇಂದ್ರೀಕೃತ ಯೋಜನೆಯ ಮೇಲೆ ಒತ್ತು ನೀಡಲಾರಂಭಿಸುವ ಎಷ್ಟೋ ಮೊದಲಿನಿಂದ ಪಶ್ಚಿಮ ಬಂಗಾಳದಲ್ಲಿ ಈ ಪ್ರಯತ್ನ ಜಾರಿಯಲ್ಲಿದೆ.

ವಿದ್ಯುಚ್ಛಕ್ತಿಯನ್ನು ಆದ್ಯತೆಯ ವಲಯವನ್ನಾಗಿಸಲಾಗಿದೆ. ಒಟ್ಟು ಯೋಜನಾ ಗಾತ್ರದ ಮೂರನೇ ಒಂದಂಶಕ್ಕಿಂತಲೂ ಹೆಚ್ಚು ಇದಕ್ಕೆ ನೀಡಲಾಗಿದೆ. ಬಕ್ರೇಶ್ವರ್ ತಾಪ ವಿದ್ಯುತ್ ಯೋಜನೆಯ ಅನುಷ್ಠಾನವನ್ನು ಕೇಂದ್ರದ ಪಕ್ಷಪಾತ ಮತ್ತು ವಂಚನೆಯ ಧೋರಣೆಯ ವಿರುದ್ಧ ಒಂದು ಸವಾಲಾಗಿ ಎತ್ತಿಕೊಳ್ಳಲಾಗಿದೆ.

ಹಲ್ದಿಯಾ ಪೆಟ್ರೋ-ರಾಸಾಯನಿಕ ಸಂಕೀರ್ಣಕ್ಕೆ ಮಂಜೂರಾತಿ ನೀಡುವಲ್ಲಿ ಕೇಂದ್ರ ಹಿಂದೆ-ಮುಂದೆ ನೋಡುತ್ತಿರುವುದರಿಂದಾಗಿ ಅತ್ಯಂತ ಮಹತ್ವದ ಉಪಪ್ರಯೋಜನಗಳೂ ಇರುವ ಈ ಯೋಜನೆ ಸ್ಥಗಿತಗೊಳ್ಳುವಂತಾಗಿದೆ. ಹೀಗಿದ್ದಾಗ್ಯೂ, ರಾಜ್ಯ ಸರ್ಕಾರ ಆಕರ್ಷಕ ಪ್ರೋತ್ಸಾಹಕಾರಿ ಕ್ರಮಗಳ ಮೂಲಕ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡುವಲ್ಲಿ ಧೈರ್ಯದಿಂದ ಮುಂದೊತ್ತಿದೆ. ಸಾಲ್ಟ್‌ಲೇಕ್‌ನ ಇಲೆಕ್ಟ್ರಾನಿಕ್ ಸಂಕೀರ್ಣ ರಾಜ್ಯ ಸರ್ಕಾರದ ಪ್ರಯತ್ನಗಳ ಉಜ್ವಲ ಉದಾಹರಣೆ.

ಗುಡಿಕೈಗಾರಿಕೆ ಮತ್ತು ಸಣ್ಣ-ಪ್ರಮಾಣದ ವಲಯಗಳಲ್ಲಿ ಗಮನಸೆಳೆಯುವ ಸಾಧನೆಗಳು ದಾಖಲಾಗಿವೆ. ಸದ್ಯ ಮೂರು ಲಕ್ಷಕ್ಕೂ ಹೆಚ್ಚು ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಭಾರತದ ಅತ್ಯಂತ ದೊಡ್ಡ ನೀರಾವರಿ ಯೋಜನೆಗಳಲ್ಲಿ ಒಂದಾದ ಉತ್ತರ ಬಂಗಾಲದ ತೀಸ್ತಾ ಬ್ಯಾರೇಜ್ ಯೋಜನೆಯನ್ನು ಕೇಂದ್ರ ಸರ್ಕಾರದಿಂದ ಸಾಕಷ್ಟು ನೆರವಿನ ಅಭಾವವಿದ್ದಾಗ್ಯೂ ರಾಜ್ಯ ಸರ್ಕಾರ ಕಾರ್ಯಗತಗೊಳಿಸುತ್ತಿದೆ.

ಆರೋಗ್ಯ ಸೌಲಭ್ಯಗಳನ್ನು 8126 ಉಪಕೇಂದ್ರಗಳು, 1192 ಆರೋಗ್ಯ ಕೇಂದ್ರಗಳು, 76 ಗ್ರಾಮೀಣ ಆಸ್ಪತ್ರೆಗಳು, 13 ಜಿಲ್ಲಾ ಆಸ್ಪತ್ರೆಗಳು, 31 ಸಬ್‌ಡಿವಿಜನಲ್ ಆಸ್ಪತ್ರೆಗಳು, 60 ರಾಜ್ಯ ಸಾರ್ವಜನಿಕ ಮತ್ತು ವಿಶೇಷ ಆಸ್ಪತ್ರೆಗಳ ಒಂದು ಯೋಜನಾಬದ್ಧ ಜಾಲದ ಮೂಲಕ ಜನತೆಗೆ ತಲುಪಿಸಲಾಗುತ್ತಿದೆ. ಇದಲ್ಲದೆ ರಾಜ್ಯ ವೈದ್ಯಕೀಯ ಕಾಲೇಜುಗಳಿಗೆ ಮತ್ತು ಸ್ನಾತಕೋತ್ತರ ಸಂಸ್ಥೆಗಳಿಗೆ ಸಂಬಂಧವಾದ ಹನ್ನೊಂದು ಆಸ್ಪತ್ರೆಗಳಿವೆ.

ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ವ್ಯವಸ್ಥೆಯಲ್ಲಿ ಶಾಸನಬದ್ಧ ಪಡಿತರ ಪ್ರದೇಶಗಳಲ್ಲಿ 2745 ರೇಷನ್ ಅಂಗಡಿಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 17045 ನ್ಯಾಯಬೆಲೆ ಅಂಗಡಿಗಳಿವೆ. ಇದು ದೇಶದಲ್ಲೇ ದೊಡ್ಡದಾದ ಜಾಲ.

ಮೀನುಗಾರಿಕೆಯಲ್ಲಿ, ಪಶ್ಚಿಮಬಂಗಾಳ ಇಡೀ ದೇಶದ ಮೀನು- ಹತ್ತಿ ಅವಶ್ಯಕತೆಗಳಲ್ಲಿ ಕನಿಷ್ಠ 75% ನೀಡುತ್ತಿದೆ. ದೇಶದ ಒಟ್ಟು ಮೀನು ಉತ್ಪಾದನೆಯ ಮೂರನೇ ಒಂದಕ್ಕಿಂತ ಹೆಚ್ಚನ್ನು ಒದಗಿಸುತ್ತಿದೆ. ಒಳನಾಡು ಮೀನು ಉತ್ಪಾದನೆಯೂ ರಾಜ್ಯ ಅತ್ಯುನ್ನತ ಉತ್ಪಾದಕತಾ ಪಾರಿತೋಷಕಗಳನ್ನು ಸತತವಾಗಿ ಮೂರು ವರ್ಷ ಪಡೆದಿದೆ.

ಹನ್ನೆರಡನೇ ತರಗತಿಯವರೆಗೆ ಶಿಕ್ಷಣವನ್ನು ಉಚಿತಗೊಳಿಸಲಾಗಿದೆ. ಪ್ರತಿ ಗ್ರಾಮಕ್ಕೆ ಒಂದು ಶಾಲೆ ಒದಗಿಸುವ ಗುರಿಯನ್ನು ರಾಜ್ಯ ಸರಕಾರ ಇಟ್ಟುಕೊಂಡಿದೆ. ಈ ಗುರಿ ಸಾಧನೆಯಲ್ಲಿ ಅದು ರಭಸದಿಂದ ಮುನ್ನಡೆಯುತ್ತಿದೆ.

ನಿರುದ್ಯೋಗಿ ಯುವಜನರಿಗಾಗಿ ವಿವಿಧ ಯೋಜನೆಗಳನ್ನು ವ್ಯಾಪಕವಾಗಿ ಕೈಗೆತ್ತಿಕೊಳ್ಳಲಾಗಿದೆ. ಇವೆಂದರೆ ದಾಖಲಾದ ನಿರುದ್ಯೋಗಿಗಳ ಸ್ವ ಉದ್ಯೋಗ ಯೋಜನೆ (S.E.S.R.U.), ಸಣ್ಣ ಪ್ರಮಾಣದ ಉದ್ಯಮ ಕಾರ್ಯಕ್ರಮ (S.S.E.P.) ಮತ್ತು ಹೆಚ್ಚಿನ ಉದ್ಯೋಗ ಕಾರ್ಯಕ್ರಮ (A.E.P).

ರಾಜ್ಯದ ಸಾಂಸ್ಕೃತಿಕ ರಂಗ ಉಜ್ವಲವಾಗಿದೆ. ರಾಜ್ಯ ಚಲನಚಿತ್ರ ಕೇಂದ್ರ ನಂದನ ಮತ್ತು ಬಣ್ಣದ ಚಿತ್ರ ಮತ್ತು ಧ್ವನಿ ಮುದ್ರಣ ಪ್ರಯೋಗಾಲಯ ರೂಪಾಯನದ ಉದ್ಘಾಟನೆಯಿಂದ ಮಾತ್ರವೇ ಅಲ್ಲ, ಬಾಂಗ್ಲಾ ಅಕಾಡೆಮಿ, ನೇಪಾಳಿ ಅಕಾಡೆಮಿ, ಉರ್ದು ಅಕಾಡೆಮಿ, ನಾಟ್ಯ ಅಕಾಡೆಮಿ ಮತ್ತು ಸಂಗೀತ ಅಕಾಡೆಮಿಗಳಿಂದಾಗಿ ಕೂಡಾ. ನೇಪಾಳಿ ಮತ್ತು ಉರ್ದುವನ್ನು ರಾಜ್ಯದಲ್ಲಿ ಅಧಿಕೃತ ಭಾಷೆಗಳಾಗಿ ಮಾನ್ಯ ಮಾಡಲಾಗಿದೆ. ಸಂತಾಲಿ ಭಾಷೆಯ ಪ್ರಸಾರಕ್ಕೆ ಅಲ್ಚಿಕಿ ಒಂದು ಲಿಪಿಯೆಂದು ಮಂಜೂರು ಮಾಡಲಾಗಿದೆ. ಯುವ ಭಾರತಿ ಕ್ರೀಡಾಂಗಣ (ವೀಕ್ಷಕ ಸಾಮರ್ಥ್ಯ: 1 ಲಕ್ಷ) ಪ್ರಪಂಚ ವಿಖ್ಯಾತ ಅತ್ಯಂತ ದೊಡ್ಡ ಕ್ರೀಡಾಂಗಣಗಳಲ್ಲಿ ಒಂದು. ವಿಜ್ಞಾನ ಮತ್ತು ತಂತ್ರಜ್ಞಾನದ ಒಂದು ಗ್ಯಾಲರಿಯನ್ನು ಆರಂಭಿಸಲಾಗಿದೆ.

ಪಶ್ಚಿಮ ಬಂಗಾಳ ಸರಕಾರ

ಪಾಲಿಟ್‌ಬ್ಯೂರೋ ಹೇಳಿಕೆ

ಪುಟ 1 ರಿಂದ

ಯಶಸ್ವಿಯಾಗಿ ಕ್ರೋಢೀಕರಿಸಿದರು" ಎಂಬ ಅಂಶದತ್ತ ಗಮನ ಸೆಳೆದಿದೆ. ಅಲ್ಲದೆ ಅವು ತಮ್ಮ ಜಂಟಿ ಹೇಳಿಕೆಯಲ್ಲಿ ವಿದೇಶಾಂಗ ಪ್ರಶ್ನೆ, ಸಾಮ್ರಾಜ್ಯಶಾಹಿಯ ಮತ್ತು ಕೋಮುವಾದದ ಅಪಾಯದ ವಿರುದ್ಧ ಹೋರಾಟದ ಅಂಶಗಳನ್ನು ಅಳವಡಿಸಿಕೊಂಡು ಭಾರತಬಂದ್‌ನ ಕರೆಯನ್ನು ಅದರ ಭ್ರಷ್ಟಾಚಾರ-ವಿರೋಧಿ ಚೌಕಟ್ಟಿನಿಂದ ಇನ್ನೂ ಮೇಲಕ್ಕೆತ್ತರಿಸಿತ್ತು. ಆಗಲೇ ಹೋರಾಟದ ಕಣದಲ್ಲಿದ್ದ ಜನಸಮೂಹಗಳ ಬೇಡಿಕೆಗಳೊಂದಿಗೆ ಅದನ್ನು ಬೆಸೆಯಿತು. ಹೋರಾಟದ ಈ ಸ್ವರೂಪದ ಮಹತ್ವ ಅರಿತಿರುವ ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು, ವಿರೋಧ ಪಕ್ಷಗಳು ಇದನ್ನು ನಿರಂತರವಾಗಿ ಬೆಳೆಸಬೇಕು. ಈ ಮೂಲಕ ರಾಜೀವ ಸರ್ಕಾರದ ವಿರುದ್ಧ ಜಂಟಿ ಹೋರಾಟ ಅದೇ ಸಮಯದಲ್ಲಿ ಎಲ್ಲಾ ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳನ್ನು ದೂರತಳ್ಳಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಪಡಿಸುವಂತಾಗಬೇಕೆಂದು ಪಾಲಿಟ್‌ಬ್ಯೂರೋ ಕರೆನೀಡಿದೆ.

ಮುಸ್ಲಿಂ ಅಲ್ಪಸಂಖ್ಯಾತರಲ್ಲಿ ಒಂದು ದೊಡ್ಡ ಜನಸಮೂಹ ಸನ್ನಿವೇಶವನ್ನು ಸೂಕ್ಷ್ಮಕಣ್ಣಿನಿಂದ ವೀಕ್ಷಿಸುತ್ತಿದೆ. ತನ್ನ ಹಕ್ಕುಗಳನ್ನು ರಕ್ಷಿಸುವ ಅತ್ಯಾಚಾರಗಳಿಂದ ತನಗೆ ರಕ್ಷಣೆ ನೀಡುವ ಯಾವುದಾದರೂ ಪ್ರಾಮಾಣಿಕ ಪ್ರಜಾಪ್ರಭುತ್ವಶಕ್ತಿಯೊಂದು ಇದೆಯೇ ಎಂದು ಕಾದು ನೋಡುತ್ತಿದೆ. ಬಾಬ್ರಿ ಮಸೀದಿ/ರಾಮಜನ್ಮ ಭೂಮಿ ಪ್ರಶ್ನೆಯ ಬಗ್ಗೆ ಸೂಕ್ಷ್ಮವಾಗಿರುವ ಈ ಜನಸಮೂಹ ಈ ಸಮಸ್ಯೆಗೆ ನ್ಯಾಯಮತ ಹಾಗೂ ಪ್ರಜಾಸತ್ತಾತ್ಮಕ ಪರಿಹಾರವನ್ನು ಯಾರು ಸೂಚಿಸುತ್ತಾರೆ ಎಂಬುದರ ಆಧಾರದ ಮೇಲೆ ಪ್ರತಿಯೊಂದು ಪಕ್ಷದ, ಸಂಘಟನೆಯ ಪ್ರಾಮಾಣಿಕತೆಯನುನಿ ಪರೀಕ್ಷಿಸುತ್ತಿದೆ. ಕೋಮುವಾದಿ ಧೋರಣೆಯ ಬಿ.ಜೆ.ಪಿ. ಯೊಂದಿಗೆ ಕೂಡಿ ಕೆಲಸ ಮಾಡುವ ಯಾವ ಸಂಘಟನೆಯೂ ತನಗೆ ಕನಿಷ್ಠ ರಕ್ಷಣೆಯನ್ನೂ ನೀಡಲಾರದು ಎಂಬ ದೃಢ ಭಾವನೆ ಈ ಜನ ಸಮೂಹದ್ದು. ಆದ್ದರಿಂದ ಎಲ್ಲಾ ಜಾತ್ಯತೀತ ಪಕ್ಷಗಳು ಬಿ.ಜೆ.ಪಿ. ದೃಷ್ಟಿಕೋಣದಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡು ತಾವು ಎಲ್ಲಾ ಪ್ರಜಾಪ್ರಭುತ್ವ ನೀತಿಗಳನ್ನು ಪಾಲಿಸುತ್ತೇವೆ. ಅಲ್ಪ ಸಂಖ್ಯಾತ ಮೂಲಭೂತ ಹಕ್ಕುಗಳನ್ನು ಪರಿಣಾಮ ಕಾರಿಯಾಗಿ ರಕ್ಷಿಸುತ್ತೇವೆ. ಎಂದು ಎಲ್ಲಾ ಅಲ್ಪಸಂಖ್ಯಾತ ಜನವಿಭಾಗಗಳಲ್ಲಿ ಭರವಸೆ ಮಾಡಿಸುವುದು ಅಗತ್ಯ ಎಂದು ಪಾಲಿಟ್ ಬ್ಯೂರೋ ಹೇಳಿಕೆ ನೆನಪಿಸಿದೆ.

ಈ ಹಿನ್ನೆಲೆಯಲ್ಲಿ ದೇಶಾದ್ಯಂತ ಸೆಪ್ಟಂಬರ್ 28 ರಂದು ಕೋಮುವಾದ ವಿರೋಧಿ ದಿನಾಚರಣೆ ನಡೆಸಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಆರ್ಥಿಕ ಸನ್ನಿವೇಶವನ್ನು ವಿಮರ್ಶಿಸುತ್ತಾ "ಬೆಳವಣಿಗೆ ದರ 10% ಕ್ಕೇರಿದೆ, ಹಣದುಬ್ಬರ ಹತೋಟಿಯಲ್ಲಿದೆ" ಎಂಬ ರಿಝರ್ವ್‌ಬ್ಯಾಂಕ್ ಅಂಕಿ-ಸಂಖ್ಯೆಗಳು ಜನತೆ ಎದುರಿಸುತ್ತಿರುವ ಕಟು ವಾಸ್ತವತೆಗೆ ತದ್ವಿರುದ್ಧವಾಗಿದೆ ಎಂದು ಹೇಳಿರುವ ಪಾಲಿಟ್‌ಬ್ಯೂರೋ ಬೆಲೆಯೇರಿಕೆ ಮತ್ತು ನಿರುದ್ಯೋಗದ ವಿರುದ್ಧ ಸೆಪ್ಟಂಬರ್ 26ರಿಂದ 1ಕ್ಟೋಬರ್ 2ರ ವರೆಗೆ ಎಡ ಹಾಗೂ ವಿರೋಧ ಪಕ್ಷಗಳ ಸಹಕಾರದೊಂದಿಗೆ ಒಂದು ಸಾಮೂಹಿಕ ಹೋರಾಟ ಆರಂಭಿಸಬೇಕೆಂದು ಕರೆ ನೀಡಿದೆ.

ಇದಕ್ಕೆ ಮೊದಲು ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಬೆಲೆ ಏರಿಕೆಯ ಅನಾಹುತಕಾರಿ ಸನ್ನಿವೇಶದ

ಬೊಫೋರ್ಸ್ ತೋಪಿನ ಸದ್ದನ್ನೂ ಮುಳುಗಿಸಬಲ್ಲದು

ಮೇಲೆ ಗಮನ ಕೇಂದ್ರೀಕರಿಸಬೇಕೆಂದು ಕರೆ ನೀಡುತ್ತಾ ಹಸಿದ ಜನತೆಯ ಘರ್ಜನೆ ಬೊಫೋರ್ಸ್ ತೋಪಿನ ಸದ್ದನ್ನೂ ಮುಳುಗಿಸಬಲ್ಲದು ಎಂದು ವಿರೋಧ ಪಕ್ಷಗಳಿಗೆ ನೆನಪಿಸಿಕೊಟ್ಟಿತ್ತು.

ಕೃಷಿ ಉತ್ಪಾದನೆ 23% ಏರಿದೆ ಎನ್ನುತ್ತದೆ ರಿಝರ್ವ್ ಬ್ಯಾಂಕ್ ಅಂಕಿ-ಸಂಖ್ಯೆ. ಆಹಾರ ಧಾನ್ಯ ಉತ್ಪಾದನೆ 17.2 ಕೋಟಿ ಟನ್ ಎಂದಿದೆ ಅದು. ಇವೆಲ್ಲಾ ಎಲ್ಲಿ ಹೋಯಿತು? ಇಷ್ಟೊಂದು ಉತ್ಪಾದನೆಯಿದ್ದರೂ ದಿನಬೆಳಗಾದರೆ ಒಂದಿಲ್ಲೊಂದು ಸಾಮಗ್ರಿಯ ಬೆಲೆಯೇರಿಕೆಯ ಭಯದಲ್ಲಿ ಜನ ಬಾಳು ನೂಕುವಂತೆ ಏಕಾಗಬೇಕೆಂದು ಆ ಸಂಪಾದಕೀಯ ಪ್ರಶ್ನಿಸಿದೆ. ಯಾಕೆಂದರೆ ಹಸಿವನ್ನು ಕೂಡಾ ಲಾಭದ ಮೂಲವಾಗಿ ಪರಿವರ್ತಿಸಿಕೊಳ್ಳಲು ಅವಕಾಶವಿರುವ ಒಂದು ವ್ಯವಸ್ಥೆಯಲ್ಲಿ ಸರಕಾರ ಕೈಕಟ್ಟಿ ಕುಳಿತುಕೊಳ್ಳುತ್ತದೆ.

ರಾಜೀವಗಾಂಧಿಯದು ನಿಜವಾಗಿಯೂ ಒಂದು ಕಾರ್ಯಶೀಲ ಸರಕಾರ! ಏಕೆಂದರೆ ಬೊಫೋರ್ಸ್ ಹಗರಣ, 'ಹಿಂದೂ' ದಸ್ತಾವೇಜುಗಳು, ಸಿ.ಎ.ಜಿ. ವರದಿ, ಸುಂದರ್‌ಜೀ ಪ್ರಕಟಣೆ, ಸಬ್‌ಮೆರಿನ್ ಲಂಚ, ಸುಮಿತೋಮೋ ಲಂಚ, ಬಚ್ಚನ್‌ನ ಸ್ವಿಸ್ ಅಪಾರ್ಟ್‌ಮೆಂಟ್ ಇವೆಲ್ಲವನ್ನು ಮುಚ್ಚಿಹಾಕುವಲ್ಲಿ ಅದು 'ಕಾರ್ಯಶೀಲ'ವಾಗಿದೆ. ಆದ್ದರಿಂದ ಮಾರು ಕಟ್ಟೆಗೆ ಬೆಂಕಿ ಬಿದ್ದಿದ್ದರೆ, ಜನ ಅದರಿಂದ ಪರಿತಪಿಸುತ್ತಿದ್ದರೆ, ಬೆಂಕಿಯಾರಿಸಲು ಕೂಡ ಅದಕ್ಕೆ ಸಮಯವಾದರೂ ಎಲ್ಲಿದೆ ಎಂದು ಈ ಪಿ.ಡಿ. ಸಂಪಾದಕೀಯ ಗೇಲಿ ಮಾಡಿದೆ.

ಬೆಲೆಯೇರಿಕೆಯ ಪ್ರಶ್ನೆ ಎದುರಾದಾಗ ಕೇಂದ್ರ ಸರ್ಕಾರ ಅದಕ್ಕೆ ರಾಜ್ಯ ಸರಕಾರಗಳ ದುರಾಡಳಿತ ಕಾರಣ ಎನ್ನುತ್ತದೆ. ಆದರೆ 6863 ಕೋಟಿ ರೂ.ಗಳ ಅಧಿಕ ತೆರಿಗೆ ಹಾಕಿದ್ದು, ಕಳೆದ ಐದು ವರ್ಷಗಳಲ್ಲಿ ಹಲವು ಬಾರಿ ಬೆಲೆ ಏರಿಸಿದ್ದು, ಬಜೆಟ್ ಖೋತಾ 35574 ಕೋಟಿಗೇರಿದ್ದು ಯಾರಿಂದ? ಯಾವುದೇ ರಾಜ್ಯ ಸರ್ಕಾರ ಅಕ್ಕಿ, ಗೋಧಿ, ಸಕ್ಕರೆಯ ಬೆಲೆ ನಿರ್ಧರಿಸಬಲ್ಲದೇ? ಇದನ್ನೆಲ್ಲಾ ಮಾಡಿರುವುದು ಕೇಂದ್ರ ಸರ್ಕಾರ. ತನ್ನ ಹಕ್ಕುಗಳ ಪೂರ್ಣ ಗಮನವಿರುವ ಈ ಕೇಂದ್ರ ಸರ್ಕಾರ ಹಸಿದ ಜನತೆಯ ಬಗ್ಗೆ ಮಾತ್ರ ತನ್ನ ಕನಿಷ್ಠ ಕರ್ತವ್ಯವನ್ನು ಕೂಡಾ ನಿರ್ವಹಿಸುತ್ತಿಲ್ಲ. ಆಹಾರ ಧಾನ್ಯಗಳು ವಿಪುಲವಾಗಿದೆ. ಆದರೆ ಅದರ ನಡುವೆಯೇ ಜನ ಹಸಿವಿನಿಂದ ಕಂಗಾಲಾಗಿದ್ದಾರೆ. ಒರಿಸ್ಸಾದ ಕಾಳಹಂದಿ ಗ್ರಾಮದ ತಾಯಿಯೊಬ್ಬಳು ಹಸಿವು ತಾಳಲಾರದೆ ತನ್ನ ಮಗುವನ್ನು ನಲ್ವತ್ತು ರೂಪಾಯಿಗಳಿಗೆ ಮಾರುತ್ತಾಳೆ. ಅತ್ತ ಇಲ್ಲಿ ದರ್ಬಾರಿನಲ್ಲಿ ಒಂದು ಕಾರ್ಯಕ್ರಮಕ್ಕೆ ಕೋಟಿಗಟ್ಟಲೆ ಖರ್ಚು! ಇಂತಹ ಸರ್ಕಾರವೂ ಒಂದು ದಿನವಾದರೂ ಅಧಿಕಾರದಲ್ಲಿ ಮುಂದುವರಿಯುವ ಹಕ್ಕಿದೆಯೇ ಎಂದು ಪ್ರಶ್ನಿಸಿರುವ ಸಂಪಾದಕೀಯ ಬೆಲೆಯೇರಿಕೆ ವಿರುದ್ಧ ತೀವ್ರ ಸಾಮೂಹಿಕ ಹೋರಾಟದ ಅಗತ್ಯವನ್ನು ಒತ್ತಿಹೇಳಿದೆ.

ನ್ಯಾಯ ಸಮ್ಮತವಲ್ಲ

ಪುಟ 1 ರಿಂದ

ಅಧಿಕಾರಕ್ಕೆ ಬರಲಿಕ್ಕೆ ಪರಿಪಕ್ವವಾಗಿಲ್ಲವೆಂದು ರಾಜೀವಗಾಂಧಿಯವರಿಗೆ ಅನ್ನಿಸಿರಬಹುದಾದದ್ದು ಸ್ಪಷ್ಟ. ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಮುಂದುವರಿಸುವುದರ ವಿರುದ್ಧ ಪ್ರತಿಭಟನಾ ಚಳುವಳಿಯನ್ನು ಹೂಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನತಾದಳ, ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತಿತರ ಜಾತ್ಯಾತೀತ ಪ್ರಜಾಪ್ರಭುತ್ವ ಪಕ್ಷಗಳಿಗೆ ಕರೆ ಕೊಡುತ್ತದೆ ಎಂದು ಸಭೆಯ ನಂತರ ನೀಡಿದ ಪತ್ರಿಕಾ ಹೇಳಿಕೆ ತಿಳಿಸಿದೆ.

ಸಕ್ಕರೆ, ಎಣ್ಣೆ, ಮತ್ತಿತರ, ಅಗತ್ಯ ವಸ್ತುಗಳ ಬೆಲೆ ಏರುತ್ತಿರುವುದನ್ನು ತಡೆಹಿಡಿಯುವುದರಲ್ಲಿ ವಿಫಲವಾದ ಹಾಗೂ ಪಡಿತರ ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿ, ಗೋಧಿ, ಎಣ್ಣೆ ಇತ್ಯಾದಿ ಪದಾರ್ಥಗಳನ್ನು ಅತಿ ಕಡಿಮೆ ಸರಬರಾಜು ಮಾಡುತ್ತಿರುವ ರಾಜ್ಯಪಾಲರ ಆಡಳಿತವನ್ನು ಹೇಳಿಕೆ ಖಂಡಿಸಿದೆ.

ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 2ರವರೆವಿಗೆ ಸರ್ಕಾರಿ ಭೂಮಿಯನ್ನು ಸಿ ಮತ್ತು ಡಿ ಭೂಮಿಯನ್ನು ಅರಣ್ಯ ಭೂಮಿಯನ್ನು ಮಿಗತೆ ಭೂಮಿಯನ್ನು ಹಾಗೂ ಬಿನಾಮಿ ಭೂಮಿಯನ್ನು ಹಂಚುವಂತೆ ಸರ್ಕಾರವನ್ನು ಒತ್ತಾಯಿಸುವ ರಾಜ್ಯ ಭವನವನ್ನು ಸುತ್ತುವರಿದು ನುಗ್ಗುವ ರೈತರ ಆಂದೋಲನಕ್ಕೆ ಪಕ್ಷದ ಎಲ್ಲ ಘಟಕಗಳೂ ಬೆಂಬಲ ನೀಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಮಂಡಲಿ ಕರೆ ನೀಡಿದೆ.

ಸೆಪ್ಟೆಂಬರ್ 28ರ ಕೋಮು ಸೌಹಾರ್ದದ ದಿನವನ್ನು ಅದಕ್ಕೆ ಮೊದಲು ಒಂದು ವಾರ ಕಾಲಾವಧಿಯ ಪ್ರಚಾರ ಕೈಗೊಂಡು ಮತೀಯ ಹಿಂದೂ ಹಾಗೂ ಮುಸ್ಲಿಂ ಮೂಲಭೂತ ವಾದಿಗಳಿಂದಾಗುವ ಅಪಾಯವನ್ನು ಜನತೆಯ ಗಮನಕ್ಕೆ ತರುವಂತೆ ಆಚರಿಸಬೇಕೆಂದು ಎಲ್ಲ ಘಟಕಗಳಿಗೂ ಕರೆ ನೀಡಿರುವ ಕಾರ್ಯದರ್ಶಿ ಮಂಡಲಿ ಸಾಧ್ಯವಿದ್ದೆಡೆ, ಮಾನವ ಸರಪಳಿಯನ್ನು ರೂಪಿಸಿ ಕೋಮು ಸೌಹಾರ್ದತೆಯನ್ನು ಮತ್ತು ರಾಷ್ಟ್ರದ ಸಮಗ್ರತೆ ಮತ್ತು ಐಕ್ಯತೆಯನ್ನು ರಕ್ಷಿಸುವುದಾಗಿ ಪಣ ತೊಡಬೇಕೆಂದು ಕರೆಯಿತ್ತಿದೆ.

ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಗೆ ರಾಜ್ಯಪಾಲರು ಭೇಟಿ ನೀಡಿದ್ದ ಸಂದರ್ಭದಲ್ಲಿ, ವಿರೋಧ ಪಕ್ಷಗಳ ಮುಖಂಡರು ಸಲ್ಲಿಸಲಿದ್ದ ಮನವಿಯನ್ನು ಸ್ವೀಕರಿಸಲು ಅವರು ತಿರಸ್ಕಾರ ಮಾಡಿದ್ದನ್ನೂ ಕಾರ್ಯದರ್ಶಿ ಮಂಡಲಿ ಖಂಡಿಸಿದೆ.

ವಿರೋಧ ಪಕ್ಷಗಳ ಅಳ್ವಿಕೆಯ ರಾಜ್ಯಗಳ ವಿರುದ್ಧ ಕಾಂಗ್ರೆ ದುಷ್ಟ ಆಟಗಳ ಬಗ್ಗೆ ಎಚ್ಚರಿಕೆ

ಕಾಂಗ್ರೆಯೇತರ ಅಳ್ವಿಕೆಯ ರಾಜ್ಯಗಳ ವಿರುದ್ಧ ಕಾಂಗ್ರೆಸ್(ಐ) ಹಾಗೂ ಕೇಂದ್ರ ಸರ್ಕಾರ ಕಾಲುಕೆದರಿ ತಿಕ್ಕಾಟ ನಡೆಸುವ, ವಿಚ್ಛಿದ್ರಕಾರಿಯಾದ ನಿಲುವು ತಳೆಯುತ್ತಿದೆಯೆಂದು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಖಂಡಿಸಿದೆ. ಭಾರತ ಬಂದ್‌ನ ದಿನ ಕಾಂಗ್ರೆ ಜನಗಳು ಅಭೂತಪೂರ್ವ ಹಿಂಸಾಚಾರ ನಡೆಸಿದರು. ಇದಕ್ಕೆ ತ್ರಿಪುರಾ, ಪಶ್ಚಿಮ ಬಂಗಾಲ, ಕೇರಳಗಳಲ್ಲಿ 17 ಮಂದಿ ಬಲಿಯಾದರು. ಬಿಹಾರ ಪೋಲೀಸರು ಪಶ್ಚಿಮ ಬಂಗಾಳದ ಗಡಿಯೊಳಗಿದ್ದವರ ಮೇಲೆ ಗುಂಡು ಹಾರಿಸಿ [illegible] ಕೊಂದರು.

ಕಾಂಗ್ರೆಸ್(ಐ) ಹೇಗೆ ವಿರೋಧ ಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿ ಹಿಂಸಾಚಾರ ಸೃಷ್ಟಿಸಿ, ನಂತರ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕೆಂದು ಹುಯಿ[illegible]. ಕಾಂಗ್ರೆಯೇತರ ಸರಕಾರಗಳನ್ನು [illegible] ಹವಣಿಸುತ್ತಿದ್ದಾರೆ ಎಂದು ಇದರಿಂದ ಸ್ಪಷ್ಟವಾಗುತ್ತದೆ ಎಂದು ಪಾಲಿಟ್‌ಬ್ಯೂರೋ ವಿಶ್ಲೇಷಿಸಿದೆ.

ಆಂಧ್ರಪ್ರದೇಶದಲ್ಲಿ ನಕ್ಸಲೀಯರ ಪೀಪಲ್ಸ್‌ವಾರ್ ಗುಂಪಿನ ಭಯೋತ್ಪಾದಕ ಚಟುವಟಿಕೆಗಳನ್ನು ಎದುರಿಸುವಲ್ಲಿ ತೆಲುಗುದೇಶಂ ಸರಕಾರಕ್ಕೆ ಅಡಚಣೆ ಉಂಟು ಮಾಡುವಲ್ಲಿ ಕಾಂಗ್ರೆಸ್(ಐ) ದುಷ್ಟ ಆಟವಾಡುತ್ತಿದೆ. ತಮ್ಮ ಭಯೋತ್ಪಾದಕ ಚಟುವಟಿಕೆಗಳ ಮೂಲಕ ನಕ್ಸಲೀಯರು ಕಾಂಗ್ರೆನ ಅಸ್ಥಿರಗೊಳಿಸುವ ಏಜೆಂಟರಂತೆ ವರ್ತಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಭಯೋತ್ಪಾದನೆಯ ಈ ಸವಾಲನ್ನು ಎದುರಿಸುವಲ್ಲಿ ತೆಲುಗುದೇಶಂಸರ್ಕಾರಕ್ಕೆ ನೆರವಾಗುವ ಬದಲು ಸ್ಥಳೀಯ ಕಾಂಗ್ರೆ ಮಂದಿ ಜನತೆಯನ್ನು ಉದ್ರೇಕಗೊಳಿಸುವಂತೆ, ತೆಲುಗುದೇಶಂ ಸರ್ಕಾರವನ್ನು ಉರುಳಿಸುವಂತೆ ಒತ್ತಾಯಿಸಲು ಪ್ರೋತ್ಸಾಹ ನೀಡುತ್ತಿದೆ ಎಂದಿರುವ ಪಾಲಿಟ್‌ಬ್ಯೂರೋ ತೆಲುಗುದೇಶಂ ಸರಕಾರ ಕೂಡ ಬುಡಕಟ್ಟು ಜನರ ತಕ್ಷಣದ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕೆಂದು ಹೇಳಿದೆ. ನಕ್ಸಲೀಯರನ್ನು ಮುಖಾಮುಖಿಯಾಗಿ ಹಿಡಿಯುತ್ತೇವೆಂಬ ಹುಸಿ ಪ್ರಯತ್ನಗಳು, ನಕ್ಸಲೀಯರ ಅಪಹರಣಕ್ಕೆ ಪ್ರತಿಯಾಗಿ ಅಪಹರಣಗಳ ತಂತ್ರ ಕಾಂಗ್ರೆ-ನಕ್ಸಲೀಯ ಆಟಗಳಿಗೆ ನೆರವಾಗುವಿತ್ತವಷ್ಟೆ.

ತ್ರಿಪುರಾದಲ್ಲಿ ಟಿ.ಎನ್.ವಿ ಯನ್ನು ಎತ್ತಿಕಟ್ಟಿದ ಆಟದಂತೆ ಆಂಧ್ರಪ್ರದೇಶದಲ್ಲೂ ಭಯೋತ್ಪಾದಕ ಶಕ್ತಿಗಳಿಗೆ ಪ್ರೋತ್ಸಾಹ ನೀಡುವ ದುಷ್ಟ ಆಟ ನಡೆಸಬಾರದೆಂದು ಪಾಲಿಟ್‌ಬ್ಯೂರೋ ಕಾಂಗ್ರೆಸ್(ಐ)ಗೆ, ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಆಳುವ ಪಕ್ಷದ ಈ ಅಪಾಯಕಾರಿ ತಂತ್ರಗಳಿಗೆ ತಕ್ಕ ಉತ್ತರ ನೀಡಬೇಕೆಂದು ಕಾಂಗ್ರೆಯೇತರ ರಾಜ್ಯಗಳ ಎಲ್ಲಾ ಜನವಿಭಾಗಗಳಿಗೆ, ಸಮಸ್ತ ದೇಶದ ಪ್ರಜಾಪ್ರಭುತ್ವ ಶಕ್ತಿಗಳಿಗೆ ಪಾಲಿಟ್‌ಬ್ಯೂರೋ ಕರೆ ನೀಡಿದೆ.

ವಿದ್ಯಾರ್ಥಿ ಯುವ ಜನ ರಾಜ್ಯ ಸಮಾವೇಶ :

ರಾಜೀವ್ ನೀತಿ ವಿರುದ್ಧ ಐಕ್ಯ ಚಳುವಳಿಗೆಕರೆ

ಅನಕ್ಷರತೆ ನಿರುದ್ಯೋಗದಂತಹ ಗಂಭೀರ ಪಶ್ನೆಗಳ ಬಗ್ಗೆ ವೈಜ್ಞಾನಿಕ ಪರಿಹಾರ ಸೂಚಿಸದೇ ಜವಹರ ರೋಜಗಾರ್ ಯೋಜನೆ, ಹೊಸ ಶಿಕ್ಷಣ ನೀತಿ ಮೊದಲಾದ ಘೋಷಣೆಗಳಿಂದ ತೇಪೆ ಹಚ್ಚುವ ಕಾರ್ಯ ಮಾಡುತ್ತಿರುವ ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಪ್ರಬಲವಾದ ಐಕ್ಯ ಚಳುವಳಿ ರೂಪಿಸುವಂತೆ ಡಾ॥ ಜಿ. ರಾಮಕೃಷ್ಣ ಕರೆ ನೀಡಿದರು.

ಅವರು ಸೆಪ್ಟೆಂಬರ್ 21 ರಂದು ಬೆಂಗಳೂರಿನ ಗಾಂಧಿಭವನದಲ್ಲಿ ವಿದ್ಯಾರ್ಥಿ ಯುವ ಜನ ಸಂಘಟನೆಗಳು ಜಂಟಿಯಾಗಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ದೆಹಲಿಯಲ್ಲಿ ಸಮಾವೇಶಗೊಂಡ ಎಡ- ಜಾತ್ಯಾತೀತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಯುವ ಜನ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೀಡಿದ ಕರೆಯಂತೆ ರಾಜ್ಯದ ಡಿ.ವೈ.ಎಫ್.ಐ. ಎಸ್.ಎಫ್.ಐ, ಎ.ಐ.ವೈ.ಎಫ್ ಎ.ಐ.ಎಸ್.ಎಫ್ ಹಾಗೂ ಯುವ ಜನತಾದಳ, ವಿದ್ಯಾರ್ಥಿ ಜನತಾ ದಳಗಳು ಜಂಟಿಯಾಗಿ ಈ ಸಮಾವೇಶ ಸಂಘಟಿಸಿದ್ದವು.

ರಾಜ್ಯದ ಹಲವಾರು ಜಿಲ್ಲೆಗಳನ್ನು ಪ್ರತಿನಿಧಿಸಿ ಎಸ್.ಎಫ್.ಐ. ಹಾಗೂ ಡಿ.ವೈ.ಎಫ್.ಐನ ಸುಮಾರು 300 ಸೇರಿ 400 ಪ್ರತಿನಿಧಿಗಳು ಪಾಲ್ಗೊಂಡಿದ್ದರು.

21ನೇ ಶತಮಾನಕೊಯ್ಯುವ 'ಗರೀಬಿ ಹಠಾವೋ' 'ಬೇರೀಕಾರಿ ಮಿಠಾವೋ' ದಂತಹ ಮೋಹಕ ಘೋಷಣೆಗಳು ದೇಶದಲ್ಲಿ ಬೆಳೆಯುತ್ತಿರುವ 10 ಕೋಟಿಯಷ್ಟು ನಿರುದ್ಯೋಗ 65 % ದಷ್ಟು ಅನಕ್ಷರತೆ ಆಧುನಿಕ ತಂತ್ರಜ್ಞಾನದಿಂದ ಬೀದಿಪಾಲಾಗಿರುವ ದುಡಿಯುವ ಜನತೆ ಕಡಿತಗೊಳ್ಳುತ್ತಿರುವ ಅಭಿವೃದ್ಧಿ ಯೋಜನೆಗಳು ನೀತಿಗೆಟ್ಟ ಭ್ರಷ್ಟಾಚಾರಿ ರಾಜೀವ್ ಸರ್ಕಾರ ಎತ್ತ ಸಾಗಿದೆ ಎಂಬುದರ ದ್ಯೋತಕವಾಗಿದೆ.

ಜನತೆ ಚುನಾಯಿಸಿ ಅಧಿಕಾರಕ್ಕೆ ತಂದ ಸರ್ಕಾರಗಳನ್ನು ದರ್ಪದಿಂದ, ಮೋಸದಿಂದ, ಎಚ್ಚರಗೊಳಿಸುವ, ರಾಜ್ಯದ ಅಧಿಕಾರವನ್ನು ಕಸಿದುಕೊಂಡು ಮಾಡುವ ಕುಹಕ ತಂತ್ರ, ಪಂಚಾಯ್ತಿ ರಾಜ್ ನಗರಪಾಲಿಕೆ ಮಸೂದೆ ಮೂಲಕ ನೇರವಾಗಿ ಸರ್ವಾಧಿಕಾರಿ ಆಡಳಿತ ನಡೆಸಲು ಹವಣಿಸಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಾಂಗ್ರೆಸ್ ಮಾರಕವಾಗಿ ಪರಿಣಮಿಸಿದೆ.

ದೇಶದ ವಿವಿಧೆಡೆ ಎದ್ದಿರುವ ಕೋಮು ದಳ್ಳುರಿಗೆ ತುಪ್ಪ ಸುರಿದು ಸಮಯ ಸಾಧಕನಂತೆ ವರ್ತಿಸಿ ಹಿಂದೂ - ಮುಸ್ಲಿಂ ಜನಾಂಗದ ನಡುವೆ ವೈಮನಸ್ಯ ಬೆಳೆಯುವಂತೆ ಮಾಡುವಲ್ಲಿ ನಿರತರಾಗಿ ಚುನಾವಣಾ ಲಾಭಕ್ಕಾಗಿ ಅದನ್ನು ಬಳಸಿಕೊಳ್ಳುವ ಪ್ರವೃತ್ತಿ ರೂಪಿಸಿ ಕೊಂಡಿರುವ ಕಾಂಗ್ರೆಸ್ ನೀತಿ ದೇಶದ ಐಕ್ಯತೆ ಸಮಗ್ರತೆಗೆ ಗಂಡಾಂತರಕಾರಿಯಾದದ್ದು ಎಂದು ಸಮಾವೇಶ ಅಭಿಪ್ರಾಯಪಟ್ಟಿತು.

ಈ ದಿಶೆಯಲ್ಲಿ ಇಂದು ಗ್ರಾಮಾಂತರದಲ್ಲಿ ವಿದ್ಯಾರ್ಥಿ ಯುವ ಸಮುದಾಯಕ್ಕೆ ಬಾಧಿಸುತ್ತಿರುವ ದಿನನಿತ್ಯದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಬಲವಾದ ಹೋರಾಟವನ್ನು ರೂಪಿಸಲು ಕೆಳಹಂತದಿಂದ ತಯಾರಿ ನಡೆಸಬೇಕೆಂದು ಸಮಾವೇಶ ನಿರ್ಧರಿಸಿತು.

ಉದ್ಯೋಗ ನೇಮಕಾತಿ ಮೇಲಿನ ನಿರ್ಬಂಧ ಹಿಂತೆಗೆದುಕೊಳ್ಳಬೇಕು. ಖಾಲಿ ಇರುವ ಎಲ್ಲಾ ಹುದ್ದೆಗಳ ಭರ್ತಿ,

6ನೇ ಪುಟಕ್ಕೆ

Printed and published by P.Ramachandra Rao on behalf of Communist party of India (Marxist), Karnataka State Committee I-56
K.V Temple Street, Sultanpet, Bangalore - 560 053. Phone No. 75331. Editor: P.RAMACHANDRA...
Kriya Prakashana, Shobha Lodge Complex...